# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**
**(ತ್ರೈಮಾಸಿಕ ಪತ್ರಿಕೆ)**
**ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ –2025**
**ಸಂಪುಟ–VII ಸಂಖ್ಯೆ –4**


**ಪ್ರಕಟಣೆ:**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**
**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – VII ರ ನಾಲ್ಕನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2025ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್–2025ರ ಮಾಹೆಯ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ:02.04.2026

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀ ಬಿ.ಎ.ಸತೀಶ್ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಕಾರ್ಯದರ್ಶಿ–2

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

**ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್– 2025**

**ಸಂಪುಟ–VII ಸಂಖ್ಯೆ– 4**

## ಪರಿವಿಡಿ

## ಭಾಗ–1

## ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು | 3–34 |
| 2 | ಮಾಧ್ಯಮ– ರಾಜಕಾರಣ 2 ಕಣ್ಣು: ಖಾದರ್ | 35 |
| 3 | ಬೆಳಗಾವಿ ಅಧಿವೇಶನ: ಸಿದ್ಧತೆ ಪರಿಶೀಲಿಸಿದ ಸ್ಪೀಕರ್ | 35 |
| 4 | ನನ್ನ ವಿರುದ್ಧ ಅವಿಶ್ವಾಸ ಮಂಡಿಸಲು ಕಾರಣಗಳಿಲ್ಲ: ಬಸವರಾಜ ಹೊರಟ್ಟಿ | 35–36 |
| 5 | ಸದನದ ನಿರ್ಣಯಕ್ಕೆ ತಲೆಬಾಗುವೆ | 36 |
| 6 | ಭ್ರಷ್ಟಾಚಾರ ಸಾಬೀತು ಮಾಡಿದರೆ ರಾಜೀನಾಮೆ: ಹೊರಟ್ಟಿ ಹೇಳಿಕೆ | 36–37 |
| 7 | ಅಭಿನಂದನಾ ಕಾರ್ಯಕ್ರಮದಲ್ಲಿ ಸಿದ್ದು ಭಾಗಿ ಸಿಎಂ ಜತೆ ನನ್ನದು ಆಪ್ತ ಸ್ನೇಹ: ಹೊರಟ್ಟಿ | 37 |
| 8 | ಶಾಸಕರ ನಿಧನಕ್ಕೆ ಕಲಾಪ ಮುಂದಕ್ಕೆ ಇದೇ ಮೊದಲು | 37–38 |
| 9 | ಶಾಸಕರ ಕರೆ ಸ್ವೀಕರಿಸದಿದ್ದರೂ ಹಕ್ಕುಚ್ಯುತಿ | 38–39 |
| 10 | ಭೂ ಕಂದಾಯ ಕಾಯ್ದೆಗೆ ಮಹತ್ವದ ತಿದ್ದುಪಡಿ ಅಂಗೀಕಾರ | 39–40 |
| 11 | ಒಳಮೀಸಲು ವಿಧೇಯಕಕ್ಕೆ ಅಂಗೀಕಾರ | 40–41 |
| 12 | ಪರಿಷತ್ತಿನಲ್ಲಿ 5 ವಿಧೇಯಕಗಳ ಅಂಗೀಕಾರ | 41 |
| 13 | ದ್ವೇಷ ಭಾಷಣ ಪ್ರತಿಬಂಧಕ ಬಿಲ್ ಪಾಸ್ | 41 |
| 14 | ವಿಧಾನ ಪರಿಷತ್ ಸುದೀರ್ಘ 11.50 ತಾಸು ಕಲಾಪ | 41–42 |
| 15 | 10 ದಿನ, 58 ಗಂಟೆ ಕಲಾಪ:22 ವಿಧೇಯಕ ಮಂಡನೆ | 42 |

| ಭಾಗ–2<br>**ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು** | | |
|---|---|---|
| 1 | **ಕರ್ನಾಟಕ ವಿಧಾನ ಪರಿಷತ್ತಿನ 157ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ** | 45–46 |
| 2 | 2025–26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನ | 47–53 |
| 3 | ವಿಶೇಷ ಸದನ ಸಮಿತಿಯ ರಚನೆ | 54–55 |
| 4 | ವಿಶೇಷ ಸದನ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ | 56 |
| 5 | ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ | 57 |
| 6 | **16ನೇ ವಿಧಾನಸಭೆಯ 8ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ** | 58–60 |
| 7 | 2025–26ನೇ ಸಾಲಿನ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳ ರಚನೆ | 61–72 |
| 8 | ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ | 73 |
| 9 | Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ | 74 |
| 10 | 2025–26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ | 75 |

| ಭಾಗ–3<br>**ಸಂಸತ್ ಸುದ್ದಿಗಳು** | | |
|---|---|---|
| 1 | ಶಾಸನಸಭೆ ಅವಧಿ ಕಡಿತಗೊಳಿಸುವ ಅಧಿಕಾರ ಸಂಸತ್‌ಗಿದೆ ಎಂದ ಆಯೋಗ | 79 |
| 2 | ರಾಜಭವನಗಳ ಹೆಸರು ಇನ್ನು ಲೋಕಭವನ ಎಂದು ಬದಲು | 79–80 |
| 3 | ರಾಜಭವನ ಬಳಿಕ ಪ್ರಧಾನಿ ಕಚೇರಿಯ ಹೆಸರು ಬದಲು | 80 |
| 4 | RS clears Bill to impose cess on pan masala units | 80–81 |
| 5 | ಕೊಬ್ಬರಿಗೆ ಬೆಂಬಲ ಬೆಲೆ ₹445 ಹೆಚ್ಚಳ | 81–82 |
| 6 | 7 yrs later, OBC list awaits approval from Parliament | 82 |
| 7 | G RAM G to replace NREGA, guarantee 125 days of work | 82–84 |
| 8 | LS clears ₹41,455 crore for additional spending | 84 |
| 9 | Insurance Bill passed in LS; 100% FDI now a reality | 84–85 |
| 10 | ಸುಧಾ ಮೂರ್ತಿಗೆ ಲೋಕಮತ ಉತ್ತಮ ರಾಜ್ಯಸಭೆ ಪಟು ಪ್ರಶಸ್ತಿ | 85 |
| 11 | ಸಂಸತ್ತಿನ ಚಳಿಗಾಲದ ಅಧಿವೇಶನ: 10ರ ಪೈಕಿ 8 ಮಸೂದೆ ಪಾಸ್ | 86 |

| | ಭಾಗ–4<br>ಕೇಂದ್ರ ಸರ್ಕಾರ ಸುದ್ದಿಗಳು | |
|---|---|---|
| 1 | ಅಧಿಕಾರದಲ್ಲಿ ಮೋದಿ 25ನೇ ವರ್ಷಕ್ಕೆ ಪಾದಾರ್ಪಣೆ | 89 |
| 2 | Government notifies Digital Personal Data Protection Act | 89–90 |
| 3 | 2030ರ ಕಾಮನ್‌ವೆಲ್ತ್ ಗೇಮ್ಸ್‌ಗೆ ಭಾರತದ ಆತಿಥ್ಯ | 90 |
| 4 | ಜಿಎಸ್‌ಟಿ: ₹1.70 ಲಕ್ಷ ಕೋಟಿ ಸಂಗ್ರಹ | 91 |
| 5 | ಬ್ಯಾಂಕ್‌ಗಳಲ್ಲಿ ತ್ರಿಭಾಷಾ ಸೂತ್ರ ಕಡ್ಡಾಯ | 91–92 |
| 6 | Govt. withdraws order to install Sanchar Saathi app | 92–93 |
| 7 | With new Bill, demand-led job scheme set to turn supply-driven | 94 |
| 8 | Rajkumar Goyal takes oath as CIC; 8 more sworn in | 94 |
| 9 | ಪಿಎಂ ಕಿಸಾನ್‌ಗೆ ರೈತ ಐಡಿ | 94–95 |

| | ಭಾಗ–5<br>ರಾಜ್ಯ ಸರ್ಕಾರದ ಸುದ್ದಿಗಳು | |
|---|---|---|
| 1 | ಬೆಂಗಳೂರು ಕೃಷಿ ವಿ.ವಿ. ಐವರು ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ | 99 |
| 2 | ಭೂ ಪರಿವರ್ತಿತ ಜಮೀನು: ಬಡಾವಣೆ ವಿನ್ಯಾಸಕ್ಕೆ ಸುತ್ತೋಲೆ | 99–100 |
| 3 | 72 ಜನರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ | 100 |
| 4 | Digital Nagarik programme launched in govt. schools | 101 |
| 5 | ಸಿಎಂ ಆಗಿ 7.5 ವರ್ಷ ಪೂರೈಸಿದ ಸಿದ್ದು! | 101–102 |
| 6 | ಸಾಲುಮರದ ತಿಮ್ಮಕ್ಕ ಹೆಸರಲ್ಲಿ ಐವರಿಗೆ ಪ್ರಶಸ್ತಿ: ಸಿಎಂ | 102–103 |
| 7 | ನಕಲಿ ಔಷಧ ಮಾರಿದ್ರೆ ಬೇಲ್ ನಿರಾಕರಿಸುವ ಮಸೂದೆ ಸಿದ್ಧ | 103 |
| 8 | ಹಣಕಾಸು, ಆಡಳಿತದಲ್ಲಿ ದಕ್ಷತೆ | 103–104 |
| 9 | ರಾಜ್ಯದಲ್ಲಿ 'ಡಿಜಿಟಲ್ ಇ–ಸ್ಟ್ಯಾಂಪ್' ಜಾರಿ | 104–105 |
| 10 | 'ರಾಜಭವನ' ಅಲ್ಲ 'ಲೋಕಭವನ' | 105 |
| 11 | ಇ–ಖಾತಾದಲ್ಲಿ ಯುಪಿಒಆರ್ ಮಾಹಿತಿ | 105–106 |
| 12 | Karnataka readies legislation to provide menstrual leave | 106 |
| 13 | 1.8. ಲಕ್ಷ ಮಂದಿ ತೆರಿಗೆದಾರರು 'ಗೃಹಲಕ್ಷ್ಮೀ' ಫಲಾನುಭವಿಗಳು! | 106–107 |
| 14 | 6–6–5 ಒಳಮೀಸಲಿಗೆ ಕಾಯ್ದೆ: ಸಂಪುಟ ಅಸ್ತು | 107–108 |
| 15 | ತಲಾ ಆದಾಯದಲ್ಲಿ ರಾಜ್ಯವೇ ಪ್ರಥಮ: ಸಿಎಂ | 108 |

| | | |
|---|---|---|
| | **ಭಾಗ – 6**<br>**ನ್ಯಾಯಾಲಯ ಸುದ್ದಿಗಳು** | |


| | | |
|---|---|---|
| 1 | ತೆಲಂಗಾಣ ಮೀಸಲಾತಿ ಮೀಸಲಾತಿ ಹೆಚ್ಚಳಕ್ಕೆ ಸುಪ್ರೀಂ ಬ್ರೇಕ್ | 111 |
| 2 | ಶಿಕ್ಷಕರಿಗೆ ಸುಪ್ರೀಂ ರಿಲೀಫ್ | 111–112 |
| 3 | No appointments based on internal quota: HC | 112–113 |
| 4 | SIR exercise infringes voters' right to political expression, DMK tells SC | 113–114 |
| 5 | ಸಂಸತ್ತು ನಮ್ಮ ಎಲ್ಲ ಆದೇಶ ಬುಡಮೇಲು ಮಾಡಲಾಗದು: ಸುಪ್ರೀಂ | 114–115 |
| 6 | ಮಸೂದೆ ಸಹಿಗೆ ರಾಷ್ಟ್ರಪತಿ, ಗವರ್ನರ್‌ಗೆ ಕಾಲಮಿತಿ ಇಲ್ಲ | 115–116 |


| | | |
|---|---|---|
| | **ಭಾಗ – 7**<br>**ಹೊರರಾಜ್ಯ ಸುದ್ದಿಗಳು** | |


| | | |
|---|---|---|
| 1 | ಹಿಮಾಚಲದಲ್ಲಿ ಸಿಎಂ, ಸಚಿವರು, ಶಾಸಕರ ವೇತನ 25% ಹೆಚ್ಚಳ | 119 |
| 2 | 4 MLAs summoned in Telangana defection case | 119 |
| 3 | ಉ.ಪ್ರದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ 'ವಂದೇ ಮಾತರಂ' ಗಾಯನ ಕಡ್ಡಾಯ | 120 |
| 4 | ಮುಕುಲ್ ರಾಯ್ ಶಾಸಕತ್ವ ರದ್ದು | 120 |
| 5 | ತೆಲಂಗಾಣ ಸ್ಪೀಕರ್‌ಗೆ 'ಸುಪ್ರೀಂ' ನ್ಯಾಯಾಂಗ ನಿಂದನೆ ನೋಟಿಸ್ | 120–121 |
| 6 | Nitish starts 10th innings 24 on 'double-engine' wicket | 121 |
| 7 | Assam Bill to ban polygamy cleared; CM promises to bring in UCC next | 121–122 |
| 8 | ಉತ್ತರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ | 122 |


| | | |
|---|---|---|
| | **ಭಾಗ – 8**<br>**ಅಂತರಾಷ್ಟ್ರೀಯ ಸುದ್ದಿಗಳು** | |


| | | |
|---|---|---|
| 1 | ಶಕ್ತಿ ಯೋಜನೆಗೆ ವರ್ಲ್ಡ್ ರೆಕಾರ್ಡ್ ಕಿರೀಟ | 125 |
| 2 | ಮಾರಿಯಾಗೆ ನೊಬೆಲ್ ಶಾಂತಿ ಪುರಸ್ಕಾರ | 125–126 |
| 3 | ವೈಮಾನಿಕ ಶಕ್ತಿಯಲ್ಲಿ ಚೀನಾ ಹಿಂದಿಕ್ಕಿದ ಭಾರತಕ್ಕೆ 3ನೇ ಸ್ಥಾನ | 126 |
| 4 | ವಿದೇಶಿ ಸಂಸತ್ತಿನಲ್ಲಿ ಪ್ರಧಾನಿ ಮೋದಿ 18ನೇ ಭಾಷಣ | 126 |
| 5 | ಮೋದಿಗೆ 29ನೇ ಜಾಗತಿಕ ಗೌರವ | 127 |
| 6 | ಜಪಾನ್ ಹಿಂದಿಕ್ಕಿದ ಭಾರತ | 127–128 |

| | **ಭಾಗ – 09**<br>**ಪ್ರಮುಖ ಲೇಖನಗಳು** | |
|---|---|---|
| 1 | ಏಕತೆಯ ಶಕ್ತಿ: ಜಯಪ್ರಕಾಶ್ ನಾರಾಯಣ್ | 131–133 |
| 2 | A Wider SIR had momentum but it is still a test case | 133–135 |
| 3 | The lower judiciary-litigation | 135–138 |
| 4 | CAVILLING OPPN PERILLING DEMOCRACY | 138–141 |
| 5 | ಸಂವಿಧಾನವೇ ಜೀವನ ವಿಧಾನ | 141–143 |
| 6 | ಚುನಾವಣೆ: ಮತಗಟ್ಟೆ ವಶದಿಂದ ಎಸ್‌ಐಆರ್‌ವರೆಗೆ | 143–147 |

| | **ಭಾಗ – 10**<br>**ಶ್ರದ್ಧಾಂಜಲಿ** | |
|---|---|---|
| 1 | ಕೆ.ನರಹರಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 151 |
| 2 | ಹುಲ್ಲಪ್ಪ ಯಮನಪ್ಪ ಮೇಟಿ, ವಿಧಾನ ಸಭೆಯ ಮಾಜಿ ಸದಸ್ಯರು | 152 |
| 3 | ಶಿವಶರಣಪ್ಪಗೌಡ ಪಾಟೀಲ್, ವಿಧಾನ ಸಭೆಯ ಮಾಜಿ ಸದಸ್ಯರು | 153 |
| 4 | ಆರ್.ವಿ. ದೇವರಾಜ್, ವಿಧಾನ ಸಭೆಯ ಮಾಜಿ ಸದಸ್ಯರು | 154 |
| 5 | ಶಾಮನೂರು ಶಿವಶಂಕ್ರಪ್ಪ, ವಿಧಾನ ಸಭೆಯ ಮಾಜಿ ಸದಸ್ಯರು | 155–156 |


ಸೂಚನೆ:– ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.

ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

## ವಿಧಾನ ಮಂಡಲ ಸುದ್ದಿಗಳು

## 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## ಬಾರ್ಬಡೋಸ್ 68ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಸಮ್ಮೇಳನ

**i.** ಕೆರೆಬಿಯನ್ ಪೂರ್ವ ದ್ವೀಪ ರಾಷ್ಟ್ರವಾಗಿರುವ ಬ್ರಿಟಿಷ್ ಕಾಮನ್‌ವೆಲ್ತ್ ಗಣರಾಜ್ಯವಾಗಿರುವ ಬಾರ್ಬಡೋಸ್ ದೇಶದ ರಾಜಧಾನಿ ಬ್ರಿಡ್ಜ್ ಟೌನ್ ನಗರದಲ್ಲಿ ಅಕ್ಟೋಬರ್ 06 ರಿಂದ ಆರಂಭಗೊಂಡು ಅಕ್ಟೋಬರ್ 10ರವರೆಗೆ ನಡೆದ "68ನೇ ಕಾಮನ್‌ವೆಲ್ತ್ ಸಂಸದೀಯ ಸಮಾವೇಶ"ದಲ್ಲಿ ಲೋಕಸಭಾಧ್ಯಕ್ಷ ಶ್ರೀ ಓಂ ಬಿರ್ಲಾ, ರಾಜ್ಯಸಭೆಯ ಉಪಸಭಾಪತಿ ಹರಿವಂಶ, ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ, ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್, ಮತ್ತಿತರರು ಪಾಲ್ಗೊಂಡಿದ್ದಾರೆ.






**ii. ರಾಷ್ಟ್ರೀಯ ವಾಯುಯಾನ ಮತ್ತು ಬಾಹ್ಯಾಕಾಶ ಆಡಳಿತ ಕಛೇರಿಗೆ ಭೇಟಿ:**

ವಿಶ್ವದ ವಿವಿಧ ದೇಶಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ಸ್ಪೀಕರ್ ಕಾಮನ್‌ವೆಲ್ತ್ ಕಾನ್‌ಫೆರೆನ್ಸ್‌ನಲ್ಲಿ ಭಾಗವಹಿಸಲು ತೆರಳಿದ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಹಾಗೂ ಸಭಾಧ್ಯಕ್ಷ ಶ್ರೀ ಯು.ಟಿ.ಖಾದರ್‌ರವರು ಅಮೇರಿಕಾದಲ್ಲಿರುವ NASA (ರಾಷ್ಟ್ರೀಯ ವಾಯುಯಾನ ಮತ್ತು ಬಾಹ್ಯಾಕಾಶ ಆಡಳಿತ) ಕಛೇರಿಗೆ ಭೇಟಿ ನೀಡಿದರು.




**iii. ಬಾರ್ಬಡೋಸ್ ದೇಶದ ಪ್ರಧಾನ ಮಂತ್ರಿಯವರಾದ ಸನ್ಮಾನ್ಯ ಮಿಯಾ "ಮಾ" ಅಮೋರ್ ಮೊಟ್ಲಿ–ಭೇಟಿ:**

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ದಿನಾಂಕ:09.10.2025ರಂದು 68ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಸಮ್ಮೇಳನದಲ್ಲಿ ಭಾಗವಹಿಸಲು ಬಾರ್ಬಡೋಸ್‌ಗೆ ಅಧಿಕೃತ ಭೇಟಿ ನೀಡಿದ ಸಂದರ್ಭದಲ್ಲಿ ಬಾರ್ಬಡೋಸ್ ದೇಶದ ಪ್ರಧಾನಮಂತ್ರಿಯವರಾದ ಸನ್ಮಾನ್ಯ **ಮಿಯಾ "ಮಾ" ಅಮೋರ್ ಮೊಟ್ಲಿ** ಅವರನ್ನು ಭೇಟಿಯಾದ ಸಂದರ್ಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ ಉಪಸ್ಥಿತರಿದ್ದರು.



**iv. ವೆಸ್ಟ್ ಇಂಡೀಸ್‌ನ ಪ್ರಖ್ಯಾತ ಕೇವ್ ಹಿಲ್ ಯೂನಿವರ್ಸಿಟಿ ಕ್ಯಾಂಪಸ್‌ಗೆ ಭೇಟಿ:**

ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ ರವರು ಮತ್ತು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ದಿನಾಂಕ:09.10.2025 ರಂದು 68ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಸಮ್ಮೇಳನದಲ್ಲಿ ಭಾಗವಹಿಸಲು ಬಾರ್ಬಡೋಸ್‌ಗೆ ಅಧಿಕೃತ ಭೇಟಿ ನೀಡಿದ್ದ ಸಂದರ್ಭದಲ್ಲಿ ವೆಸ್ಟ್ ಇಂಡೀಸ್‌ನ ಪ್ರಖ್ಯಾತ ಕೇವ್ ಹಿಲ್ ಯೂನಿವರ್ಸಿಟಿ ಕ್ಯಾಂಪಸ್‌ಗೆ ಭೇಟಿ ನೀಡಿದರು.





**v. ಬಾರ್ಬಡೋಸ್ ರಾಷ್ಟ್ರೀಯ ಅಸೆಂಬ್ಲಿಗೆ ಭೇಟಿ:**

68ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವ ನೇತೃತ್ವದಲ್ಲಿ ಬಾರ್ಬಡೋಸ್ ರಾಷ್ಟ್ರೀಯ ಅಸೆಂಬ್ಲಿಗೆ ಭೇಟಿ.




**vi. ನಾರ್ವೆ ಸಂಸತ್ತಿಗೆ ಭೇಟಿ:**

68ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿ, ಸಮ್ಮೇಳನದ ನಂತರದ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ದಿನಾಂಕ:21.10.2025ರಂದು 1814ರಲ್ಲಿ ಸ್ಥಾಪಿತವಾದ ವಿಶ್ವದ ಅತ್ಯಂತ ಹಳೆಯ ಪ್ರಜಾಪ್ರಭುತ್ವ ಸಂಸತ್ತುಗಳಲ್ಲಿ ಒಂದಾದ ನಾರ್ವೆ ಸಂಸತ್ತಿಗೆ

ಸನ್ಮಾನ್ಯ ಸಭಾಧ್ಯಕ್ಷರು ಭೇಟಿ ನೀಡಿದ ಸಂದರ್ಭದಲ್ಲಿ ನಾರ್ವೆಯ ಮಾಜಿ ಸಚಿವರೂ ಹಾಗೂ ಮಾಜಿ ಸಂಸದರೂ ಆಗಿದ್ದ ಶ್ರೀ ಹಿಮಾಂಶು ಗುಲೇಟ್ ಅವರೊಂದಿಗೆ ವಿಚಾರ ವಿನಿಮಯ ನಡೆಸಿ, ನಾರ್ವೆಯ ಇತಿಹಾಸ, ಸಂವಿಧಾನ, ಆಡಳಿತ ವ್ಯವಸ್ಥೆ ಹಾಗೂ ಜನಪರ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ, ಎರಡೂ ರಾಷ್ಟ್ರಗಳ ಸಂಸತ್ತಿನ ಕಾರ್ಯನಿರ್ವಹಣಾ ವಿಧಾನಗಳು, ಜನತಾಂತ್ರಿಕ ಪ್ರಕ್ರಿಯೆಗಳ ವಿನ್ಯಾಸ ಹಾಗೂ ಸಂಸದೀಯ ಅಧಿವೇಶನಗಳ ನಿರ್ವಹಣೆ ಕುರಿತಂತೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು.








**vii. ಪೋರ್ಚುಗಲ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿಯ ಮುಖ್ಯಸ್ಥ ಶ್ರೀ ಪುನೀತ್ ಕುಂದನ್‌ರ ಭೇಟಿ:**

68ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿ, ಸಮ್ಮೇಳನದ ನಂತರದ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ಪೋರ್ಚುಗಲ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿಯ ಮುಖ್ಯಸ್ಥ ಶ್ರೀ ಪುನೀತ್ ಕುಂದನ್‌ರವರು ಭೇಟಿ ಮಾಡಿ, ಭೌಗೋಳಿಕವಾಗಿ ಪೋರ್ಚುಗಲ್‌ನಂತಿರುವ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯ ಕುರಿತಾಗಿ ವಿಚಾರ ವಿನಿಮಯ ಮಾಡಿಕೊಂಡರು.





**viii. ಸ್ಪೇನ್‌ನ ಬಾರ್ಸಿಲೋನಾದಲ್ಲಿರುವ, ಬೆಸಿಲಿಕಾಕ್ಕೆ ಭೇಟಿ:**

68ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿ, ಸಮ್ಮೇಳನದ ನಂತರದ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ದಿನಾಂಕ:27.10.2025ರಂದು ಇತಿಹಾಸ ಪ್ರಸಿದ್ಧ ಸ್ಪೇನ್‌ನ ಬಾರ್ಸಿಲೋನಾದಲ್ಲಿರುವ ಸಗ್ರಾಡಾ ಫ್ಯಾಮಿಲಿಯಾ ಅದ್ಭುತ ಹಾಗೂ ಆಕರ್ಷಕ ಬೆಸಿಲಿಕಾಕ್ಕೆ ಭೇಟಿ ನೀಡಿದರು.

(1882ರಲ್ಲಿ ವಾಸ್ತುಶಿಲ್ಪಿ ಫ್ರಾನ್ಸಿಸ್ಕೊ ಡಿ ಪೌಲಾ ಡೆಲ್ ವಿಲ್ಲಾರ್ ಅವರ ನಿಯೋ–ಗೋಥಿಕ್ ವಿನ್ಯಾಸದೊಂದಿಗೆ ಆರಂಭವಾದ ಈ ದೇವಾಲಯಕ್ಕೆ 1883ರಲ್ಲಿ ಆಂಟೋನಿ ಗೌಡಿಯವರು ಪ್ರಕೃತಿ, ಬೆಳಕು ಮತ್ತು ಭಾವನಾತ್ಮಕ ಸಂಕೇತಗಳ ಮೂಲಕ ಜೀವ ತುಂಬಿದರು. ಇಂದಿಗೂ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವ ಈ ಸ್ಮಾರಕವು ಮುಂದಿನ ಹತ್ತು ವರ್ಷಗಳಲ್ಲಿ ಪೂರ್ಣಗೊಳ್ಳುತ್ತದೆ ಎಂಬ ಮಾಹಿತಿಯಿದೆ).



## ಮುಖ್ಯಮಂತ್ರಿಗಳ ಭೇಟಿ

ದಿನಾಂಕ:21.10.2025ರಂದು ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಅವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಗೃಹ ಸಚಿವರಾದ ಶ್ರೀ ಪರಮೇಶ್ವರ ಹಾಗೂ ಇತರರು ಉಪಸ್ಥಿತರಿದ್ದರು.





## ಮಾನ್ಯ ಸಭಾಪತಿ ಬಸವರಾಜ ಎಸ್. ಹೊರಟ್ಟಿರವರಿಂದ ದೀಪಾವಳಿ ಶುಭಾಶಯಗಳು

ದಿನಾಂಕ:21.10.2025ರಂದು ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರು ನಾಡಿನ ಸಮಸ್ತ ಜನತೆಗೆ ದೀಪಾವಳಿಯ ಪ್ರಯುಕ್ತ ಕರ್ನಾಟಕದ ದೀಪದ ಬೆಳಕಿನಂತೆ ಸಂತೋಷ ತರಲಿ ಮತ್ತು ಜೀವನ ಆನಂದಮಯವಾಗಲಿ ಎಂದು ಬೆಳಕಿನ ಹಬ್ಬ ನರಕ ಚತುರ್ದರ್ಶಿ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು ಕೋರಿರುತ್ತಾರೆ.


ಮಾನ್ಯರು ತಮ್ಮ ಧರ್ಮಪತ್ನಿ ಸಮೇತರಾಗಿ ಅಧಿಕೃತ ವಸತಿ ಗೃಹ ಕುಮಾರ ಕೃಪಾದಲ್ಲಿ ನಾಡಿನ ಒಳಿತಿಗಾಗಿ, ನಾಡಿನ ಜನತೆಯಲ್ಲಿ ಸುಖ, ಶಾಂತಿ, ಸಮೃದ್ದಿಯನ್ನು ದೇವರು ಕರುಣಿಸಲಿ ಎಂದು ಹಾರೈಸಿ ಭಕ್ತಿಪೂರ್ವಕವಾಗಿ ಮತ್ತು ಶುಭ್ರತೆಯಿಂದ ಲಕ್ಷ್ಮಿ ಪೂಜೆಯನ್ನು ನೆರವೆರಿಸಿದರು.



## ವಿಕಾಸಸೌಧದಲ್ಲಿ "ನೂರು ಕಾನೂನುಗಳು–ನೂರು ಅಭಿಪ್ರಾಯಗಳು" ಸಂಪುಟಗಳ ಲೋಕಾರ್ಪಣೆ

ದಿನಾಂಕ:30.10.2025ರಂದು ವಿಕಾಸಸೌಧದಲ್ಲಿ ಪ್ರೊ.ಸಿ.ಎಸ್. ಪಾಟೀಲ್, ನಿರ್ದೇಕಶಕರು undefined ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ವತಿಯಿಂದ ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ **"ನೂರು ಕಾನೂನುಗಳು–ನೂರು ಅಭಿಪ್ರಾಯಗಳು"** ಸಂಪುಟಗಳ ಲೋಕರ್ಪಣೆ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಹಾಗೂ ಅಧಿಕಾರಿ–ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.







## ಕನ್ನಡ ರಾಜ್ಯೋತ್ಸವ

ದಿನಾಂಕ:01.11.2025ರಂದು ಕನ್ನಡ ರಾಜ್ಯೋತ್ಸವದ ಅಂಗವಾಗಿ ತಾಯಿ ಕನ್ನಡಾಂಬೆ ಭುವನೇಶ್ವರಿ ದೇವಿಗೆ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸರ್ಕಾರದ ಮುಖ್ಯಕಾರ್ಯರ್ಶಿ ಡಾ.ಶಾಲಿನಿ ರಜನೀಶ್‌ರವರು ಪುಷ್ಪನಮನ ಸಲ್ಲಿಸಿದ ಸಂದರ್ಭದಲ್ಲಿ ಸಚಿವರು, ಶಾಸಕರು ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.







## ವಿಧಾನಸೌಧದಲ್ಲಿ ಔತಣಕೂಟ

ಮಾನ್ಯ ಮುಖ್ಯಮಂತ್ರಿಯವರು ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಏರ್ಪಡಿಸಿದ್ದ ಔತಣಕೂಟದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಸಚಿವರು, ಶಾಸಕರು ಹಾಗೂ ಇತರರು ಸವಿಯಾದ ಭೋಜನ ಸವಿದರು.





## ಸೌಹಾರ್ದ ಭೇಟಿ

ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ ಅವರ ಸೌಹಾರ್ದ ಭೇಟಿ.



## ಕರ್ನಾಟಕ ರಾಜ್ಯೋತ್ಸವ ರಜತ ಸಂಭ್ರಮ

ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:09.11.2025ರಂದು ಕರ್ನಾಟಕ ಸಂಘ ಕತಾರ್ ವತಿಯಿಂದ ದೋಹಾ ಕತಾರ್‌ನ ನ್ಯೂ ಐಡಿಯಲ್ ಇಂಡಿಯನ್ ಸ್ಕೂಲ್‌ನಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ರಜತ ಸಂಭ್ರಮ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದರು.





# "ಏಕ ಭಾರತ್ ಶ್ರೇಷ್ಠ ಭಾರತ" ಪರ್ವ – 2025

ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಅಂಗವಾಗಿ ನವೆಂಬರ್ 1 ರಿಂದ ನವೆಂಬರ್ 15ರವರೆಗೆ ನಡೆಯುತ್ತಿರುವ **"ಏಕ ಭಾರತೀ ಶ್ರೇಷ್ಠಭಾರತ"** ಎಂಬ ಭಾರತ ಪರ್ವ ಆಚರಣೆಯಲ್ಲಿ ಭಾಗವಹಿಸಿದ ಮಾನ್ಯ ವಿಧಾನಪರಿಷತ್ತಿನ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಭಾರತ ಸರ್ಕಾರದ ಸಹಯೋಗದೊಂದಿಗೆ ಗುಜರಾತ್ ಸರ್ಕಾರವು ಆಯೋಜಿಸಿರುವ ಭಾರತ ಪರ್ವ 2025ರ ಭವ್ಯ ಆಚರಣೆಯು ಭಾರತದ ಆತ್ಮದ ಆಚರಣೆಯಾಗಿರುತ್ತದೆ. ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತದ ಪ್ರದೇಶದ ಬಣ್ಣಗಳು, ಸಂಪ್ರದಾಯಗಳು ಮತ್ತು ಭಾವನೆಗಳನ್ನು ಒಟ್ಟುಗೂಡಿಸುತ್ತದೆ. ಭಾರತೀಯರಾಗಿ ನಮ್ಮ ಆತ್ಮವೂ ಒಂದು ಬಲವಾದ ಒಗ್ಗಟ್ಟಿನ ಮತ್ತು ಶಾಶ್ವತವಾಗಿ ಉಳಿದಿದೆ ಎಂದು ತಿಳಿಸಿದರು.









1947ರಲ್ಲಿ ಆಗಿನ ಮೈಸೂರು ಮಹಾರಾಜರಾದ ಹಾಗೂ ಅಖಂಡ ಭಾರತದ ಕಲ್ಪನೆಯ ಬೆಂಬಲಿಗರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರಾಜ್ಯಪ್ರಭುತ್ವದ ರಾಜ್ಯಗಳ ಏಕೀಕರಣಕ್ಕಾಗಿ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರು ಅವರಿಗೆ ತಮ್ಮ ವೈಯಕ್ತಿಕ ನೊಂದಣಿ ಹೊಂದಿರುವ ಡಿಸಿ–3 ಡಕೋಟಾ VT-AXX ವಿಮಾನವನ್ನು ಉಡುಗೊರೆಯಾಗಿ ನೀಡಿರುತ್ತಾರೆ. ಸದರಿ ವಿಮಾನವು ಗಂಟೆಗೆ 333 ಕಿಲೋಮೀಟರ್ ವೇಗದಲ್ಲಿ ಪ್ರಯಾಣಿಸಬಹುದಾದ ಹಾಗೂ 2400 ಕಿಲೋಮೀಟರ್‌ಗಳ ವ್ಯಾಪ್ತಿ ಉಳ್ಳದಾಗಿದ್ದು ಹಾಗೂ ಕಿರಿದಾದ ಮತ್ತು ಮಣ್ಣು ತುಂಬಿದ ರನ್‌ವೇಗಳ ಮೇಲೆ ಇಳಿಯುವ ಸಾಮರ್ಥ್ಯವಿದ್ದ ಕಾರಣದಿಂದಾಗಿ ಭಾರತದ ಸವಾಲಿನ ಭೌಗೋಳಿಕ ಪರಿಸ್ಥಿತಿಗೆ ಅತ್ಯಂತತಕ್ಕದಾಗಿತ್ತು.

ಸದರಿ ವಿಮಾನದ ಸಹಾಯದಿಂದ ರಾಜ್ಯ ಪ್ರಭುತ್ವವುಳ್ಳ ಸಂಸ್ಥಾನಗಳನ್ನು ಏಕೀಕರಿಸಿರುವುದಕ್ಕಾಗಿ ಭಾರತದ ಉಕ್ಕಿನ ಮನುಷ್ಯ ಎಂದು ಪ್ರಸಿದ್ಧಿ ಹೊಂದಿರುವ ಭಾರತದ ಮೊದಲ ಉಪಪ್ರಧಾನಿ ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಅನುಕೂಲವಾಗಿತೆಂದು ಈ ಸಂದರ್ಭದಲ್ಲಿ ಮಾನ್ಯರು ಉಲ್ಲೇಖಿಸುತ್ತಾ ಭಾರತದ ಏಕೀಕರಣಕ್ಕೆ ಮೈಸೂರು ಮಹಾರಾಜರ ಉಡುಗೊರೆ ಹಾಗೂ ಇದರ ಸಹಾಯದಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಮಾಡಿರುವ ಭಾರತದ ಏಕೀಕರಣ ಅತ್ಯಂತ

ಪ್ರಶಂಸನೀಯ ಮತ್ತು ಶಾಶ್ವತವಾದಂತ ಐತಿಹಾಸಿಕ ಘಟನೆಯಾಗಿರುತ್ತದೆ ಎಂದು ಮಾನ್ಯರು ಉಲ್ಲೇಖಿಸಿರುವುದನ್ನು ಭಾರತ ಪರ್ವ ಆಚರಣೆಯ ಸಭೆಯಲ್ಲಿ ಗಣ್ಯರು ಹರ್ಷೋದ್ಗಾರ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.

## ಕರ್ನಾಟಕ ಬವೇರಿಯಾ ಸಂಸತ್ತಿನ ಸಂವಾದ: ಅನುಭವ ಮಂಟಪ ಉಡುಗೊರೆ

ದಿನಾಂಕ:17.11.2025ರಂದು ಬವೇರಿಯನ್ ರಾಜ್ಯ ಸಂಸತ್ತಿನ ಪ್ರೆಸಿಡಿಯಂ ನಿಯೋಗದೊಂದಿಗೆ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹಾಗೂ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀಯು.ಟಿ.ಖಾದರ್ ಅವರು ಸಂವಾದಾತ್ಮಕ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಬವೇರಿಯನ್ ರಾಜ್ಯ ಸಂಸತ್ತಿನ ಪ್ರೆಸಿಡಿಯಂ ನಿಯೋಗದವರಿಗೆ 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪಿತವಾದ ಜಗತ್ತಿನ ಮೊದಲ ಸಂಸತ್ತಿನ ಮಾದರಿಯಾದ **"ಅನುಭವ ಮಂಟಪವನ್ನು"** ಉಡುಗೊರೆಯಾಗಿ ನೀಡಿದರು.





## ರಾಷ್ಟ್ರೀಯ ಪತ್ರಿಕಾ ದಿನಾಚರಣೆ – 2025

ಕರ್ನಾಟಕ ಪತ್ರಿಕಾ ಅಕಾಡೆಮಿ ಮತ್ತು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ದಿನಾಂಕ:17.11.2025ರಂದು ಬೆಂಗಳೂರಿನ ಪ್ರೆಸ್ ಕ್ಲಬ್ ಆವರಣದಲ್ಲಿ ನಡೆದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ 2025 ಕಾರ್ಯಕ್ರಮವನ್ನು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ಉದ್ಘಾಟಿಸಿ ಶುಭ ಹಾರೈಸಿದರು.








## ಸಭಾಧ್ಯಕ್ಷರ ಸ್ಮರಣಿಕೆ

ದಿನಾಂಕ:17.11.2025ರಂದು ಸನ್ಮಾನ್ಯ ಸಭಾಧ್ಯಕ್ಷರು ಸನ್ಮಾನ್ಯ ರಾಜ್ಯಪಾಲರನ್ನು ರಾಜಭವನ ಬೆಂಗಳೂರಿನಲ್ಲಿ ಔಪಚಾರಿಕವಾಗಿ ಭೇಟಿ ಮಾಡಿ ಚರ್ಚಿಸಿದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆದ 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನದ ಜ್ಞಾಪಕಾರ್ಥ ಸ್ಮರಣಿಕೆಯನ್ನು ನೀಡಿದರು.







## ಸಭಾಪತಿಯವರಿಂದ ಪ್ರಾಚ್ಯಪ್ರಜ್ಞೆ ಬಹುಮಾನ ವಿತರಣೆ

ದಿನಾಂಕ:25.11.2025ರಂದು ಸಭಾಂಗಣ ಭವನ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗ್ರಾಮ ಗಂಗೋತ್ರಿ, ನಾಗಾವಿ, ಗದಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಶಾಲಾ ಶಿಕ್ಷಣ ಮತ್ತು ಗದಗ ವಿಶ್ವವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ "ಪ್ರಾಚ್ಯಪ್ರಜ್ಞೆ" ರಾಜ್ಯ ಮಟ್ಟದ ಸ್ಪರ್ಧೆ ಮತ್ತು ಸ್ಪರ್ಧಾ ವಿಜೇತರಿಗೆ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಬಹುಮಾನ ವಿತರಣೆ ಮಾಡಿದರು.









## ಸಭಾಪತಿ ಹೊರಟ್ಟಿ ಅವರಿಂದ ಸಂವಾದ

ದಿನಾಂಕ:26.11.2025ರಂದು ನವಲಗುಂದದ ಮಾಡೆಲ್ ಹೈಸ್ಕೂಲ್ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಸಿಬ್ಬಂದಿಗಳೊಂದಿಗೆ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಸಂವಾದ ನಡೆಸಿದರು.





## ಅಭಿನಂದನಾ ಕಾರ್ಯಕ್ರಮ

ಕರ್ನಾಟಕ ವಿಧಾನಪರಿಷತ್ತಿನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಅಧಿಕಾರಿ ಮತ್ತು ನೌಕರರ ಒಟ್ಟು 28 ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆ.ಇ.ಎ) ಮೂಲಕ ಲಿಖಿತ ಪರೀಕ್ಷೆ ನಡೆಸಿ ಅತ್ಯಂತ ಪಾರದರ್ಶಕವಾಗಿ ನೇರನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಗೊಂದಲಗಳಿಗೆ ಆಸ್ಪದ ನೀಡದೆ ನಿಯಮಾನುಸಾರ ನಡೆಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ತಮ್ಮ ಕೊಠಡಿಯಲ್ಲಿ ಅಭಿನಂದನೆ ಸಲ್ಲಿಸಿದರು.





# ಸನ್ಮಾನ್ಯ ಸಭಾಧ್ಯಕ್ಷರಿಗೆ ಡಾಕ್ಟರೇಟ್ ಪ್ರದಾನ ಸಮಾರಂಭ

ದಿನಾಂಕ:27.11.2025ರಂದು ವಿಶ್ವವಿದ್ಯಾಲಯದ ವತಿಯಿಂದ 60ನೇ ಘಟಿಕೋತ್ಸವದ ಅಂಗವಾಗಿ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ನೀಡಲಾಗಿರುವ ಡಾಕ್ಟರ್ ಆಫ್ ಲೆಟರ್ಸ್(ಡಿ.ಲಿಟ್.) ಗೌರವ ಪದವಿಯನ್ನು ರಾಜಭವನದ ಬಾಂಕ್ವೆಟ್ ಹಾಲ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರದಾನ ಮಾಡಿದರು. ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ್ ಎಸ್.ಎಂ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.







ಗೌರವಾನ್ವಿತ ರಾಜ್ಯಪಾಲರು "ಡಾಕ್ಟರ್ ಆಫ್ ಲೆಟರ್ಸ್ (ಡಿ.ಲಿಟ್.) ಎಂಬ ಪ್ರತಿಷ್ಠಿತ ಮತ್ತು ಗೌರವಾನ್ವಿತ ಬಿರುದನ್ನು ಪಡೆದಿರುವುದು ನಿಮ್ಮ ವಿದ್ವತ್ತು ಮತ್ತು ಸಮಾಜ, ರಾಜ್ಯ ಮತ್ತು ರಾಷ್ಟ್ರಕ್ಕೆ ನೀಡಿದ ಕೊಡುಗೆಗಳಿಗೆ ದೊರೆತ ಅತ್ಯುನ್ನತ ಮನ್ನಣೆಯಾಗಿದೆ. ಈ ಪದವಿ ನಿಮ್ಮ ನಿರಂತರ ಕೆಲಸ, ಸೃಜನಶೀಲತೆ ಮತ್ತು ಅತ್ಯುತ್ತಮ ಬೌದ್ಧಿಕ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ನೀವು ಪ್ರತಿಷ್ಠಿತ ಮತ್ತು ಜನಪ್ರಿಯ ರಾಜಕೀಯ ಕುಟುಂಬದಿಂದ ಬಂದಿದ್ದರೂ, ವೈಯಕ್ತಿಕ ಕೆಲಸ, ಸರಳತೆ ಮತ್ತು ಜನರಲ್ಲಿ ನಿರಂತರ ಸಕ್ರಿಯ ಉಪಸ್ಥಿತಿಯ ಮೂಲಕ ನಿಮ್ಮ ಛಾಪು ಮೂಡಿಸಿದ್ದೀರಿ" ಎಂದು ಹೇಳುವ ಮೂಲಕ ಯು.ಟಿ.ಖಾದರ್ ಅವರನ್ನು ಅಭಿನಂದಿಸಿದರು.

"ವಿದ್ಯಾರ್ಥಿ ದಿನಗಳಿಂದಲೇ, ಯುವ ಸಂಘಟನೆಗಳು ಮತ್ತು ಸಾಮಾಜಿಕ ಚಟುವಟಿಕೆಗಳ ಮೂಲಕ ಸಾರ್ವಜನಿಕ ಜೀವನವನ್ನು ಗುರಿಯಾಗಿಸಿಕೊಂಡು ಮತ್ತು ಕ್ರಮೇಣ ಕರ್ನಾಟಕ ರಾಜಕೀಯದಲ್ಲಿ ಬಲಿಷ್ಠ, ಸೂಕ್ಷ್ಮ ಮತ್ತು ವಿಶ್ವಾಸಾರ್ಹ ನಾಯಕನಾಗಿ ಹೊರಹೊಮ್ಮಿರುವ ಯು.ಟಿ.ಖಾದರ್ ಅವರು, ಸತತವಾಗಿ ಐದು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಇದು ಸಾರ್ವಜನಿಕರ ನಂಬಿಕೆ ಮತ್ತು ನಿಮ್ಮ ನಿರಂತರ ಸಂಪರ್ಕಕ್ಕೆ ಸಾಕ್ಷಿಯಾಗಿದೆ. ವಿಧಾನಸಭೆಯ ಸ್ಪೀಕರ್ ಆಗಿ, ಸಂವಾದ, ಸಹಿಷ್ಣುತೆ ಮತ್ತು ಸಾಮರಸ್ಯದ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದೀರಿ. ವಿಧಾನಸಭೆಯ ಕಲಾಪಗಳನ್ನು ನಡೆಸುವ ಮೂಲಕ, ಅಭಿಪ್ರಾಯ ವ್ಯತ್ಯಾಸಗಳಿದ್ದರೂ, ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ನಮ್ಮ ಬದ್ಧತೆ ಯಾವಾಗಲೂ ಅಚಲವಾಗಿರಬೇಕು ಎಂದು ನೀವು ಪ್ರದರ್ಶಿಸಿದ್ದೀರಿ. ಅವರ ವಿವಿಧ ಆಯಾಮಗಳನ್ನು ಮುಟ್ಟಿರುವ ಗಂಭೀರತೆ, ಸೂಕ್ಷ್ಮತೆ ಮತ್ತು ನಾವೀನ್ಯತೆಯು ಖಂಡಿತವಾಗಿಯೂ ಸಮಾಜ, ರಾಜ್ಯ ಮತ್ತು ರಾಷ್ಟ್ರವನ್ನು ಶ್ರೀಮಂತಗೊಳಿಸುತ್ತದೆ" ಎಂದು ಶ್ಲಾಘಿಸಿದರು.




"ಬೆಂಗಳೂರು ವಿಶ್ವವಿದ್ಯಾಲಯವು ನೀಡಿದ ಈ ಗೌರವವು ಖಾದರ್ ಅವರ ವರ್ಷಗಳ ಸಮರ್ಪಿತ ಸಾರ್ವಜನಿಕ ಸೇವೆ, ಆಡಳಿತಾತ್ಮಕ ಸಮಗ್ರತೆ ಮತ್ತು ಬಹುಮುಖಿ ಸಾಮಾಜಿಕ ಕೊಡುಗೆಗಳನ್ನು ಗುರುತಿಸಿ ನೀಡಲಾಗಿದೆ. ಈ ಡಿ.ಲಿಟ್. ಪದವಿಯು ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ, ಸಮರ್ಪಣೆ ಮತ್ತು ಪರಿಶ್ರಮದಿಂದ ಮಾಡಿದ ಕೆಲಸವು ಸಮಾಜದ ಮೇಲೆ ಆಳವಾದ ಪರಿಣಾಮ ಬೀರುತ್ತದೆ. ಈ ಪ್ರತಿಷ್ಠಿತ ಗೌರವಕ್ಕಾಗಿ ಅಭಿನಂದಿಸುತ್ತೇನೆ. ನಿಮ್ಮ ಅನುಭವ ಮತ್ತು ಬುದ್ಧಿವಂತಿಕೆಯು ಮುಂಬರುವ ದಿನಗಳಲ್ಲಿ ಸಮಾಜಕ್ಕೆ ಮಾರ್ಗದರ್ಶನ ನೀಡುವುದನ್ನು ಮತ್ತು ದೇಶವನ್ನು ಸರ್ವೋಚ್ಚವೆಂದು ಪರಿಗಣಿಸಿ ರಾಷ್ಟ್ರೀಯ ಮತ್ತು ಸಾರ್ವಜನಿಕ ಹಿತಾಸಕ್ತಿಗಾಗಿ ಕೆಲಸ ಮಾಡುವುದನ್ನು ಮುಂದುವರೆಸಬೇಕು ಎಂದು ಕರೆ ನೀಡಿದರು.

# ಮಸ್ಕತ್‌ನಲ್ಲಿ 3ನೇ ವಿಶ್ವ ಕನ್ನಡ ಹಬ್ಬ

ಓಮಾನ್ ಕನ್ನಡ ಸಂಘ ಮತ್ತು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಂಯುಕ್ತ ಆಶ್ರಯದಲ್ಲಿ ದಿನಾಂಕ:28.11.2025ರಂದು ಸಿಬಿಎಫ್‌ಎಸ್ ಆಡಿಟೋರಿಯಂ, ಬೌಶರ್, ಮಸ್ಕತ್‌ನಲ್ಲಿ ನಡೆದ ಬೃಹತ್ ಕನ್ನಡ ಸಂಘದ 03ನೇ ವಿಶ್ವ ಕನ್ನಡ ಹಬ್ಬದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಿದ್ದರು. ವಿದೇಶಿ ನೆಲದಲ್ಲಿ ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ದುಬೈ ಮತ್ತು ಸಿಂಗಾಪುರ ನಂತರ ಮೂರನೇ ಅವೃತ್ತಿಯನ್ನು ಮಸ್ಕತ್‌ನಲ್ಲಿ ಆಯೋಜಿಸಲಾಗಿತ್ತು.











## ಶ್ರೀ ವಿಶ್ವನಾಥ ಸಜ್ಜನರ ಐಪಿಎಸ್ ಗೌರವ ಸಮಾರಂಭ

ದಿನಾಂಕ:30.112025ರಂದು ಬಿ.ವ್ಹಿ.ಬಿ ಕಾಲೇಜು ಸಭಾಂಗಣ, ಕೆ.ಎಲ್.ಇ ವಿದ್ಯಾನಗರ, ಹುಬ್ಬಳ್ಳಿಯಲ್ಲಿ ಶ್ರೀ ವಿಶ್ವನಾಥ ಸಜ್ಜನರ ಐ.ಪಿ.ಎಸ್ ಇವರಿಗೆ ಗೌರವ ಅಭಿನಂದನಾ ಸಮಾರಂಭದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಭಾಗವಹಿಸಿದ್ದರು.




## ವಿಧಾನಸೌಧದಲ್ಲಿ ಮಹಿಳಾ ನೌಕರರ ಸಮ್ಮೇಳನ

ದಿನಾಂಕ:04.12.2025ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಮಹಿಳಾ ನೌಕರರ ಸಮ್ಮೇಳನದಲ್ಲಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘವು "ಮಹಿಳಾ ನೌಕರರ ಸಮ್ಮೇಳನ" ಏರ್ಪಡಿಸಿತ್ತು. ಮಹಿಳಾ ನೌಕರರಿಗೆ ಮಾಸಿಕ ಒಂದು ದಿನ ವೇತನ ಸಹಿತ ಋತುಚಕ್ರ ರಜೆ ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಐತಿಹಾಸಿಕ ಘೋಷಣೆ ಮಾಡಿದರು. ಮಹಿಳಾ ಸ್ನೇಹಿ ಯೋಜನೆಗಳ ಜಾರಿಗೆ ಮೆಚ್ಚುಗೆ ಸೂಚಿಸಿ ಮಹಿಳಾ ನೌಕರರ ಸಂಘದ ವತಿಯಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ಸನ್ಮಾನಿಸಿಲಾಯಿತು. ಈ ಕಾರ್ಯಕ್ರಮವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್.ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾನ್ಯ ಶಾಸಕರುಗಳು, ಸಚಿವಾಲಯದ ಮಹಿಳಾ ನೌಕರರುಗಳು ಉಪಸ್ಥಿತರಿದ್ದರು.








## ವಿಧಾನಸಭೆ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ

ದಿನಾಂಕ:08.12.2025ರಂದು ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ವಿಧಾನಸಭೆ ಕಾರ್ಯಕಲಾಪಗಳ ಸಲಹಾಸಮಿತಿ ಸಭೆಯನ್ನು ಕರೆಯಲಾಗಿದ್ದು ಸದರಿ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರ ಉಪಸ್ಥಿತಿಯಲ್ಲಿ ಸಭೆ ನಡೆಸಿ ವಿಧಾನಸಭೆಯ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಚರ್ಚಿಸುತ್ತಿರುವ ಸಂದರ್ಭ.





## ವಿಧಾನಸಭಾ ಅಧಿವೇಶನದ ಪೂರ್ವ ಸಮಾಲೋಚನೆ

ದಿನಾಂಕ:08.12.2025ರಂದು ವಿಧಾನಸಭೆ ಅಧಿವೇಶನ ಪ್ರಾರಂಭವಾಗುವ ಮೊದಲು, ಸನ್ಮಾನ್ಯ ಸಭಾಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಹಾಗೂ ಇತರೆ ಗಣ್ಯರುಗಳೊಂದಿಗೆ ಸಮಾಲೋಚನೆ ನಡೆಸಿದರು.





## ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಚಳಿಗಾಲ ಅಧಿವೇಶನ

ದಿನಾಂಕ:08.12.2025 ರಿಂದ 19.12.2025ರವರೆಗೆ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಚಳಿಗಾಲ ಅಧಿವೇಶನದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಸದನವನ್ನು ನಡೆಸುತ್ತಿರುವುದು.







## ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ

ದಿನಾಂಕ:08.12.2025ರಂದು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಸದನವನ್ನು ನಡೆಸುತ್ತಿರುವುದು.






## ಸುವರ್ಣ ವಿಧಾನಸೌಧದ ಮೆಟ್ಟಿಲುಗಳಲ್ಲಿ ಖಾದಿ ಧ್ವಜ ಪ್ರದರ್ಶನ

9ನೇ ಡಿಸೆಂಬರ್ 2025ರಂದು ಸುವರ್ಣ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ವಿಶ್ವದಲ್ಲೇ ಎರಡನೇ ಅತಿದೊಡ್ಡ ಖಾದಿ ರಾಷ್ಟ್ರೀಯ ಧ್ವಜ ಪ್ರದರ್ಶನದ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್, ಸನ್ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್, ಸನ್ಮಾನ್ಯ ಉಪ ಸಭಾಧ್ಯಕ್ಷರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ಅವರು ಸೇರಿದಂತೆ ಸರ್ಕಾರದ ಇತರೆ ಸಚಿವರು ಹಾಗೂ ಶಾಸಕರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವು ಸನ್ಮಾನ್ಯ ಸಭಾಧ್ಯಕ್ಷರ ಸ್ವಯಂ ಆಸಕ್ತಿಯಿಂದ ನಡೆಯಿತು.

ಈ ಧ್ವಜವನ್ನು ಕಲ್ಬುರ್ಗಿ ಜಿಲ್ಲೆಯ ಕಮಲಾಪುರದ ವಿನೋದ್ ಕುಮಾರ್ ರೇವಪ್ಪ ಬಮ್ಮನ್ನ ಕುಟುಂಬಸ್ಥರು ವೈಯಕ್ತಿಕ ಆಸಕ್ತಿಯಿಂದ ತಯಾರಿಸಿರುತ್ತಾರೆ.











## ಕಬಡ್ಡಿ ವಿಶ್ವಕಪ್ ಚಾಂಪಿಯನ್ ಧನಲಕ್ಷ್ಮಿ ಪೂಜಾರಿಗೆ ಸದನದ ಅಭಿನಂದನೆ

ದಿನಾಂಕ:09.12.2025ರಂದು ಕಬಡ್ಡಿ ವಿಶ್ವಕಪ್ ಚಾಂಪಿಯನ್ಸ್ ಭಾರತ ತಂಡದಲ್ಲಿ ಆಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ಶ್ರೀಮತಿ ಶಶಿಕಲಾ ಹಾಗೂ ಶ್ರೀ ನಾರಾಯಣ ದಂಪತಿಯ ಪುತ್ರಿ ಧನಲಕ್ಷ್ಮಿ ಪೂಜಾರಿ ಹಾಗೂ ತರಬೇತುದಾರ ತೇಜಸ್ವಿನಿ ಬಾಯ್ ಅವರ ಕುರಿತು ಸದನದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಭಿನಂದನಾ ಪ್ರಸ್ತಾವವನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸನ್ಮಾನ್ಯ ಸದಸ್ಯರು ಅಭಿನಂದನೆ ಸಲ್ಲಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಯವರು ಶ್ರೀಮತಿ ಧನಲಕ್ಷ್ಮಿ ಪೂಜಾರಿಗೆ ಕರ್ನಾಟಕ ಸರ್ಕಾರದ ವತಿಯಿಂದ ಐದು ಲಕ್ಷ ರೂಪಾಯಿ ಬಹುಮಾನ ಘೋಷಿಸಿದರು.









## ಸುವರ್ಣ ವಿಧಾನಸೌಧದ ಉದ್ಯಾನವನ ಲೋಕಾರ್ಪಣೆ

ಜಿಲ್ಲಾಡಳಿತ ಬೆಳಗಾವಿ ಹಾಗೂ ಲೋಕೋಪಯೋಗಿ ಇಲಾಖೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ:10.12.2025ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ

ಸುಮಾರು 1.5 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುವ ಉದ್ಯಾನವನ ಹಾಗೂ ಸೌಂದರ್ಯೀಕರಣದ ಕಾಮಗಾರಿ ಮತ್ತು ಕಾರಂಜಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಮಂತ್ರಿಮಂಡಲದ ಸದಸ್ಯರೊಂದಿಗೆ ಲೋಕಾರ್ಪಣೆ ಮಾಡಿದರು.









## “ಭಾರತದ ಕೃಷಿ ಬಿಕ್ಕಟ್ಟುಗಳು” ಉಪನ್ಯಾಸ ಉದ್ಘಾಟನೆ

ದಿನಾಂಕ:12.12.2025ರಂದು ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ(ಕೃಷಿ ಮತ್ತು ಪರಿಸರ ಮಂಟಪ) ವತಿಯಿಂದ **“ಭಾರತದ ಕೃಷಿ ಬಿಕ್ಕಟ್ಟುಗಳು”** ವಿಶೇಷ ಉಪನ್ಯಾಸ ಮಾಲಿಕೆಯ ಉದ್ಘಾಟನಾ ಸಮಾರಂಭವನ್ನು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್ ಅವರು ಉದ್ಘಾಟಿಸಿದ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಶಾಸಕರಾದ ಶ್ರೀ ಎನ್.ಹೆಚ್.ಕೋನರೆಡ್ಡಿ ಅತಿಥಿಯಾಗಿ, ಉಪನ್ಯಾಸಕರಾಗಿ ಡಾ॥ ರಾಜೇಂದ್ರ ಪೋದ್ದಾರ, ವಿಶ್ರಾಂತ ನಿರ್ದೇಶಕರು, ವಾಲ್ಮಿ, ಧಾರವಾಡ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಶಾಸಕರು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ್ ಅವರು ವಹಿಸಿದ್ದರು.








**"ಭಾರತದ ಕೃಷಿ ಬಿಕ್ಕಟ್ಟುಗಳು" ಉಪನ್ಯಾಸ ಉದ್ಘಾಟನಾ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಮಾಡಿದ ಭಾಷಣ:**



**ರೈತರ ಮಕ್ಕಳು ಕೃಷಿ ಮಾಡುವಂತಾಗಬೇಕು:**

ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ದಿನಾಂಕ:12.12.2025ರಂದು ನಡೆದ ಭಾರತದ ಕೃಷಿ ಬಿಕ್ಕಟ್ಟುಗಳು ಕುರಿತ ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸಿ ರೈತರ ಮಕ್ಕಳು ಕೃಷಿಯಲ್ಲಿಯೇ ಮುಂದುವರಿಯುವ ಸ್ಥಿತಿ ನಿರ್ಮಾಣ ಮಾಡುವುದು ಅವಶ್ಯಕ ಎಂದು ವಿಧಾನಸಭೆ ಸಭಾಧ್ಯಕ್ಷ ಡಾ.ಯು.ಟಿ.ಖಾದರ್ ಹೇಳಿದರು.

ಕಷ್ಟಪಟ್ಟು ಕೃಷಿ ಮಾಡಿದರೂ ನಿರೀಕ್ಷಿತ ಪ್ರಮಾಣದಲ್ಲಿ ಆದಾಯ ಸಿಗದ ಕಾರಣದಿಂದಾಗಿ ರೈತರ ಮಕ್ಕಳು ಕೃಷಿಯಿಂದ ದೂರ ಸರಿಯುತ್ತಿದ್ದಾರೆ. ಉದ್ಯೋಗಗಳನ್ನು ಅರಿಸಿಕೊಂಡು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಅದ್ದರಿಂದ ಅವರನ್ನು ಕೃಷಿ ಮಾಡುವಂತೆ ಪ್ರೇರೇಪಿಸುವ ದಿಸೆಯಲ್ಲಿ ನಾವು ಕಾರ್ಯೋನ್ಮುಖವಾಗಬೇಕಿದೆ ಹಾಗೂ ಕೃಷಿ ನಮ್ಮ ದೇಶದಲ್ಲಿ ಕೇವಲ ಉದ್ಯೋಗವಲ್ಲ, ಅದು ನಮ್ಮ ಸಂಸ್ಕೃತಿ, ನಮ್ಮ ಸಂಪ್ರದಾಯ, ಜೀವನಾಡಿ, ನಮ್ಮ ದೇಶದ ವೈಭವ ನಗರಗಳಲ್ಲಿ ಸಿಗುವುದಿಲ್ಲ. ಆದು ಹಳ್ಳಿಗಳಲ್ಲಿದೆ, ಹೊಲ ಗದ್ದೆಗಳಲ್ಲಿದೆ, ಯುಮನರಿಗೆ ಕೃಷಿಯಲ್ಲಿ ಆಸಕ್ತಿ ಮೂಡಿಸಬೇಕು ಮತ್ತು ನಮ್ಮ ರೈತರು ಕೇವಲ ಬೀಜ ಮಾತ್ರ ಬಿತ್ತುವುದಿಲ್ಲ. ನಮ್ಮ

ಭವಿಷ್ಯವನ್ನೂ ಬಿತ್ತುತ್ತಿದ್ದಾರೆ. ರೈತರು ಬೆಳೆದ ಫಸಲಿನಲ್ಲಿ ಅವರ ಆಸೆ ಆಕಾಂಕ್ಷೆಗಳು, ಬದುಕಿನ ಭರವಸೆಗಳಿವೆ, ರೈತರಿಗೆ ಸ್ವಾಭಿಮಾನದಿಂದ ಬದುಕುವ ಅವಕಾಶ ಎಂದರು.

**ಕೃಷಿ ಕ್ಷೇತ್ರ ರಕ್ಷಣೆ; ಸರ್ಕಾರದ ಹೊಣೆ**

'ರೈತರು ಕೃಷಿ ತೊರೆದು ಊರುಬಿಟ್ಟು ಹೋಗದಂತೆ ಮಾಡಬೇಕು. ಕೃಷಿ ರಕ್ಷಿಸುವ ಕಾರ್ಯಕ್ರಮಗಳನ್ನು ಸರ್ಕಾರಗಳು ರೂಪಿಸಬೇಕು' ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು. 'ಕೃಷಿ ಕ್ಷೇತ್ರವು ಭಾರತದ ಜೀವನಾಡಿ, ಹೊಲಗದ್ದೆಗಳಲ್ಲಿನ ಮಣ್ಣಿನಲ್ಲಿ ದೇಶದ ಭವಿಷ್ಯ ಇದೆ. ಮಣ್ಣನ್ನು ರಕ್ಷಣೆ ಮಾಡಬೇಕು. ರೈತರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಪ್ರೇರಣೆ ನೀಡಬೇಕು' ಮತ್ತು'ರೈತರು ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ದೇಶದ ಸಂಸ್ಕೃತಿ, ಪರಂಪರೆ ಉಳಿಸಿದ್ದಾರೆ. ಅವರಿಗೆ ಹವಮಾನ ಮಾಹಿತಿ ನೀಡುವುದು, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಸರ್ಕಾರದ ಜವಾಬ್ದಾರಿ. ಸ್ವಾತಂತ್ರ್ಯ ಸಂದಾಗ ಕೃಷಿ ಉತ್ಪಾದನೆ ಕಡಿಮೆ ಇತ್ತು. ಈಗ ಹೆಚ್ಚಾಗಿದೆ. ರಫ್ತು ಮಾಡುವ ಹಂತಕ್ಕೆ ತಲುಪಿಸಿದ್ದೇವೆ' ಮತ್ತು 'ಬೀಳು ಬಿದ್ದಿರುವ ಜಮೀನುಗಳ ಮಾಲೀಕರನ್ನು ಪತ್ತೆ ಹಚ್ಚಬೇಕು. ಆ ಜಮೀನುಗಳ ಉಳುಮೆ ನಿಟ್ಟಿನಲ್ಲಿ ಕ್ರಮವಹಿಸುವ ಅಗತ್ಯ ಇದೆ. ಕೃಷಿ ಕಡೆಗೆ ಯುವಜನರಿಗೆ ಒಲವು ಬೆಳೆಸಬೇಕು. ಕೃಷಿಯಲ್ಲಿ ತೊಡಗಿಸಬೇಕು' ಎಂದರು.

**ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದಿದ್ದರೆ ಕೃಷಿಯಿಂದ ರೈತರು ವಿಮುಖ**

ಭಾರತ ದೇಶದ ಬೆನ್ನೆಲುಬು ರೈತ. ಆಹಾರ ಉತ್ಪಾದನೆಯಲ್ಲಿ ರೈತರ ಕೊಡುಗೆ ಅಪಾರ. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗಬೇಕು. ಇಲ್ಲದಿದ್ದರೆ ಬಹುಪಾಲು ರೈತರು ಕೃಷಿಯಿಂದ ವಿಮುಖವಾಗುವ ಆತಂಕವಿದೆ ಎಂದು ವಿಧಾನ ಸಭಾಧ್ಯಕ್ಷ ಡಾ. ಯು.ಟಿ. ಖಾದರ್ ಹೇಳಿದರು.

**ಸುಧಾರಿತ ಕೃಷಿಯಲ್ಲಿ ತೊಡಗಿ:**

ದೇಶದ ಜನಸಂಖ್ಯೆ ಹೆಚ್ಚಿದಂತೆ ಆಹಾರದ ಕೊರತೆಯಾಗದಂತೆ ರೈತರು ಸುಧಾರಿತ ಕೃಷಿಯಲ್ಲಿ ತೊಡಗಿರುವುದು ಶ್ಲಾಘನೀಯ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ, ಹೊಸ ಆವಿಷ್ಕಾರಗಳ ಪರಿಣಾಮದಿಂದ ಆಹಾರ ಉತ್ಪಾದನೆಯಲ್ಲಿ ಭಾರತ ಮುಂಚೂಣಿಗೆ ಬಂದಿದೆ. ದೇಶ-ವಿದೇಶಗಳಿಗೂ ರಫ್ತು ಮಾಡುತ್ತಿದೆ. ಇದು ದೇಶ ಕೃಷಿಗೆ ಹಿಡಿದ ಕೈಗನ್ನಡಿ ಹಾಗೂ ಭಾರತ ದೇಶದ ಬೆನ್ನೆಲುಬು ರೈತ. ಆಹಾರ ಉತ್ಪಾದನೆಯಲ್ಲಿ ಅವರ ಕೊಡುಗೆ ಅಪಾರ. ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆಸಿಗಬೇಕಾಗಿದೆ. ಇಲ್ಲದಿದ್ದರೆ ಕೃಷಿಯಿಂದ ವಿಮುಖವಾಗುವ ಆತಂಕವಿದೆ. ಯುವ ಪೀಳಿಗೆಯು ಕೃಷಿಗೆ ಆದ್ಯತೆ ಕೊಡಬೇಕು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

## ಶ್ರೀ ಬಸವರಾಜ ಎಸ್. ಹೊರಟ್ಟಿರವರಿಗೆ ಗೌರವ ಸನ್ಮಾನ

ದಿನಾಂಕ:13.12.2025ರಂದು ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಸತತ 8 ಬಾರಿ ಆಯ್ಕೆಯಾಗಿ 45 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಗೌರವ ಸನ್ಮಾನ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ಪಾಲ್ಗೊಂಡು, ಸನ್ಮಾನ್ಯ ಸಭಾಪತಿಗಳಿಗೆ ಸನ್ಮಾನ ಸಲ್ಲಿಸಿದರು.

ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಸಚಿವರಾಗಿಯೂ ಹಾಗೂ ಮೂರು ಬಾರಿ ಸಭಾಪತಿಗಳಾಗಿಯೂ ಸಮರ್ಥವಾಗಿ ಕಾರ್ಯನಿರ್ವಹಿಸಿ ದಾಖಲೆಯ ಸೇವೆ ಸಲ್ಲಿಸಿರುವ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರು ತಮ್ಮ ಗೌರವ ನುಡಿಗಳಲ್ಲಿ ಪ್ರಸ್ತಾಪಿಸಿದರು.

ಈ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು, ಕೇಂದ್ರ ಸಚಿವರಾದ ಶ್ರೀ ಪ್ರಹಲ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಜಗದೀಶ್ ಶೇಟ್ಟರ್ ಹಾಗೂ ಇತರೆ ಗಣ್ಯರುಗಳು ಉಪಸ್ಥಿತರಿದ್ದರು.









## ಬೆಳಗಾವಿ ಮಹಾನಗರಪಾಲಿಕೆಯ ಸ್ವಚ್ಛತಾ ಓಟ ಕಾರ್ಯಕ್ರಮ

ದಿನಾಂಕ:17.12.2025ರಂದು ಬೆಳಗಾವಿಯ ಅಶೋಕ ವೃತ್ತದಲ್ಲಿ ನಗರಾಭಿವೃದ್ಧಿ ಇಲಾಖೆ ಪೌರಾಡಳಿತ ನಿರ್ದೇಶನಾಲಯ ಮಹಾನಗರಪಾಲಿಕೆ ಬೆಳಗಾವಿ ವತಿಯಿಂದ **"ಸ್ವಚ್ಛತಾ ಓಟ"** ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಉಪಮುಖ್ಯಮಂತ್ರಿ ಶ್ರೀಡಿ.ಕೆ.ಶಿವಕುಮಾರ್  ಹಾಗೂ ಸರ್ಕಾರದ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್‌ರವರು ಪಾಲ್ಗೊಂಡಿದ್ದರು.





## ಬೆಳಗಾವಿ ವಿಧಾನಸಭಾ ಅಧಿವೇಶನ–ಪತ್ರಿಕಾ ಗೋಷ್ಠಿ

ಸನ್ಮಾನ್ಯ ಸಭಾಧ್ಯಕ್ಷರು **ದಿನಾಂಕ:22.11.2025ರಂದು,** ದಿನಾಂಕ:08.12.2025 ರಿಂದ 19.12.2025 ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಸಭಾ ಅಧಿವೇಶನದ ಕುರಿತು ಪತ್ರಿಕಾ ಗೋಷ್ಠಿ ನಡೆಸಿದರು.






## ಅರಮನೆ ಮೈದಾನದಲ್ಲಿ "ಜನ ರಾಜ್ಯೋತ್ಸವ" ಕಾರ್ಯಕ್ರಮ

ದಿನಾಂಕ:28.12.2025ರಂದು ಅರಮನೆ ಮೈದಾನದಲ್ಲಿ ಕನ್ನಡ ಹೋರಾಟಗಾರರ ಸಮಿತಿ ಆಯೋಜಿಸಿದ್ದ **"ಜನ ರಾಜ್ಯೋತ್ಸವ"** ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಕನ್ನಡಪರ ಹೋರಾಟಗಾರರು ರಾಜ್ಯದ ಶಕ್ತಿ. ಎಲ್ಲಾ ಸಂಘಟನೆಗಳು ಒಂದಾಗಿದ್ದು ಹಬ್ಬದ ಊಟ ಮಾಡಿದಷ್ಟು ಸಂತಸ ಆಗಿದೆ. ಕನ್ನಡ ಆಂಗ್ಲಭಾಷೆ ಎಲ್ಲಾರೂ ಸೇರಿ ಕನ್ನಡ ಉಳಿಸಿ ಬಳಸಿ ಬೆಳೆಸಬೇಕು ಎಂದು ತಿಳಿಸಿದರು.








## ಪ್ರೆಸ್ ಕ್ಲಬ್ ವತಿಯಿಂದ “ವರ್ಷದ ವ್ಯಕ್ತಿ ಪ್ರಶಸ್ತಿ” ಪ್ರದಾನ

ದಿನಾಂಕ:31.12.2025ರಂದು ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಪ್ರೆಸ್ ಕ್ಲಬ್ ಆವರಣ, ಕಬ್ಬನ್ ಪಾರ್ಕ್‌ನಲ್ಲಿ ನಡೆದ **“ವರ್ಷದ ವ್ಯಕ್ತಿ ಪ್ರಶಸ್ತಿ”** ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಪತ್ರಕರ್ತರು ಯಾರಿಗೂ ಹೆದರದೆ ತಮ್ಮ ಕರ್ತವ್ಯ ನಿರ್ವಹಿಸಬೇಕು ಹಾಗೂ ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡುವ ಗುಣವನ್ನು ಮುಂದುವರೆಸಿಕೊಂಡು ಹೋಗಬೇಕು. ಪತ್ರಿಕಾರಂಗವು ಪ್ರಜಾಪ್ರಭುತ್ವದ 4ನೇ ಅಂಗವಾಗಿದ್ದು, ಸಮಾಜವನ್ನು ತಿದ್ದುವಲ್ಲಿ ಮತ್ತು ಪರಿವರ್ತನೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.









## 2. ಮಾಧ್ಯಮ– ರಾಜಕಾರಣ 2 ಕಣ್ಣು: ಖಾದರ್

ಮಾಧ್ಯಮ ಮತ್ತು ರಾಜಕಾರಣ ಎಂಬ 2 ಕಣ್ಣುಗಳು ಸತ್ಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲವಾದರೆ ಸಮಾಜ ಕತ್ತಲೆಗೆ ಜಾರುತ್ತದೆ. ಇವುಗಳು ಜತೆ ಜತೆಯಾಗಿದ್ದರೆ ಸಮಾಜದಲ್ಲಿ ಶಾಂತಿ ಇರುತ್ತದೆ. ಆಗ ಮಾತ್ರ ಶುದ್ಧ ಭಾರತ ನಿರ್ಮಾಣ ಮಾಡಬಹುದು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಪ್ರೆಸ್‌ಕ್ಲಬ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ–2025 ಹಾಗೂ ವಿಚಾರ ಸಂಕಿರಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ಅಭಿಪ್ರಾಯ ರೂಪಿಸುವಲ್ಲಿ ಮಾಧ್ಯಮಗಳ ಜವಾಬ್ದಾರಿ ಬಹು ದೊಡ್ಡದು. ಜನ ಸಾಮಾನ್ಯರಿಗೆ ತೊಂದರೆ ಬಂದಾಗ ಮಾಧ್ಯಮಗಳು ಮಾನವೀಯತೆ ಉಳಿಸಿಕೊಂಡು ಹೋಗಬೇಕು. ದೇಶದ ಸಂಸ್ಕೃತಿ, ಏಕತೆಯನ್ನು ಉಳಿಸಿಕೊಂಡು ಬಲಿಷ್ಠ ದೇಶ ನಿರ್ಮಿಸುವ ಜವಾಬ್ದಾರಿ ಸಹ ಮಾಧ್ಯಮಗಳ ಮೇಲಿದೆ ಎಂದು ಹೇಳಿದರು.

ಮಾಧ್ಯಮಗಳು ರಾಜಕಾರಣಿಗಳನ್ನು ಹೊಗಳಿ ಸುದ್ದಿ ಬಿತ್ತರಿಸಿದಾಗಲೂ ತಮ್ಮ ಚಟುವಟಿಕೆಗಳಲ್ಲಿ ನಿರತರಾಗಬೇಕು. ರಾಜಕಾರಿಣಿಗಳ ಬಗ್ಗೆ ಆರೋಪ ಮಾಡಿ ಸುದ್ದಿ ಮಾಡಿದಾಗಲೂ ತಪ್ಪನ್ನು ಸರಿಪಡಿಸಿಕೊಂಡು ಮುಂದುವರಿಯಬೇಕು. ನಮ್ಮ ಬಗ್ಗೆ ಒಳ್ಳೆಯದ್ದನ್ನೇ ಬರೆಯುತ್ತಲಿದ್ದರೆ ಅದು ಮಾಧ್ಯಮವೆನಿಸಿಕೊಳ್ಳುವುದಿಲ್ಲ. ಮುಖ್ಯವಾಗಿ ಜನರಿಗೆ ವಿಶ್ವಾಸ ಬರುವಂತೆ ಪತ್ರಿಕೋದ್ಯಮ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

**ಆಧಾರ:**ಹೊಸ ದಿಗಂತ, ದಿನಾಂಕ:18.11.2025

## 3. ಬೆಳಗಾವಿ ಅಧಿವೇಶನ: ಸಿದ್ಧತೆ ಪರಿಶೀಲಿಸಿದ ಸ್ಪೀಕರ್

ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 8ರಿಂದ ಆರಂಭವಾಗಲಿರುವ ವಿಧಾನಮಂಡಲ ಚಳಿಗಾಲದ ಅಧಿವೇಶನ ವೇಳೆ ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಅಧಿಕಾರಿಗಳು ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಸೂಚಿಸಿದರು.

ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಿಸೆಂಬರ್ 19ರವರೆಗೆ ನಡೆಯಲಿರುವ ಅಧಿವೇಶನಕ್ಕೆ ನಿಯೋಜಿತ ಅಧಿಕಾರಿ–ಸಿಬ್ಬಂದಿ ಬದ್ಧತೆಯೊಂದಿಗೆ ಕಾರ್ಯನಿರ್ವಹಿಸಿ ಅಧಿವೇಶನ ಯಶಸ್ವಿಗೊಳಿಸಬೇಕೆಂದರು. ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಧ್ವನಿ ವ್ಯವಸ್ಥೆ, ಸ್ವಚ್ಛತೆ ಸೇರಿ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಆಧಾರ:** ಉದಯವಾಣಿ, ದಿನಾಂಕ:20.11.2025

## 4. ನನ್ನ ವಿರುದ್ಧ ಅವಿಶ್ವಾಸ ಮಂಡಿಸಲು ಕಾರಣಗಳಿಲ್ಲ: ಬಸವರಾಜ ಹೊರಟ್ಟಿ

ನನ್ನ ವಿರುದ್ಧ ಅವಿಶ್ವಾಸ ಮಂಡನೆಗೆ ಕಾರಣಗಳಿಲ್ಲ. ಒಂದು ವೇಳೆ ಮಂಡಿಸಿದರೆ ಕಾರಣ ಕೇಳುತ್ತೇನೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಬೇಸರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಭಾಪತಿಗಳು ಭ್ರಷ್ಟಾಚಾರ, ಏಕಪಕ್ಷೀಯವಾಗಿ ವರ್ತಿಸಿದರೆ ಮಾತ್ರ ಅವಿಶ್ವಾಸ ಮಂಡನೆ ಮಾಡಬೇಕು. ಆದರೆ, ನನ್ನ ಮೇಲೆ ಅಂತಹ ಯಾವುದೇ ಆರೋಪಗಳಿಲ್ಲ. ಪ್ರಾಮಾಣಿಕ ಕೆಲಸ ಮಾಡಿದ್ದೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪರಿಷತ್ ಸದಸ್ಯರ ಅಧಿಕಾರದ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಈವರೆಗೆ 24 ಸಭಾಪತಿಗಳು ಆಗಿ ಹೋಗಿದ್ದು, ಯಾರ ಮೇಲೆಯೂ ಅವಿಶ್ವಾಸ ಮಂಡನೆಯಾಗಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡುವರು ಸಭಾಪತಿಯಾಗಿರಬೇಕು. ನಾನೂ

ನಿಷ್ಪಕ್ಷಪಾತವಾಗಿ ಕೆಲಸ ಮಾಡಿದ್ದೇನೆ. ನನ್ನ ವಿರುದ್ಧ ಅವಿಶ್ವಾಸ ಮಂಡನೆಗೆ ಯಾವುದೇ ಕಾರಣಗಳಿಲ್ಲ. ಹಾಗೊಂದು ವೇಳೆ ಅವರು ಮಂಡನೆ ಮಾಡಲೇಬೇಕು ಎಂದಾದರೆ ಮಾಡಲಿ. ನಂತರದಲ್ಲಿ ಯಾವ ಕಾರಣಕ್ಕೆ ಅವಿಶ್ವಾಸ ಮಾಡಿದ್ದೀರಾ? ಎಂದು ಪ್ರಶ್ನಿಸುತ್ತೇನೆ ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:27.11.2025

## 5. ಸದನದ ನಿರ್ಣಯಕ್ಕೆ ತಲೆಬಾಗುವೆ

ನನ್ನ ವಿರುದ್ಧ ಅವಿಶ್ವಾಸ ಗೊತ್ತುವಳಿ ತೆಗೆದುಕೊಳ್ಳುವುದು ಅವರಿಗೆ (ಕಾಂಗ್ರೆಸ್ ನವರಿಗೆ) ಬಿಟ್ಟದ್ದು, ಈ ಕುರಿತು ಸದನ ಏನೇ ನಿರ್ಣಯ ತೆಗೆದುಕೊಂಡರೂ ಅದಕ್ಕೆ ತಲೆಬಾಗುವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಹೇಳಿದರು.

ಬಹುಮತ ಇದೆಯೋ ಇಲ್ಲವೋ ಸರ್ಕಾರಕ್ಕೆ ಬಿಟ್ಟ ವಿಚಾರ. ಅದರ ನಿರ್ಧಾರವೇ ಅಂತಿಮ ಚರ್ಚೆಗೆ ಬಂದರೆ ನಿಯಮದ ಪ್ರಕಾರ ಹೋಗುತ್ತೇನೆ. ಶಂಕರಮೂರ್ತಿ ಪ್ರಕರಣವನ್ನು ಬಿಟ್ಟರೆ ವಿಧಾನ ಪರಿಷತ್ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ ಇತಿಹಾಸವೇ ಇಲ್ಲ ಎಂದು ಅಧಿವೇಶನ ಆರಂಭಕ್ಕೆ ಮುನ್ನ ನಡೆಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನನ್ನಿಂದ ಒಂದೇ ಒಂದು ಪೈಸೆ ಭ್ರಷ್ಟಾಚಾರ ಆಗಿದೆ ಎಂದು ಸಾಬೀತಾದರೆ ಒಂದು ಕ್ಷಣ ಈ ಸ್ಥಾನದಲ್ಲಿ ಇರುವುದಿಲ್ಲ. ವಿಧಾನ ಪರಿಷತ್ ಸಿಬ್ಬಂದಿ ನೇಮಕಾತಿಯಲ್ಲಿ ಅವ್ಯವಹಾರ ಕುರಿತು ದಾಖಲೆ ಕೊಡಲಿ. ಅದನ್ನು ಬಿಟ್ಟು ಬರೀ ಆರೋಪ ಮಾಡಿದರೆ ಅವರು ಹೇಡಿಗಳಷ್ಟೇ ಎಂದು ಗುಡುಗಿದರು.

ಕೆಇಎ ಪರೀಕ್ಷೆ ನಡೆಸಿ ಅಭ್ಯರ್ಥಿಗಳ ಪಟ್ಟಿಕೊಟ್ಟಿದ್ದು. ಅದರನ್ನು ಪರಿಶೀಲಿಸಲು ಸಮಿತಿ ರಚಿಸಿ ಎಲ್ಲ ನಿಯಮ ಪಾಲನೆ ಮಾಡಿ 30 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ. ಇದರಲ್ಲಿ ನಮ್ಮ ಪಾತ್ರ ಇಲ್ಲ ಎಂದು ಹೊರಟ್ಟಿ ಸ್ಪಷ್ಟನೆ ಕೊಟ್ಟರು.

ಅವ್ಯವಹಾರವಾಗಿದ್ದರೆ ಕಾನೂನು ಪ್ರಕಾರ ಕ್ರಮ ಆಗಲಿ, ಅದನ್ನು ಬಿಟ್ಟು ಶಾಸಕರು ಆರೋಪ ಮಾಡುವ ಮುನ್ನ ಯೋಚನೆ ಮಾಡಬೇಕು. ಕೆಲ ಕಠಿಣ ನಿರ್ಧಾರ ತೆಗೆದುಕೊಂಡಿದ್ದರಿಂದಲೇ ನನ್ನ ವಿರುದ್ಧ ಆರೋಪ ಬಂದಿದೆ ಎಂದ ಹೇಳಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಸಿ.ಟಿ.ರವಿ ನಿಂದಿಸಿದ ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ನೀತಿ ನಿರೂಪಣಾ ಸಮಿತಿಗೆ ಸೂಚಿಸಲಾಗಿದೆ. ಅದು ಈಗಾಗಲೇ ಎರಡು ಸಲ ಸಭೆ ನಡೆಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಆಧಾರ:ವಿಜಯವಾಣಿ,** ದಿನಾಂಕ:09.12.2025

## 6. ಭ್ರಷ್ಟಾಚಾರ ಸಾಬೀತು ಮಾಡಿದರೆ ರಾಜೀನಾಮೆ: ಹೊರಟ್ಟಿ ಹೇಳಿಕೆ

ಸುವರ್ಣ ವಿಧಾನಸೌಧ ಸೇರಿದಂತೆ ಯಾವುದೇ ವಿಷಯದಲ್ಲಿ ಅವ್ಯವಹಾರ ನಡೆದಿರುವುದನ್ನು ಸಾಬೀತು ಮಾಡಿದರೆ ಒಂದು ಕ್ಷಣವೂ ಸ್ಥಾನದಲ್ಲಿ ಮುಂದುವರಿಯುವುದಿಲ್ಲ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದಿನಾಂಕ:08.12.2025ರಂದು ಮಾತನಾಡಿದ ಅವರು, ಕೆಲವರು ಸುಮ್ಮನೆ ಆರೋಪಗಳನ್ನು ಮಾಡುತ್ತಾರೆ. ಸಾಕ್ಷಾಧಾರ ಇಟ್ಟುಕೊಂಡು ಮಾತನಾಡಬೇಕು. ಎಂಟು ಬಾರಿ ಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ಸಭಾಪತಿಯಾದ ನಂತರವೂ ಪಾರದರ್ಶಕವಾಗಿ ಇದ್ದೇನೆ. ಸಭಾಪತಿ ಕಚೇರಿಯಲ್ಲಿ ಭ್ರಷ್ಟಾಚಾರದ ದೂರುಗಳಿಗೆ ತಕ್ಷಣ ಸ್ಪಂದಿಸಿದ್ದೇನೆ. ಆರೋಪ ಮೇಲ್ನೋಟಕ್ಕೆ ಸಾಬೀತಾದ ಪ್ರಕರಣಗಳಲ್ಲಿ ಮೂವರ ವಿರುದ್ಧ ಕ್ರಮ ಜರುಗಿಸಲಾಗಿದೆ. ನನ್ನ ಮೇಲಿನ ಆರೋಪವನ್ನು ನಿಯಮದಂತೆ ಮಂಡಿಸಿದರೆ ನಿಯಮದಂತೆ ಕ್ರಮವಹಿಸಲಾಗುವುದು. ತಪ್ಪು ಕಂಡುಬಂದರೆ ರಾಜೀನಾಮೆ ನೀಡುವೆ.

ಇಲ್ಲದಿದ್ದರೆ ಸಭಾಪತಿ ಪೀಠದ ಗೌರವಕ್ಕಾಗಿಯಾದರೂ ಆರೋಪ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದರು.

**ಆಧಾರ:**ಪ್ರಜಾವಾಣಿ, ದಿನಾಂಕ:09.12.2025

## 7. ಅಭಿನಂದನಾ ಕಾರ್ಯಕ್ರಮದಲ್ಲಿ ಸಿದ್ದು ಭಾಗಿ ಸಿಎಂ ಜತೆ ನನ್ನದು ಆಪ್ತ ಸ್ನೇಹ: ಹೊರಟ್ಟಿ

ಬಸವರಾಜ ಹೊರಟ್ಟಿ ಮತ್ತು ನನ್ನ ಸ್ನೇಹ ನಾಲ್ಕು ದಶಕಗಳ ಕಾಲದ್ದು. ಅವರು ಅಜಾತಶತ್ರು, ನಿಷ್ಪಕ್ಷಪಾತಿ. ಇದು ಎಲ್ಲರಿಗೂ ಸಿದ್ಧಿಸುವುದಿಲ್ಲ. ಅವರು ನೂರ್ಕಾಲ ಬಾಳಲಿ. ಇನ್ನೂ ಒಂದಲ್ಲ, ಎರಡು ಚುನಾವಣೆಗೆ ಸ್ಪರ್ಧಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾರೈಸಿದರು.

ದಿನಾಂಕ:13.12.2025ರಂದು ನೆಹರು ಮೈದಾನದಲ್ಲಿ ಬಸವರಾಜ ಹೊರಟ್ಟಿ ಅಭಿನಂದನಾ ಸಮಿತಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹೊರಟ್ಟಿ ಅವರನ್ನು ಸನ್ಮಾನಿಸಿ ಮಾತನಾಡಿ, ಎಲ್ಲ ಪಕ್ಷದವರೊಂದಿಗೂ ಉತ್ತಮ ಒಡನಾಟ ಹೊಂದಿರುವ ಹೊರಟ್ಟಿ ನೇರ ನಡೆ ನುಡಿಯ ವ್ಯಕ್ತಿತ್ವ ಹೊಂದಿರುವ ರಾಜಕಾರಣಿ. ನನ್ನ ಅವರ ವೈಯಕ್ತಿಕ ಸ್ನೇಹ ಎಷ್ಟೇ ಅಗಾಧವಾಗಿದ್ದರೂ ಸದನದಲ್ಲಿ ಅವರು ಅನುಸರಿಸುವ ನಿಷ್ಪಕ್ಷಪಾತ ನಡೆ ಗಮನಾರ್ಹ ಎಂದರು. ಬಸವರಾಜ ಹೊರಟ್ಟಿ ಮಾತನಾಡಿ, ನನ್ನ ಮೇಲಿನ ಅಭಿಮಾನದಿಂದ ಪಕ್ಷಾತೀತವಾಗಿ ಸಮಾರಂಭ ಆಯೋಜಿಸಿದ್ದೀರಿ. ಆತ್ಮೀಯ ಗೆಳೆಯ ಸಿದ್ದರಾಮಯ್ಯ ಅವರು ಪಾಲ್ಗೊಂಡಿದ್ದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಎಲ್ಲಿ ನೋಡಿದಲ್ಲಿ ಶಿಕ್ಷಕ, ಶಿಕ್ಷಕಿಯರು... ಅಸಂಖ್ಯಾತ ಅಭಿಮಾನಿಗಳು... ಇದು ಶಿಕ್ಷಕರ ಸಮಾವೇಶವಲ್ಲ; ರಾಜಕೀಯ ಸಮಾವೇಶವೂ ಅಲ್ಲ. ಬದಲಾಗಿ ತಮ್ಮ ನೆಚ್ಚಿನ ನಾಯಕ, ಜನಪರ ಕಾಳಜಿಯ ಮುಖಂಡ, ಶಿಕ್ಷಕರ ಗಟ್ಟಿಧ್ವನಿಯಾದ ಬಸವರಾಜ ಎಸ್. ಹೊರಟ್ಟಿ ಅವರ ಅಭಿನಂದನಾ ಸಮಾರಂಭದಲ್ಲಿ ಕಂಡುಬಂದ ನೋಟವಿದು.

45 ವರ್ಷ ಸುದೀರ್ಘ ಜೀವನವನ್ನು ಶಿಕ್ಷಕರ ಸಮಸ್ಯೆ ನಿವಾರಣೆಗೆ, ಅವರ ಏಳಿಗೆ, ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸುತ್ತ ಬಂದ ನಾಯಕನಿಗೆ ಅಭಿಮಾನದ ಹೊಳೆ ಹರಿದುಬಂದಿತು. ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಸಚಿವರು, ಶಾಸಕರು ಗಣ್ಯಮಾನ್ಯರು ಹೊರಟ್ಟಿಯವರನ್ನು ಸತ್ಕರಿಸುವ ಮೂಲಕ ಗೌರವಿಸಿದರು. ಅವರ ವ್ಯಕ್ತಿತ್ವದ ಮಜಲುಗಳನ್ನು, ಸಹೃದಯತೆಯ ಗುಣಗಳನ್ನು ಕೊಂಡಾಡಿದರು.

ಕಾನೂನು ಮತ್ತು ಸಂಸದೀಯ ಖಾತೆ ಸಚಿವ ಎಚ್.ಕೆ ಪಾಟೀಲ ಮಾತನಾಡಿ, 'ಪ್ರೀತಿಗೆ ಕೊರತೆಯಿಲ್ಲದ ಬದುಕು ರಾಜಕೀಯದಲ್ಲೂ ನಡೆಸಿದ್ದಾರೆ. ಸಾಮಾನ್ಯ ಕುಟುಂಬದಿಂದ ಬಂದು, ದಿಗ್ಗಜ ನಾಯಕರಾಗಿ ಬೆಳೆದು ಶಿಕ್ಷಣ ಕ್ಷೇತ್ರದ ಸಮಸ್ಯೆ ಬಗೆಹರಿಸುವಲ್ಲಿ ಶ್ರಮಿಸಿದ ವ್ಯಕ್ತಿ. ಶಿಕ್ಷಕರಿಗೆ ಅವರೊಬ್ಬ ಧೀ ಶಕ್ತಿ' ಎಂದರು.

ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಬಸವರಾಜ ಹೊರಟ್ಟಿ ಅವರು ಉತ್ತರ ಕರ್ನಾಟಕದ ಧ್ವನಿಯಾಗಿ ಸದಾಕಾಲ ಕೆಲಸ ಮಾಡಿದ್ದಾರೆ ಅವರು ಮುಂದೆ ಇದ್ದರೆ ನಾವೆಲ್ಲ ಅವರ ಜೊತೆಗೆ ಹೆಜ್ಜೆಗೆ ಹೆಜ್ಜೆ ಇಟ್ಟು ಕರ್ನಾಟಕವನ್ನು ವಿಶೇಷವಾಗಿ ಉತ್ತರ ಕರ್ನಾಟಕವನ್ನು ಎಲ್ಲ ರೀತಿಯಲ್ಲಿ ಅಭಿವೃದ್ಧಿಪಡಿಸುವ ಸಂಕಲ್ಪ ಮಾಡೋಣ ಎಂದು ಹೇಳಿದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:14.12.2025

## 8. ಶಾಸಕರ ನಿಧನಕ್ಕೆ ಕಲಾಪ ಮುಂದಕ್ಕೆ ಇದೇ ಮೊದಲು

ಸಾಮಾನ್ಯವಾಗಿ ಹಾಲಿ ವಿಧಾನಸಭೆ ಸದಸ್ಯರು ನಿಧನರಾದ ಸಂದರ್ಭದಲ್ಲಿ ಸಂತಾಪ ಸೂಚನೆ ನಂತರ ಕಲಾಪವನ್ನು ಮರುದಿನಕ್ಕೆ ಮುಂದೂಡುವ ಸಂಪ್ರದಾಯವನ್ನು ಕೆಳಮನೆಯಲ್ಲಿ ಅನುಸರಿಸಿಕೊಂಡು ಬರಲಾಗುತ್ತಿದೆ. ಆದರೆ ವಿಧಾನಪರಿಷತ್‌ನಲ್ಲಿ ಸಂತಾಪ ಸೂಚನೆ ನಂತರ

ಕಲಾಪವನ್ನು ನಡೆಸಲಾಗುತ್ತದೆ. ಆದರೆ, ಇದೇ ಮೊದಲ ಬಾರಿಗೆ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ಇಡೀ ದಿನದ ಕಲಾಪವನ್ನು ದಿನಾಂಕ:16.12.2025ಕ್ಕೆ ಮುಂದೂಡಿದ್ದು ವಿಶೇಷವಾಗಿತ್ತು.

ಸಭಾಪತಿ ಬಸವರಾಜ ಹೊರಟ್ಟಿ ಅವರು ಸಂತಾಪ ಸೂಚನೆ ಮಂಡಿಸಿದ ನಂತರ, ಸದಸ್ಯರು ಮಾತನಾಡಿದ ಮೇಲೆ 10 ನಿಮಿಷಗಳ ಕಾಲ ಕಲಾಪವನ್ನು ಮುಂದೂಡಲಾಯಿತು. ಪುನಃ ಸದನ ಸೇರುತ್ತಿದ್ದಂತೆ ಜೆಡಿಎಸ್‌ನ ಎಲ್.ಎಸ್. ಬೋಜೇಗೌಡ ಅವರು ವಿಷಯ ಪ್ರಸ್ತಾಪಿಸಿ, ಈವರೆಗೆ ಕೆಳಮನೆಯ ಸದಸ್ಯರು ನಿಧನರಾದಾಗ ಸಂತಾಪ ಸೂಚನೆ ಸಲ್ಲಿಸಿ ಕಲಾಪ ನಡೆಸಿಕೊಂಡು ಬರಲಾಗುತ್ತಿದೆ. ಆದರೆ ಶಾಮನೂರು ಶಿವಶಂಕರಪ್ಪ ಅವರು ಹಾಲಿ ಸದಸ್ಯರಾಗಿದ್ದಾರೆ. ಜತೆಗೆ ದಿನಾಂಕ:15.12.2025ರಂದು ಅವರ ಅಂತ್ಯ ಸಂಸ್ಕಾರ ಮಧ್ಯಾಹ್ನ ನಡೆಯಲಿದೆ. ಇಂತಹ ಸಂದರ್ಭದಲ್ಲಿ ಕಲಾಪ ನಡೆಸುವುದು ಸೂಕ್ತ ಅಲ್ಲವೆಂಬುದು ತಮ್ಮ ವೈಯಕ್ತಿಕ ಅಭಿಪ್ರಾಯವಾಗಿದೆ. ಹಾಗಾಗಿ ಕಲಾಪವನ್ನು ದಿನಾಂಕ:16.12.2025ಕ್ಕೆ ಮುಂದೂಡುವುದು ಉತ್ತಮ ಎಂದು ಸಲಹೆ ನೀಡಿದರು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಕಲಾಪ ನಡೆಸುವ ಉದ್ದೇಶವಿದ್ದರೆ ತಮ್ಮ ತಕರಾರು ಇಲ್ಲ, ಸರ್ಕಾರ ಈ ಕುರಿತು ತೆಗೆದುಕೊಳ್ಳುವ ನಿರ್ಣಯ ನೋಡಿಕೊಂಡು ತಮ್ಮ ಅಭಿಪ್ರಾಯ ಹೇಳುತ್ತೇನೆ ಎಂದರು. ಪ್ರತಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ತಾವು ಸೇರಿದಂತೆ ಅನೇಕ ಸಚಿವರು, ಸದಸ್ಯರು ಅಂತ್ಯ ಸಂಸ್ಕಾರಕ್ಕೆ ದಾವಣಗೆರೆಗೆ ಹೋಗಬೇಕಾಗಿದೆ. ಹಾಗಾಗಿ ಇಂದಿನ ಕಲಾಪ ಪಟ್ಟಿಯಲ್ಲಿರುವುದನ್ನು ದಿನಾಂಕ:16.12.2025ರಂದು ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸಭಾನಾಯಕ ಎನ್.ಎಸ್. ಬೋಸರಾಜು ಅವರು, ಪ್ರತಿಪಕ್ಷದ ಸಲಹೆಗೆ ತಮ್ಮ ವಿರೋಧವಿಲ್ಲ. ಎಲ್ಲ ಸದಸ್ಯರ ಅಭಿಪ್ರಾಯಕ್ಕೆ ಸಹಮತವಿದೆ ಎಂದು ಹೇಳಿದರು. ನಂತರ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಪ್ರಶ್ನೋತ್ತರ ಮತ್ತಿತರ ಕಲಾಪವನ್ನು ದಿನಾಂಕ:16.12.2025ಕ್ಕೆ ತೆಗೆದುಕೊಳ್ಳುವುದಾಗಿ ಹೇಳಿ ಕಲಾಪವನ್ನು ಮುಂದೂಡಿದರು.

**ಆಧಾರ: ಕನ್ನಡ ಪ್ರಭ,** ದಿನಾಂಕ:15.12.2025

## 9. ಶಾಸಕರ ಕರೆ ಸ್ವೀಕರಿಸದಿದ್ದರೂ ಹಕ್ಕುಚ್ಯುತಿ

ಶಾಸಕರು ಫೋನ್ ಕರೆಯನ್ನು ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಸ್ವೀಕರಿಸದೇ ಇರುವುದು ಸಹ ಶಾಸಕರ ಹಕ್ಕುಚ್ಯುತಿ ವ್ಯಾಪ್ತಿಗೆ ಒಳಪಡುತ್ತದೆ. ಕರೆ ಸ್ವೀಕರಿಸದಿದ್ದರೆ ಅನಿವಾರ್ಯವಾಗಿ ಹಕ್ಕು ಬಾಧ್ಯತಾ ಸಮಿತಿಗೆ ವಹಿಸಬೇಕಾಗುತ್ತದೆ ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಧಿಕಾರಿ ವರ್ಗಕ್ಕೆ ಚಾಟಿ ಬೀಸಿದ್ದಾರೆ.

ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಹೊರಟ್ಟಿ, ವಿಧಾನಪರಿಷತ್ ಸದಸ್ಯರು ಸಾರ್ವಜನಿಕ ಹಿತದೃಷ್ಟಿ ಮತ್ತು ಅವರ ಪರವಾಗಿ ಹಲವು ಕುಂದುಕೊರತೆ ಬಗ್ಗೆ ಚರ್ಚಿಸಲು ಕೆಲವೊಮ್ಮೆ ತುರ್ತಾಗಿ ದೂರವಾಣಿ ಮೂಲಕ ಸಂಪರ್ಕಿಸಿದರೂ ಕೆಲ ಅಧಿಕಾರಿಗಳು ಕರೆ ಸ್ವೀಕರಿಸುವುದಿಲ್ಲ ಎನ್ನುವುದನ್ನು ಗಮನಕ್ಕೆ ತಂದಿದ್ದಾರೆ.

ಒಂದು ವೇಳೆ ಅಧಿಕಾರಿಗಳು ಆ ಸಮಯದಲ್ಲಿ ಬೇರೆ ಕೆಲಸದಲ್ಲಿ ನಿರತರಾಗಿದ್ದಲ್ಲಿ ಸೌಜನ್ಯಕ್ಕಾದರೂ ವಾಪಸ್ ಕರೆ ಮಾಡುವಂತಹ ಪದ್ಧತಿ ಹೊಂದಿಲ್ಲ ಎಂದು ಶಾಸಕರು ಮೌಖಿಕವಾಗಿ ದೂರು ನಲ್ಲಿಸಿರುವುದನ್ನು ಉಲ್ಲೇಖಿಸಿದ್ದಾರೆ.

ಸಾರ್ವಜನಿಕ ಸೇವೆಯೇ ಸರ್ಕಾರದ ಪ್ರಮುಖ ಕರ್ತವ್ಯವಾಗಿರುವ ಹಿನ್ನೆಲೆಯಲ್ಲಿ ಕೆಲ ಅಧಿಕಾರಿಗಳ ಈ ನಡೆ ಪ್ರಶ್ನಾರ್ಹವಾಗಿದೆ. ಜನಪ್ರತಿನಿಧಿಗಳೊಂದಿಗೆ ಅಧಿಕಾರಿಗಳು ಈ ರೀತಿ ವರ್ತಿಸಿದರೆ ಸಾರ್ವಜನಿಕರ ಗತಿಯೇನು ಎನ್ನುವಂತಹ ಪ್ರಶ್ನೆ ಉದ್ಭವಾಗುತ್ತದೆ. ಈ ವಿಷಯವನ್ನು

ಗಂಭೀರವಾಗಿ ಪರಿಗಣಿಸಿ, ಎಲ್ಲ ಸಾರ್ವಜನಿಕರು, ಜನಪ್ರತಿನಿಧಿಗಳಿಗೆ ಸಮಯೋಚಿತ ಹಾಗೂ ಸಮರ್ಪಕ ಸ್ಪಂದನೆ ಕೊಡುವಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

**ಆಧಾರ: ವಿಜಯವಾಣಿ**, ದಿನಾಂಕ:17.12.2025

## 10. ಭೂ ಕಂದಾಯ ಕಾಯ್ದೆಗೆ ಮಹತ್ವದ ತಿದ್ದುಪಡಿ ಅಂಗೀಕಾರ

ಕೊಡಗು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಇರುವ ಜಮ್ಮಾ ಬಾಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಮಹತ್ವದ ತಿದ್ದುಪಡಿಯನ್ನು ಭೂ ಕಂದಾಯ ಕಾನೂನಿಗೆ ಅಳವಡಿಸಲಾಗಿದೆ.

ಸದನ ಸಮಿತಿಯ ಪರಿಶೀಲನೆ ಹಾಗೂ ಸಲಹೆಗಳನ್ನು ಅಳವಡಿಸಿಕೊಂಡು ರೂಪಿಸಿರುವ 'ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕ'ವನ್ನು ದಿನಾಂಕ:16.12.2025ರಂದು ವಿಧಾನಸಭೆ ಸರ್ವಾನುಮತದಿಂದ ಅಂಗೀಕರಿಸಿತು. ತಿದ್ದುಪಡಿಯ ಬಗ್ಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿವರಿಸಿದರು.

1964 ಹಾಗೂ 2000 ಇಸ್ವಿಗಳ ಕಂದಾಯ ಕಾಯ್ದೆಗಳ ವೇಳೆ ಮಾಡಿದ್ದ ತಪ್ಪಿನಿಂದ ಕೊಡಗು ಜಿಲ್ಲೆಯಲ್ಲಿ ಭಾರೀ ಸಮಸ್ಯೆ ಎದುರಾಗಿತ್ತು. ಭೂ ಮಾಲೀಕರಲ್ಲದವರು ಪಟ್ಟೇದಾರರ(ಮಾಲೀಕರು) ಕಾಲಂನಲ್ಲಿ ಸೇರ್ಪಡೆಯಾಗಿದ್ದು. ನಿಜವಾದ ಒಡೆತನ ದೊರೆಯದೇ ಅನೇಕರು ವಂಚಿತರಾಗಿದ್ದರು. ಸದನ ಸಮಿತಿಯ ಸಲಹೆಗಳನ್ನು ಅಳವಡಿಸಿಕೊಂಡು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ.

ಕಾಯ್ದೆ ಜಾರಿಗೆ ಬಂದ ಮೇಲೆ ಪಟ್ಟೇದಾರರಾದವರ ನೈಜತೆಯನ್ನು ತಹಶೀಲ್ದಾರ್‌ಗಳ ಕೋರ್ಟ್ ಪರಿಶೀಲಿಸುತ್ತದೆ. ಭೂ ವಂಚಿತರಿಗೆ ನ್ಯಾಯ ಕೊಡಿಸಿ, ಮಾಲೀಕರಲ್ಲದವರನ್ನು ಒಡೆತನದಿಂದ ದೂರ ಮಾಡಲಾಗುತ್ತದೆ. ಇದು ಜಿಲ್ಲೆಯ ಜನಕ್ಕೆ ನ್ಯಾಯ ದೊರಕಿಸಲಿದೆ' ಎಂದು ಸಚಿವರು ತಿಳಿಸಿದರು.

ರಾಜ್ಯದಲ್ಲಿ ಏಕರೂಪ ಕಂದಾಯ ಕಾಯ್ದೆ 1964ರಲ್ಲಿ ಜಾರಿಗೆ ಬಂದಾಗ ಕೊಡಗು ಜಿಲ್ಲೆ ಮಾತ್ರ ಇದರಿಂದ ಹೊರಗೆ ಉಳಿದಿತ್ತು. ಬ್ರಿಟಿಷರ ಕಾಲದ ಕಂದಾಯ ನಿಯಮಗಳನ್ನೇ ಪಾಲಿಸುತ್ತ ಹೋದದ್ದು ಈಗ ಬೆಟ್ಟದೆತ್ತರವಾಗಿ ಬೆಳೆದ ಸಮಸ್ಯೆಯಾಗಿದೆ.

2000 ಇಸವಿಯವರೆಗೆ ಬ್ರಿಟಿಷ್ ಕಾಲದ ಕಾನೂನುಗಳೇ ಕೊಡಗು ಜಿಲ್ಲೆಯಲ್ಲಿ ಮುಂದುವರಿದಿದ್ದವು. 2000 ಇಸವಿಯಲ್ಲಿ ಭೂಮಿ ಯೋಜನೆ ಜಾರಿಗೊಂಡು ಕಂದಾಯ ಇಲಾಖೆಯ ಪಹಣಿ ಸೇರಿದಂತೆ ದಾಖಲೆಗಳ ಗಣಕೀಕರಣ ಆರಂಭವಾಯಿತು. ಆಗ ಕೊಡಗು ಜಿಲ್ಲೆಯಲ್ಲಿ ಪಟ್ಟೇದಾರ್ ಸಮಸ್ಯೆ ಮತ್ತಷ್ಟು ತೀವ್ರವಾಗಿ ಕಾಡಲಾರಂಭಿಸಿತು ಎಂದು ಸಚಿವ ಕೃಷ್ಣ ಭೈರೇಗೌಡ ವಿವರಿಸಿದರು.

ಜಮ್ಮಾ ಬಾಣೆ ಸಮಸ್ಯೆಯಿಂದಾಗಿ ರಾಜ್ಯದ ಇತರ ಕಂದಾಯ ದಾಖಲೆಗಳಿಗೆ, ಪಹಣಿಗಳಿಗೆ ಹಾಗೂ ಕೊಡಗು ಜಿಲ್ಲೆಯುದ್ದಕ್ಕೆ ಸಾಮ್ಯವೇ ಇರಲಿಲ್ಲ.

ಭೂಮಿ ಯೋಜನೆ ಜಾರಿಗೊಂಡಾಗ ಕೊಡಗು ಜಿಲ್ಲಾಧಿಕಾರಿಗಳು ಆದೇಶವೊಂದನ್ನು ಹೊರಡಿಸಿ ಪಟ್ಟೇದಾರರನ್ನು ಪಹಣಿಯ 9ನೇ ಕಾಲಂನಲ್ಲಿ(ಮಾಲೀಕತ್ವ ಕಾಲಂ) ಸೇರ್ಪಡೆ ಮಾಡಿದರು. ಜಿಲ್ಲಾಧಿಕಾರಿಗಳ ಆದೇಶದಿಂದ ನಿಜವಾದ ಮಾಲೀಕರಲ್ಲದವರು ಮಾಲೀಕತ್ವದ ಕಾಲಂನಲ್ಲಿ ಸೇರ್ಪಡೆಗೊಂಡರು.

'ಇದು ವ್ಯಾಜ್ಯಗಳು ಬೆಳೆಯುತ್ತ ಹೋಗಲು ದಾರಿ ಮಾಡಿಕೊಟ್ಟಿತು. ಇದನ್ನು ಸರಿಪಡಿಸುವುದಕ್ಕಾಗಿ ಕಳೆದ ವಿಧಾನಸಭೆಯಲ್ಲಿ ಕಂದಾಯ ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಆದರೆ ಆ ಜಿಲ್ಲೆಯ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಡೆ ಹಿಡಿದು ಸದನದ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿತ್ತು.' ಸದನ ಸಮಿತಿಯಲ್ಲದೇ, ಕೊಡಗು ಜಿಲ್ಲೆಯ ಜನರ ಅನಿಸಿಕೆಗಳನ್ನು ಆಲಿಸಿದ ನಂತರ ಈಗ ತಿದ್ದುಪಡಿಯನ್ನು ಅಂತಿಮಗೊಳಿಸಲಾಗಿದೆ.

ಜಿಲ್ಲೆಯಾದ್ಯಂತ ಪಟ್ಟೇದಾರ್ ಅದಾಲತ್ ಅನ್ನು ನಡೆಸಿ, ಮಾಲೀಕತ್ವ ಸಮಸ್ಯೆಯನ್ನು ಪರಿಹರಿಸಲಾಗುವುದು.

ಈಗಾಗಲೇ ಪಟ್ಟೇದಾರ್ ಕಾಲಂನಡಿ ತಲೆಮಾರುಗಳು ಭೂಮಿಯನ್ನು ಅನುಭವಿಸುತ್ತ ನಾಲ್ಕು ತಲೆಮಾರುಗಳು ಹೋದ ಪ್ರಕರಣಗಳಿವೆ. ಈ ಸಂಬಂಧ ವ್ಯಾಜ್ಯಗಳು ನಡೆಯುತ್ತಿವೆ. ತಹಶೀಲ್ದಾರ್ ಕೋರ್ಟ್‌ನಲ್ಲಿ ಈ ಪ್ರಕರಣಗಳನ್ನು ನಡೆಸಲಾಗುವುದು. ತಹಶೀಲ್ದಾರ್ ಕೋರ್ಟ್ ತೀರ್ಪು ತೃಪ್ತಿ ತಾರದೇ ಇದ್ದರೆ, ಉಪ ವಿಭಾಗಾಧಿಕಾರಿ, ಆ ನಂತರದ ಮೇಲ್ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೃಷ್ಣ ಭೈರೇಗೌಡ ತಿಳಿಸಿದರು.

ಒಟ್ಟಿನಲ್ಲಿ ದಶಕಗಳ ಕಾಲದ ಜಮ್ಮಾ ಬಾಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಇದೊಂದು ಕ್ರಾಂತಿಕಾರ ತಿದ್ದುಪಡಿ ಎಂದು ಬಣ್ಣಿಸಿದರು. ಪ್ರತಿಪಕ್ಷ ನಾಯಕ ಆರ್.ಅಶೋಕ, ಅರಗ ಜ್ಞಾನೇಂದ್ರ, ಪೊನ್ನಣ್ಣ ಮತ್ತಿತರರು ಸ್ವಾಗತಿಸಿದರು.

**ಆಧಾರ: ಸಂಯುಕ್ತ ಕರ್ನಾಟಕ,** ದಿನಾಂಕ:17.12.2025

## 11. ಒಳಮೀಸಲು ವಿಧೇಯಕಕ್ಕೆ ಅಂಗೀಕಾರ

ಪರಸ್ಪರ ರಾಜಕೀಯ ಕೆಸರೆರೆಚಾಟ, ಸುದೀರ್ಘ ಪರ–ವಿರೋಧದ ಚರ್ಚೆ ನಡುವೆ 2025ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ(ಉಪ–ವರ್ಗೀಕರಣ) ವಿಧೇಯಕ ಅಂಗೀಕಾರಗೊಂಡಿತು. ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ಕಲ್ಪಸುವ ಈ ಮಸೂದೆ ಅಂಗೀಕಾರದಿಂದ ಬಹುದೊಡ್ಡ ಜನ ಸಮುದಾಯ ನಿಟ್ಟುಸಿರುಬಿಟ್ಟಿದೆ.

ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇ.17ರಷ್ಟು ಮೀಸಲಾತಿಯಲ್ಲಿ ಪ್ರವರ್ಗ–ಎಗೆ (16 ಜಾತಿಗಳು) ಶೇ.6, ಪ್ರವರ್ಗ–ಬಿಗೆ (19 ಜಾತಿಗಳು) ಶೇ.6, ಪ್ರವರ್ಗ–ಸಿಗೆ (63 ಜಾತಿಗಳು) ಶೇ.5 ಸೇರಿದಂತೆ ಒಟ್ಟು 98 ಜಾತಿಗಳಿಗೆ ಒಳಮೀಸಲು ಹಂಚಿಕೆಯಾಗಲಿದೆ. ಈ ಮಸೂದೆಯ ಕುರಿತು ಸುದೀರ್ಘ ಚರ್ಚೆ ಬಳಿಕ ಕೆಲವರಿಗೆ ಮಾತನಾಡಲು ಅವಕಾಶ ನೀಡಲಿಲ್ಲ ಎನ್ನುವ ಪ್ರತಿಭಟನೆ ಮಧ್ಯೆಯೂ ದಿನಾಂಕ:18.12.2025ರಂದು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು.

ಒಳ ಮೀಸಲಾತಿಯಲ್ಲಿ ಬಲಗೈ, ಎಡಗೈ ಸಮುದಾಯಗಳಿಗೆ ತಲಾ ಶೇ.6ರಷ್ಟು ಮೀಸಲಾತಿ ನೀಡಲಾಗಿದೆ. ಅದರಂತೆ ಇನ್ನುಳಿದ ಕೊರಮ, ಕೊರಚ, ಲಂಬಾಣಿ ಸಮುದಾಯದ ಈಗಿರುವ ಶೇ.5 ರೊಂದಿಗೆ ಹೆಚ್ಚುವರಿ ಶೇ.1 ನೀಡಬೇಕು. ಈಗ ರಾಜ್ಯದಲ್ಲಿ ಶೇ.56ರಷ್ಟಿರುವ ಮೀಸಲು 57ಕ್ಕೇರಿಸಬೇಕು. ಮುಂಬಡ್ತಿ, ಎಸ್‌ಸಿಪಿ, ಟಿಎಸ್‌ಪಿ ಅನುದಾನದಲ್ಲಿಯೂ ಒಳಮೀಸಲಾತಿ ಜಾರಿ ಮಾಡಬೇಕು ಎನ್ನುವ ಕೂಗು ಪಕ್ಷಾತೀತವಾಗಿ ಕೇಳಿ ಬಂತು.

ಬಳಿಕ ಇದರ ಮೇಲೆ ನಡೆದ ಚರ್ಚೆಯಲ್ಲಿ ಮಾತನಾಡಿದ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ್, ಈ ಹಿಂದೆ ಬಸವರಾಜ ಬೊಮ್ಮಾಯಿ ನೇತೃತ್ವದ ಸರಕಾರ ಕೂಡಾ ಒಳಮೀಸಲಾತಿ ಪರ ನಿರ್ಣಯ ಕೈಗೊಂಡಿತ್ತು. ಅದರಂತೆ ಪ್ರಸ್ತುತ ಸರಕಾರ ನಡೆದುಕೊಳ್ಳುತ್ತಿದೆ. ಆದರೆ, ಅಂದು ಪ್ರತಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಅವರು ಇದಕ್ಕೆ ವಿರೋಧ ಮಾಡಿದ್ದರು ಎಂದು ದೂರಿದರು.

ಇದಕ್ಕೆ ಕೆಂಡಾಮಂಡಲರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು ಎಂದು ವಿರೋಧ ಮಾಡಿಲ್ಲ. ಸುಳ್ಳು ಆರೋಪ ಮಾಡಬೇಡಿ. ಆ ಬಗ್ಗೆ ದಾಖಲೆ ಕೊಟ್ಟು ಮಾತನಾಡಿ, ಸುಮ್ಮನೆ ನಾನು ಮೀಸಲಾತಿ ವಿರೋಧಿ ಎಂದು ಬಿಂಬಿಸಬೇಡಿ ಎಂದು ಗದರಿದರು. ನಾನು ಎಂದಿಗೂ ಮೀಸಲಾತಿ ಪರ, ಶೋಷಿತ ಜನರ ಪರ. ಪರಿಶಿಷ್ಟ ಜಾತಿ, ಪಂಗಡ ಸಮುದಾಯಗಳ ಮೀಸಲಾತಿಗೆ ವಿರೋಧ ಮಾಡಿಲ್ಲ. ಶೇ.50 ಅಲ್ಲ 75 ರಷ್ಟು ಮೀಸಲಾತಿ ಕೊಡಬೇಕು ಅಂತ ಹೇಳುತ್ತೇನೆ. ನನ್ನ ನಿಲುವು ಎಂದಿಗೂ ಬದಲಾಗಲ್ಲ ಎಂದು ಸ್ಪಷ್ಟಪಡಿಸಿದರು.

ಬಳಿಕ ಪ್ರತಿಪಕ್ಷ ನಾಯಕ ಆರ್.ಅಶೋಕ, 2023ರ ವೇಳೆ ಸದನದಲ್ಲಿ, ಸಿದ್ದರಾಮಯ್ಯ ಅವರಾಡಿದ ಮಾತಿನ ದಾಖಲೆ ಓದಿ, ನೀವು ಅಂದು ಮೀಸಲಾತಿ ಶೇ.50 ಮೀರಬಾರದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಅದನ್ನು ಮಾಡಲು ಸಂವಿಧಾನ ಬದಲಾವಣೆ ಮಾಡುವುದು 9ನೇ ಶೆಡ್ಯೂಲ್‌ಗೆ ತರಬೇಕಾಗುತ್ತದೆ. ಮೂಗಿಗೆ ತುಪ್ಪ ಸವರಿದರೆ ವಾಸನೆ ಬರುತ್ತದೆ ಎಂದು ಹಣೆಗೆ ಸವರುತ್ತಿದ್ದೀರಿ ಎಂದು ನೀವೇ ಹೇಳಿದ್ದೀರಿ ಎಂದರು.

ಈ ವೇಳೆ ಮತ್ತೆ ಎದ್ದು ನಿಂತ ಮುಖ್ಯಮಂತ್ರಿ ಅಂದಿನ ಕಡತದ ದಾಖಲೆಯನ್ನು ಪುನಃ ಓದಿ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು. ಬಳಿಕ ಅರವಿಂದ ಬೆಲ್ಲದ್, ಸಿದ್ದರಾಮಯ್ಯ ಅವರು ಮತ್ತು ನನ್ನ ಸಿದ್ಧಾಂತ, ತತ್ವ ಬೇರೆಯಾದರೂ ಅವರ ಮೇಲೆ ನನ್ನ ವೈಯುಕ್ತಿಕ ಗೌರವವಿದೆ. ಎಂದಿಗೂ ತೇಜೋವಧೆ ಮಾಡುವ ಕೆಲಸ ಮಾಡಿಲ್ಲ. ಈಗ ದಾಖಲೆ ನೀಡಿದ್ದು, ಸದನಕ್ಕೆ ನಾನು ಸುಳ್ಳು ಹೇಳಿದ್ದೇನೆ ಎನ್ನುವ ಮಾತು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಈ ವೇಳೆ ಆಡಳಿತ, ಪ್ರತಿಪಕ್ಷ ಸದಸ್ಯರ ನಡುವೆ ಗದ್ದಲ ಉಂಟಾಯಿತು.

**ಆಧಾರ:**ವಿಶ್ವವಾಣಿ, ದಿನಾಂಕ:19.12.2025

## 12. ಪರಿಷತ್ತಿನಲ್ಲಿ 5 ವಿಧೇಯಕಗಳ ಅಂಗೀಕಾರ

ವಿಧಾನಸಭೆಯಲ್ಲಿ ಅಂಗೀಕಾರಗೊಂಡ 5 ವಿಧೇಯಕಗಳಿಗೆ 18ನೇ ಡಿಸೆಂಬರ್ 2025ರಂದು ಪರಿಷತ್ತಿನಲ್ಲೂ ಅಂಗೀಕಾರ ದೊರೆಯಿತು. 2025ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕ, ಬೆಂಗಳೂರು ನಗರ ಭೂಸಾರಿಗೆ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, ಬಾಂಬೆ ಸಾರ್ವಜನಿಕ ನ್ಯಾಸ(ಕರ್ನಾಟಕ ತಿದ್ದುಪಡಿ) ವಿಧೇಯಕ ಹಾಗೂ ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ ತಿದ್ದುಪಡಿ) ವಿಧೇಯಕಗಳನ್ನು ಸದಸ್ಯರು ಅಂಗೀಕಾರ ಮಾಡಿದರು.

**ಆಧಾರ:** ವಿಶ್ವವಾಣಿ, ದಿನಾಂಕ:19.12.2025

## 13. ದ್ವೇಷ ಭಾಷಣ ಪ್ರತಿಬಂಧಕ ಬಿಲ್ ಪಾಸ್

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕ ಪರಿಷತ್‌ನಲ್ಲಿ ಸುದೀರ್ಘ ಚರ್ಚೆ, ಮಾತಿನ ಚಾಟಿ, ಪ್ರತಿಪಕ್ಷಗಳ ಪ್ರತಿಭಟನೆ, ಆರೋಪ ಪ್ರತ್ಯಾರೋಪಗಳ ನಡುವೆಯೇ 19ನೇ ಡಿಸೆಂಬರ್ 2025ರಂದು ಅಂಗೀಕಾರಗೊಂಡಿತು.

**ಆಧಾರ:** ವಿಶ್ವವಾಣಿ, ದಿನಾಂಕ:19.12.2025

## 14. ವಿಧಾನ ಪರಿಷತ್ ಸುದೀರ್ಘ 11.50 ತಾಸು ಕಲಾಪ

ಅಧಿವೇಶನದ ಕೊನೆ ದಿನವಾದ 19ನೇ ಡಿಸೆಂಬರ್ 2025ರಂದು ಪರಿಷತ್ ಕಲಾಪ ನಿರಂತರ 11.50 ತಾಸು ಚರ್ಚೆ ನಡೆಸುವ ಮೂಲಕ ವಿಶೇಷ ಸಂದರ್ಭಕ್ಕೆ ಸಾಕ್ಷಿ ಆಯಿತು.

ಕೊನೆಯಲ್ಲಿ ಉತ್ತರ ಕರ್ನಾಟಕ ಬಗ್ಗೆ ಸಿಎಂ ಮಾಡಿದ ಭಾಷಣ ತೃಪ್ತಿಕರವಾಗಿಲ್ಲ ಎಂದು ಪ್ರತಿಪಕ್ಷಗಳು ಸಭಾತ್ಯಾಗ ಮಾಡಿದರು. ಅದರ ನಂತರವೂ 25 ನಿಮಿಷ ಕಲಾಪ ನಡೆಯಿತು. ಬೆಳಗ್ಗೆ 10 ಗಂಟೆಗೆ ಶುರುವಾದ ಕಲಾಪ ರಾತ್ರಿ 9.50ರವರೆಗೆ ನಡೆಯಿತು.

ವಿಧಾನಸಭೆಯನ್ನು ಮಧ್ಯಾಹ್ನ 3.20 ಅನಿರ್ದಿಷ್ಟಾವಧಿ ಮುಂದೂಡಲಾಗಿತ್ತು. ಅದರ ಬಳಿಕವೂ ಪರಿಷತ್ ಕಲಾಪ ಹೆಚ್ಚುವರಿ 6.25 ತಾಸು ನಡೆಯಿತು. ಸಾಮಾನ್ಯವಾಗಿ ಅಧಿವೇಶನದ ಕೊನೆಯ ದಿನದ ಕಲಾಪ ಸಾಯಂಕಾಲಕ್ಕೂ ಮುನ್ನವೇ ಮುಗಿಯುತ್ತಿದ್ದವು. ಈ ಬಾರಿ ಪರಿಷತ್ ಕಲಾಪ ಬೇಗ ಮುಗಿಸಬೇಕು ಎಂದು ಹೇಳುತ್ತಲೇ ರಾತ್ರಿವರೆಗೆ ಮುಂದುವರಿಸಿದ್ದು ವಿಶೇಷವಾಗಿತ್ತು.

ಪ್ರತಿಪಕ್ಷಗಳ ಸಭಾತ್ಯಾಗದ ಬಳಿಕ ಸಿ.ಎಂ.ಸಿದ್ದರಾಮಯ್ಯ 5 ನಿಮಿಷ ಮಾತನಾಡಿ ಪ್ರತಿಪಕ್ಷಗಳು ಮಾಡಿದ್ದ ಆರೋಪಗಳಿಗೆ ಉತ್ತರ ದಾಖಲಿಸಿದರು. ಬಳಿಕ ವಿಧಾನಸಭೆಯಲ್ಲಿ ಅನುಮೋದನೆ ಆಗಿರುವ ಸಾಮಾಜಿಕ ಬಹಿಷ್ಕಾರ ವಿಧೇಯಕ ಅನುಮೋದನೆ ನಡೆಯಿತು. ಸಚಿವ ಎಚ್.ಕೆ ಪಾಟೀಲ್ ಉತ್ತರ ಕರ್ನಾಟಕ ಪರ 6 ನಿರ್ಣಯಗಳನ್ನು ಪ್ರಕಟಿಸಿದರು.

**ಆಧಾರ: ವಿಜಯ ಕರ್ನಾಟಕ,** ದಿನಾಂಕ:20.12.2025

## 15. 10 ದಿನ, 58 ಗಂಟೆ ಕಲಾಪ:22 ವಿಧೇಯಕ ಮಂಡನೆ

ಬೆಳಗಾವಿಯ ಸುವರ್ಣಸೌಧದಲ್ಲಿ ಜರುಗಿದ 16ನೇ ವಿಧಾನಸಭೆಯ 8ನೇ ಅಧಿವೇಶನಕ್ಕೆ 19ನೇ ಡಿಸೆಂಬರ್ 2025ರಂದು ತೆರೆಬಿದ್ದಿದೆ. 10 ದಿನಗಳ ಈ ಚಳಿಗಾಲ ಅಧಿವೇಶನದಲ್ಲಿ ಒಟ್ಟು 57 ಗಂಟೆ 35 ನಿಮಿಷ ಕಾರ್ಯಕಲಾಪಗಳು ನಡೆದು, 22 ವಿಧೇಯಕಗಳನ್ನು ಮಂಡಿಸಲಾಯಿತು. ಅಲ್ಲದೇ, ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ನಡೆದ ಚರ್ಚೆಯಲ್ಲಿ 39 ಸದಸ್ಯರು ಭಾಗವಹಿಸಿ ಸುಮಾರು 17 ಗಂಟೆ 2 ನಿಮಿಷ ಕಾಲ ಚರ್ಚೆ ನಡೆಸಿದ್ದು ವಿಶೇಷ.

ಕರ್ನಾಟಕ ವಿಧಾನಸಭೆಯ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ 2025ನೇ ಸಾಲಿನ ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕವು ಸೇರಿ ಒಟ್ಟು 23 ವಿಧೇಯಕಗಳನ್ನು ಪರ್ಯಾಯಲೋಚಿಸಿ ಅಂಗೀಕರಿಸಲಾಯಿತು. ಅಲ್ಲದೇ 22 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

ಒಟ್ಟು 54 ಅಧಿಸೂಚನೆಗಳು ಮತ್ತು 78 ವಾರ್ಷಿಕ ವರದಿಗಳು, 74 ಲೆಕ್ಕ ಪರಿಶೋಧನಾ ವರದಿಗಳು, ಅನುಪಾಲನಾ ವರದಿಗಳು ಹಾಗೂ 14 ಅನುಸರಣಾ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು.

ಒಟ್ಟು 2109 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 134 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 1974 ಪ್ರಶ್ನೆಗಳ ಪೈಕಿ 1750 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಯಿತು. ನಿಯಮ 351 ರಡಿಯಲ್ಲಿ 180 ಸೂಚಕಗಳನ್ನು ಅಂಗೀಕರಿಸಿದ್ದು 70 ಸೂಚನೆಗಳ ಉತ್ತರವನ್ನು ಸ್ವೀಕರಿಸಲಾಯಿತು. ಗಮನ ಸೆಳೆಯುವ 368 ಸೂಚನೆಗಳ ಪೈಕಿ 228 ಸೂಚನೆಗಳಿಗೆ ಉತ್ತರವನ್ನು ಸ್ವೀಕರಿಸಲಾಯಿತು. ಶೂನ್ಯ ವೇಳೆಯಲ್ಲಿ 2 ಸೂಚನೆಗಳ ಬಗ್ಗೆ ಚರ್ಚಿಸಲಾಗಿದೆ.

**ಆಧಾರ:** ಉದಯವಾಣಿ, ದಿನಾಂಕ:20.12.2025

# ಭಾಗ–2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

## 1. ಕರ್ನಾಟಕ ವಿಧಾನ ಪರಿಷತ್ತಿನ 157ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ವಿಧಾನ ಪರಿಷತ್ತಿನ 157ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:08.12.2025ರಿಂದ 19.12.2025ರವರೆಗೆ ಒಟ್ಟು 10 ದಿನಗಳು ಅಂದರೆ, 62 ಗಂಟೆ 05 ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 11 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಅವರು ನೂತನವಾಗಿ ಶಿವಮೊಗ್ಗ ವಲಯ ಸಂಚಾಲಕರಾಗಿ ಮತ್ತು ಕನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಯಾಗಿರುವುದಕ್ಕೆ ಹಾಗೂ ಗುಲಾಬಿ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾಗಿರುವ ಮಾನ್ಯ ಶಾಸಕರಾದ ಡಾ: ಉಮಾಶ್ರೀ ಅವರು ರಂಗಭೂಮಿ, ಚಲನಚಿತ್ರರಂಗ ಹಾಗೂ ರಾಜಕೀಯರಂಗದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಡಾ:ರಾಜ್‌ಕುಮಾರ್ ಜೀವಮಾನ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಸದನವು ಅಭಿನಂದನೆಯನ್ನು ಸಲ್ಲಿಸಲಾಯಿತು.

2025–26ನೇ ಸಾಲಿನ ಪೂರಕ ಅಂದಾಜುಗಳು ಎರಡನೇಕಂತು, 2025–26ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1 ಮತ್ತು 2ನೇ ಪಟ್ಟಿಗಳನ್ನು ಮಂಡಿಸಲಾಯಿತು. ಭಾರತ ಸಂವಿಧಾನದ 151(2)ನೇ ಅನುಚ್ಛೇಧದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ "ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್ ವರದಿ (2025ರ ವರದಿ ಸಂಖ್ಯೆ–7), ಕರ್ನಾಟಕದಲ್ಲಿ ವಿಪತ್ತು ನಿರ್ವಹಣಾಕಾರ್ಯನಿರ್ವಹಣೆ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್) (2025ರ ವರದಿ ಸಂಖ್ಯೆ–8) ಹಾಗೂ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲಿನ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ವಾಣಿಜ್ಯ) (2025ರ ವರದಿ ಸಂಖ್ಯೆ–9) ಮತ್ತು 2024–25ನೇ ಸಾಲಿನ ಧನವಿನಿಯೋಗ ಲೆಕ್ಕಗಳು (ಸಂಪುಟ–I) ಹಾಗೂ (ಸಂಪುಟ–II ಭಾಗ–1 ಮತ್ತು 2) ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯ ಎರಡು ಅರ್ಜಿಗಳನ್ನು ಹಾಗೂ 2024–25ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದನೇ ವರದಿಯನ್ನು ಒಪ್ಪಿಸಲಾಯಿತು.

"ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ:02.12.2025ರಿಂದ ಆರು ತಿಂಗಳವರೆಗೆ ವಿಸ್ತರಿಸುವ ಹಾಗೂ ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತು ್ತಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು

ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.07.2025ರಿಂದ ಹನ್ನೆರಡು ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವನೆಗಳನ್ನು ಮಂಡಿಸಿ ಅಂಗೀಕರಿಸಲಾಯಿತು.

ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಅವರು ಕೊಡಗು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರ ವಿರುದ್ಧ ಮಂಡಿಸಿದ ಹಕ್ಕುಚ್ಯುತಿಯನ್ನು ಮಾನ್ಯ ಸಭಾಪತಿಯವರು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗೆ ವಹಿಸಿದರು.

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು 5 ಗಂಟೆ 48 ನಿಮಿಷಗಳ ಕಾಲ ವಿಶೇಷ ಚರ್ಚೆಯಾಗಿರುತ್ತದೆ.

ಏಳು ಅಧಿಕೃತ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ನಿಯಮ 59 ರಡಿಯಲ್ಲಿ ಒಟ್ಟು 03 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಸದರಿ ಸೂಚನೆಯ ಪೈಕಿ ಒಂದು ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚಿಸಲಾಯಿತು. ಒಂದು ಸೂಚನೆಯನ್ನು ನಿಯಮ 330ಕ್ಕೆ ಪರಿವರ್ತಿಸಲಾಯಿತು. ಉಳಿದಂತೆ 01 ಸೂಚನೆಯನ್ನು ತಿರಸ್ಕರಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1628 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಹಾಗೂ 1478 ಪ್ರಶ್ನೆಗಳನ್ನು ಚುಕ್ಕೆ ರಹಿತ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 144 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1478 ಪ್ರಶ್ನೆಗಳ ಪೈಕಿ 1148 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 165 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 18 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 74 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 108 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 34 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 102 ಸೂಚನೆಗಳ ಪೈಕಿ 04 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 45 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 16 ವಿಧೇಯಕಗಳು ಸೇರಿದಂತೆ ಒಟ್ಟು 23 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:-

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ರಾತ್ರಿ 9.45ಗಂಟೆಯಲ್ಲಿ ರಾಷ್ಟ್ರಗೀತೆಯನ್ನು ನುಡಿಸುವುದರ ಮೂಲಕ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.

********

**2.2025–26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನ**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ –2

## (ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

## ಸೋಮವಾರ, ದಿನಾಂಕ:17ನೇ ನವೆಂಬರ್, 2025

*****

**ಸಂಖ್ಯೆ:44**

**2025–26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನ**

2025–26ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಮತ್ತು ವಿಧಾನ ಪರಿಷತ್ತಿನ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನಾಗಿ ಈ ಕೆಳಕಂಡ ಮಾನ್ಯ ಶಾಸಕರುಗಳನ್ನು ದಿನಾಂಕ:17ನೇ ನವೆಂಬರ್, 2025ರಿಂದ ಜಾರಿಗೆ ಬರುವಂತೆ ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಶಾಸಕರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

### ಅ) ಜಂಟಿ ಸಮಿತಿಗಳು

### 1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಅಡಗೂರ್ ಹೆಚ್. ವಿಶ್ವನಾಥ್ |
| 2. | ಬಿ.ಕೆ. ಹರಿಪ್ರಸಾದ್ |
| 3. | ಸಿ.ಟಿ. ರವಿ |
| 4. | ಡಾ: ಎಂ.ಆರ್. ಸೀತಾರಾಂ |
| 5. | ಎಸ್.ಎಲ್. ಭೋಜೇಗೌಡ |

## 2. ಅಧೀನ ಶಾಸನ ರಚನಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಶರವಣ ಟಿ.ಎ. |
| 2. | ಡಾ: ಯತೀಂದ್ರ ಎಸ್. |
| 3. | ಚಿದಾನಂದ್ ಎಂ. ಗೌಡ |
| 4. | ಲಖನ್ ಲಕ್ಷ್ಮಣರಾವ್ ಜಾರಕಿಹೊಳಿ |
| 5. | ಶಿವಕುಮಾರ್ ಕೆ. |

## 3. ಸಾರ್ವಜನಿಕ ಉದ್ಯಮಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಡಾ:ಕೆ. ಗೋವಿಂದರಾಜ್ |
| 2. | ಐವನ್ ಡಿ ಸೋಜಾ |
| 3. | ವೈ.ಎಂ. ಸತೀಶ್ |
| 4. | ಟಿ.ಎನ್. ಜವರಾಯಿಗೌಡ |
| 5. | ಕಿಶೋರ್‌ಕುಮಾರ್ ಪುತ್ತೂರ್ |

## 4. ಅನುಸೂಚಿತಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಶಾಂತಾರಾಮ್ ಬುಡ್ನ ಸಿದ್ದಿ |
| 2. | ಡಾ: ಡಿ. ತಿಮ್ಮಯ್ಯ |
| 3. | ಹೇಮಲತಾ ನಾಯಕ |
| 4. | ಹೆಚ್.ಪಿ. ಸುಧಾಮದಾಸ್ |
| 5. | ಎಫ್.ಎಚ್. ಜಕ್ಕಪ್ಪನವರ್ |

## 5. ಹಿಂದುಳಿದ ವರ್ಗಗಳ ಮತ್ತುಅಲ್ಪಸಂಖ್ಯಾತರಕಲ್ಯಾಣ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಕೆ. ಅಬ್ದುಲ್‌ಜಬ್ಬಾರ್ |
| 2. | ಚನ್ನರಾಜ್ ಬಸವರಾಜ್ ಹಟ್ಟಿಹೊಳಿ |
| 3. | ಹೆಚ್.ಎಸ್. ಗೋಪಿನಾಥ್ |
| 4. | ಕೇಶವ ಪ್ರಸಾದ್. ಎಸ್ |
| 5. | ಕೆ. ವಿವೇಕಾನಂದ |

## 6. ಸಭೆಯ ಮುಂದಿಡಲಾಗುವಕಾಗದ ಪತ್ರಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಎನ್.ನಾಗರಾಜು (ಎಂಟಿಬಿ) |
| 2. | ಡಾ:ಎಂ.ಜಿ. ಮುಳೆ |
| 3. | ಎಂ.ಎಲ್. ಅನಿಲ್ ಕುಮಾರ್ |
| 4. | ಎ. ವಸಂತಕುಮಾರ್ |
| 5. | ಜಗದೇವ್ ಗುತ್ತೇದಾರ್ |

## 7. ಮಹಿಳಾ ಮತ್ತು ಮಕ್ಕಳ ಕಲ್ಯಾಣಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಭಾರತಿ ಶೆಟ್ಟಿ |
| 2. | ಶರಣಗೌಡ ಬಯ್ಯಾಪುರ |
| 3. | ಬಲ್ಕೀಸ್ ಬಾನು |
| 4. | ಡಾ:ಧನಂಜಯ ಸರ್ಜಿ |
| 5. | ಕೆ. ವಿವೇಕಾನಂದ |

## 8. ಗ್ರಂಥಾಲಯಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಎಸ್.ವ್ಹಿ. ಸಂಕನೂರ |
| 2. | ಡಾ: ಯತೀಂದ್ರ ಎಸ್. |
| 3. | ಶರಣಗೌಡ ಬಯ್ಯಾಪುರ |

## 9. ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್‌ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಪಿ.ಹೆಚ್. ಪೂಜಾರ್ |
| 2. | ಭೀಮರಾವ್ ಬಸವರಾಜ ಪಾಟೀಲ್ |
| 3. | ರಾಜೇಂದ್ರ ರಾಜಣ್ಣ |
| 4. | ಗಣಪತಿದುಮ್ಮಾ ಉಳ್ವೇಕರ್ |
| 5. | ಸಿ.ಎನ್. ಮಂಜೇಗೌಡ |

## ಆ) ವಿಧಾನ ಪರಿಷತ್ತಿನ ಸಮಿತಿಗಳು

## 01. ಹಕ್ಕುಬಾಧ್ಯತಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಭಾರತಿ ಶೆಟ್ಟಿ |
| 2. | ಎಸ್.ವ್ಹಿ. ಸಂಕನೂರ |
| 3. | ನಿರಾಣಿ ಹಣಮಂತ್ ರುದ್ರಪ್ಪ |
| 4. | ಶರವಣ ಟಿ.ಎ. |
| 5. | ಡಾ:ಚಂದ್ರಶೇಖರ ಬಸವರಾಜ ಪಾಟೀಲ |
| 6. | ಕೆ.ಎಸ್. ನವೀನ್ |
| 7. | ಮಂಜುನಾಥ್ ಭಂಡಾರಿ |
| 8. | ತಿಪ್ಪಣ್ಣಪ್ಪ ಕಮಕನೂರ |
| 9. | ರಾಮೋಜಿಗೌಡ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 194(4)ರ ಮೇರೆಗೆ ಮಾನ್ಯ ಸಭಾಪತಿಯವರು **ಶ್ರೀ ಮಂಜುನಾಥ್ ಭಂಡಾರಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 02. ಸರ್ಕಾರಿ ಭರವಸೆಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಶಶಿಲ್ ಜಿ. ನಮೋಶಿ |
| 2. | ಡಾ: ಉಮಾಶ್ರೀ |
| 3. | ಪಿ.ಹೆಚ್. ಪೂಜಾರ್ |
| 4. | ಡಾ: ತಳವಾರ್ ಸಾಬಣ್ಣ |
| 5. | ಪ್ರತಾಪ್ ಸಿಂಹ ನಾಯಕ್ ಕೆ. |
| 6. | ಗೋವಿಂದರಾಜು |
| 7. | ಮಧು ಜಿ. ಮಾದೇಗೌಡ |
| 8. | ಎಂ. ನಾಗರಾಜು |
| 9. | ಡಾ:ಆರತಿ ಕೃಷ್ಣ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 194(4)ರ ಮೇರೆಗೆ ಮಾನ್ಯ ಸಭಾಪತಿಯವರು **ಶ್ರೀ ಗೋವಿಂದರಾಜು** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ

## 03. ಅರ್ಜಿಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಪುಟ್ಟಣ್ಣ |
| 2. | ಸುನೀಲ್ ವಲ್ಯಾಪುರ್ |
| 3. | ಪ್ರದೀಪ್ ಶೆಟ್ಟರ್ |
| 4. | ಸೂರಜ್ ರೇವಣ್ಣ |
| 5. | ಡಿ.ಎಸ್. ಅರುಣ್ |
| 6. | ರಮೇಶ್ ಬಾಬು |
| 7. | ಬಸನಗೌಡ ಬಾದರ್ಲಿ |
| 8. | ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) |

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 243(1)ರ ಮೇರೆಗೆ **ಶ್ರೀ ಎಂ.ಕೆ. ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರು** ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 04. ವಸತಿ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಎಸ್.ರವಿ |
| 2. | ಬಿ.ಜಿ. ಪಾಟೀಲ್ |
| 3. | ಸುನೀಲ್‌ಗೌಡ ಪಾಟೀಲ್ |
| 4. | ಕುಶಾಲಪ್ಪ ಎಂ.ಪಿ(ಸುಜಾ) |
| 5. | ಗಣಪತಿದುಮ್ಮಾ ಉಳ್ವೇಕರ್ |

ಕರ್ನಾಟಕ ವಿಧಾನ ಪರಿಷತ್ತಿನಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 349(2)ರ ಮೇರೆಗೆಶ್ರೀ **ಎಂ.ಕೆ. ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರು** ಸಮಿತಿಯಅಧ್ಯಕ್ಷರಾಗಿರುತ್ತಾರೆ.

## 05. ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಡಾ: ಉಮಾಶ್ರೀ |
| 2. | ಶರವಣಟಿ.ಎ. |
| 3. | ಎಸ್.ಎಲ್. ಭೋಜೇಗೌಡ |
| 4. | ಪ್ರತಾಪ್‌ಸಿಂಹ ನಾಯಕ್ ಕೆ. |
| 5. | ಕೆ.ಎಸ್. ನವೀನ್ |
| 6. | ಕೇಶವ ಪ್ರಸಾದ್ ಎಸ್. |
| 7. | ಚನ್ನರಾಜ್ ಬಸವರಾಜ ಹಟ್ಟಿಹೊಳಿ |
| 8. | ಎಂ. ನಾಗರಾಜು |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 261(1)ರ ಮೇರೆಗೆ **ಶ್ರೀ ಎಂ.ಕೆ. ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರು** ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 06. ನೀತಿ ನಿರೂಪಣಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ |
|---|---|
| 1. | ಬಿ.ಕೆ. ಹರಿಪ್ರಸಾದ್ |
| 2. | ಸುನೀಲ್ ವಲ್ಯಾಪುರ್ |
| 3. | ಎಸ್.ಎಲ್.ಭೋಜೇಗೌಡ |
| 4. | ಡಿ.ಎಸ್. ಅರುಣ್ |
| 5. | ಸಿ.ಎನ್. ಮಂಜೇಗೌಡ |
| 6. | ಶಿವಕುಮಾರ್ ಕೆ. |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242ಸಿ(1)(ಬಿ)ರ ಮೇರೆಗೆ **ಶ್ರೀ ಎಂ.ಕೆ. ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರು** ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

ಕೆ.ಆರ್. ಮಹಾಲಕ್ಷ್ಮಿ

**ಕಾರ್ಯದರ್ಶಿ**

ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳಿಗೆ,**

www***://kla.kar.nic.in/council/council.htm***

## 3. ವಿಶೇಷ ಸದನ ಸಮಿತಿಯ ರಚನೆ

**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ – 2**

**ಪರಿಷ್ಕೃತ**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಗುರುವಾರ, 18ನೇ ಡಿಸೆಂಬರ್ 2025**

*****

**ಸಂಖ್ಯೆ:48**

**ವಿಧಾನ ಪರಿಷತ್ತಿನ 157ನೇ ಅಧಿವೇಶನದಲ್ಲಿ ದಿನಾಂಕ:08.12.2025ರಂದು ಮಾನ್ಯ ಶಾಸಕರುಗಳಾದ ಶ್ರೀ ಪುಟ್ಟಣ್ಣ, ಶ್ರೀ ಶಶೀಲ್ ಜಿ ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ ಮತ್ತು ಶ್ರೀ ಎಸ್.ಎಲ್. ಭೋಜೇಗೌಡ ಅವರುಗಳು ನಿಯಮ 330ರಡಿಯಲ್ಲಿ ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:08.03.2018ರಲ್ಲಿ ಉಲ್ಲೇಖಿಸಲಾಗಿರುವ ಶಾಲೆಗಳ ಮಾನ್ಯತೆ ನವೀಕರಣದ ನಿಯಮಗಳನ್ನು ಸಡಿಲಿಸಿ ವಿನಾಯಿತಿ ನೀಡಬೇಕೆಂಬ ವಿಷಯದ ಕುರಿತು ಸದನದಲ್ಲಿ ಪ್ರಸ್ತಾಪಿಸಲಾಗಿದ್ದು, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)ರ ರೀತ್ಯಾ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ 8 ಮಾನ್ಯ ಶಾಸಕರನ್ನೊಳಗೊಂಡಂತೆ ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿಯನ್ನು ಸಲ್ಲಿಸುವುದು.**

**ಶ್ರೀಮತಿ/ಶ್ರೀಯುತರುಗಳಾದ:**

1. **ಶಶೀಲ್ ಜಿ. ನಮೋಶಿ**
2. **ಎಸ್. ವ್ಹಿ. ಸಂಕನೂರ**
3. **ನಿರಾಣಿ ಹಣಮಂತ್ ರುದ್ರಪ್ಪ**
4. **ಎಸ್.ಎಲ್. ಭೋಜೇಗೌಡ**
5. **ಬಲ್ಕೀಸ್ ಬಾನು**
6. **ರಾಮೋಜಿಗೌಡ**
7. **ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)**
8. **ಕೆ. ವಿವೇಕಾನಂದ**

ಪರಿಶೀಲನಾಂಶಗಳು

1. ರಾಜ್ಯದಲ್ಲಿ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:07.03.2018 ಮತ್ತು ಸಂಖ್ಯೆ: ಇಡಿ/709/ಪಿಜಿಸಿ/2017 ದಿನಾಂಕ:08.03.2018ರ ರೀತ್ಯಾ ಕರ್ನಾಟಕ ಶಿಕ್ಷಣ ಕಾಯ್ದೆ,2013 ಮತ್ತು ಆರ್.ಟಿ.ಇ ನಿಯಮ,2012ರ ಅಡಿಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿರುವ ದಾಖಲಾತಿಗಳನ್ನು ಆಡಳಿತ ಮಂಡಳಿಯವರು ಒದಗಿಸಲು ಅನಾನುಕೂಲವಾಗುತ್ತಿರುವ ಬಗ್ಗೆ ಪರಿಶೀಲಿಸುವುದು;
2. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ 15ಮೀ.ಕ್ಕಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಅನ್ವಯಿಸುವುದಿಲ್ಲವೆಂದು ತಿಳಿಸಲಾಗಿದ್ದರೂ ಅದನ್ನು ಅನುಸರಿಸದಿರುವ ಬಗ್ಗೆ ಪರಿಶೀಲಿಸುವುದು;
3. ಶಾಲೆ ನಡೆಸಲು ಜಾಗದ ಕೊರತೆಯಾಗಿರುವ ಶಾಲೆಗಳು, ಸ್ಥಳಾಂತರ ಮತ್ತು ಹಸ್ತಾಂತರವಾಗಿದ್ದರೆ ಅವುಗಳನ್ನು ಹೊಸ ಶಾಲೆಗಳೆಂದು ಪರಿಗಣಿಸುತ್ತಿರುವುದರಿಂದಾಗಿ ಉಂಟಾಗಿರುವ ಅನಾನುಕೂಲಗಳ ಕುರಿತು ಪರಿಶೀಲಿಸುವುದು;
4. ಈಗಾಗಲೆ 2 ಅಥವಾ 3 ಬಾರಿ ಹಸ್ತಾಂತರ ಹಾಗೂ ಸ್ಥಳಾಂತರವಾಗಿರುವ ಶಾಲೆಗಳು ಮತ್ತೊಮ್ಮೆ ಸ್ಥಳಾಂತರ/ಹಸ್ತಾಂತರ ಮಾಡಲು ಅವಕಾಶ ನೀಡದೆ ತಡೆಹಿಡಿದಿರುವ ಬಗ್ಗೆ ಪರಿಶೀಲಿಸುವುದು;
5. ಒಂದೇ ಆವರಣದಲ್ಲಿ ಕೇಂದ್ರ ಪಠ್ಯಕ್ರಮ ಹಾಗೂ ರಾಜ್ಯ ಪಠ್ಯಕ್ರಮದ ಶಾಲೆಗಳು ನಡೆಯುತ್ತಿದ್ದರೆ, ಆ ಶಾಲೆಗಳಿಗೆ ಮಾನ್ಯತೆ ನೀಡದಿರುವುದರ ಬಗ್ಗೆ ಪರಿಶೀಲಿಸುವುದು;
6. ಮಾನ್ಯತೆ ನವೀಕರಣವಾಗದ ಸಂದರ್ಭದಲ್ಲಿ, ಖಾಸಗಿ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಯಲ್ಲಿ ಖಾಸಗಿಯಾಗಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವುದರಿಂದ ಉಂಟಾಗುವ ಅನಾನುಕೂಲಗಳ ಬಗ್ಗೆ ಪರಿಶೀಲಿಸುವುದು;
7. ಮಾನ್ಯತೆ ನವೀಕರಣದಿಂದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದು;
8. ದಿನಾಂಕ:08.03.2018ರ ಸರ್ಕಾರಿ ಆದೇಶ ಸಂಖ್ಯೆ: ಇಡಿ/709/ಪಿಜಿಸಿ/2017ರಲ್ಲಿನ ನಿಯಮಗಳನ್ನು ಸಡಿಲಿಸುವ ಸಂಬಂಧ ಪುನರ್ ಪರಿಶೀಲಿಸುವುದು;
9. ಇನ್ನಿತರೆ ವಿಷಯಗಳು.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

## 4. ವಿಶೇಷ ಸದನ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ

ಕರ್ನಾಟಕ ವಿಧಾನ ಪರಿಷತ್ತು

**ಲಘು ಪ್ರಕಟಣೆ ಭಾಗ – 2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಗುರುವಾರ, 18ನೇ ಸೆಪ್ಟೆಂಬರ್ 2025**

*****

**ಸಂಖ್ಯೆ : 49**

ದಿನಾಂಕ:16.12.2025ರಂದು ಹೊರಡಿಸಲಾದ ಲಘು ಪ್ರಕಟಣೆಯನ್ನು ಮಾರ್ಪಡಿಸುತ್ತಾ, ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಶಶಿಲ್ ಜಿ ನಮೋಶಿ ಅವರನ್ನು ವಿಶೇಷ ಸದನ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳ ಗಮನಕ್ಕೆ ತರಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ**

***http://kla.kar.nic.in/council/council.htm***

## ೫. ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ

# ಕರ್ನಾಟಕ ವಿಧಾನ ಪರಿಷತ್ತು ಲಘು ಪ್ರಕಟಣೆ ಭಾಗ–2

## (ನೂರ ಐವತ್ತೈದನೇ ಅಧಿವೇಶನ)

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶುಕ್ರವಾರ, ದಿನಾಂಕ: 26ನೇ ಡಿಸೆಂಬರ್ 2025**

**ಸಂಖ್ಯೆ: 50**

ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.07.2025 ರಿಂದ ದಿನಾಂಕ:13.07.2026ರವರೆಗೆ ವಿಸ್ತರಿಸಲಾಗಿಯೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್.ಮಹಾಲಕ್ಷ್ಮಿ,**
ಕಾರ್ಯದರ್ಶಿ,

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.**

## 16ನೇ ವಿಧಾನಸಭೆಯ 8ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

- 16ನೇ ವಿಧಾನ ಸಭೆಯ 8ನೇ ಅಧಿವೇಶನವು ದಿನಾಂಕ 8ನೇ ಡಿಸೆಂಬರ್, 2025ರಂದು ಬೆಳಗಾವಿ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಪ್ರಾರಂಭವಾಗಿ 19ನೇ ಡಿಸೆಂಬರ್, 2025 ರವರೆಗೆ 10 ದಿನಗಳ ಕಾಲ ಸುಮಾರು 57 ಗಂಟೆ 35 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.
- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- 2025–26ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತನ್ನು ದಿನಾಂಕ:17.12.2025ರಂದು ಮಂಡಿಸಿ, ದಿನಾಂಕ:18.12.2025 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಯಿತು. ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ದಿನಾಂಕ:18.12.2025ರಂದು ಮಂಡಿಸಲಾಗಿದೆ.
- **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ಕೆಳಕಂಡ 04 ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.**

1. 2024–25ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ I) & (ಸಂಪುಟ IIರ ಭಾಗ 1 ಮತ್ತು 2)
2. ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (ಪಿಎಂಕೆಕೆಕೆವೈ) ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಒಳಗೊಂಡಂತೆ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್) ವರದಿ (2025ನೇ ಸಾಲಿನ ವರದಿ ಸಂಖ್ಯೆ:7)
3. ಕರ್ನಾಟಕದಲ್ಲಿ ವಿಪತ್ತು ನಿರ್ವಹಣಾ ಕಾರ್ಯನಿರ್ವಹಣೆ (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ – ಸಿವಿಲ್) ವರದಿ (2025ರ ವರದಿ ಸಂಖ್ಯೆ:8)
4. "ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲಿನ" (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ – ವಾಣಿಜ್ಯ) (2025ನೇ ಸಾಲಿನ ವರದಿ ಸಂಖ್ಯೆ:9)

**–: 2 :–**

- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು 22 ವಿಧೇಯಕಗಳನ್ನು ಮಂಡಿಸಿ, ಕರ್ನಾಟಕ ವಿಧಾನಸಭೆಯ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ, 2025ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವು ಸೇರಿದಂತೆ ಒಟ್ಟು 23 ವಿಧೇಯಕಗಳನ್ನು ಪರ್ಯಾಲೋಚಿಸಿ, ಅಂಗೀಕರಿಸಲಾಗಿದೆ.
- ನಿಯಮ 60 ರಡಿಯಲ್ಲಿ ನೀಡಿದ್ದ 01 ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತಿಸಿ ಚರ್ಚಿಸಲಾಗಿದೆ.
- ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ನಡೆದ ಚರ್ಚೆಯಲ್ಲಿ 39 ಸದಸ್ಯರುಗಳು ಭಾಗವಹಿಸಿದ್ದು, ಸುಮಾರು 17 ಗಂಟೆ 02 ನಿಮಿಷಗಳ ಕಾಲ ಚರ್ಚೆ ನಡೆಸಲಾಗಿದೆ.
- 2025ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಿ, ವರದಿ ನೀಡಲು ರಚಿಸಲಾಗಿದ್ದ ಕರ್ನಾಟಕ ವಿಧಾನಸಭೆಯ ಪರಿಶೀಲನಾ ಸಮಿತಿಯ ವರದಿ, ಕರ್ನಾಟಕ ವಿಧಾನ ಸಭೆಯ ಹಕ್ಕುಬಾಧ್ಯತೆಗಳ ಸಮಿತಿಯ 2023–24ನೇ ಸಾಲಿನ ಮೊದಲನೇ ವರದಿ ಮತ್ತು 2024–25ನೇ ಸಾಲಿನ ಮೊದಲನೇ ಮತ್ತು ಎರಡನೇ ವರದಿ, ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 2024–25ನೇ ಸಾಲಿನ ಒಂದನೇ ವರದಿ ಹಾಗೂ ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2025–26ನೇ ಸಾಲಿನ ನಾಲ್ಕನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- 22 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.
- ಸಭೆಯ ಮುಂದಿಡಲಾದ ಕಾಗದ ಪತ್ರಗಳ 1 ಮತ್ತು 2 ಪಟ್ಟಿಯಿಂದ ಒಟ್ಟು 54 ಅಧಿಸೂಚನೆಗಳು, ಮತ್ತು 78 ವಾರ್ಷಿಕ ವರದಿಗಳು, 74 ಲೆಕ್ಕ ಪರಿಶೋಧನಾ ವರದಿಗಳು, 14 ಅನುಪಾಲನ ವರದಿಗಳು ಹಾಗೂ 14 ಅನುಸರಣಾ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ.
- ಒಟ್ಟು 2109 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 134 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 1974 ಪ್ರಶ್ನೆಗಳ ಪೈಕಿ 1750 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ನಿಯಮ 351 ರಡಿಯಲ್ಲಿ 180 ಸೂಚನೆಗಳನ್ನು ಅಂಗೀಕರಿಸಿದ್ದು, 70 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಗಮನ ಸೆಳೆಯುವ 368 ಸೂಚನೆಗಳ ಪೈಕಿ 228 ಸೂಚನೆಗಳಿಗೆ ಉತ್ತರವನ್ನು ಸ್ವೀಕರಿಸಲಾಗಿದೆ.
- ಶೂನ್ಯ ವೇಳೆಯಲ್ಲಿ 02 ಸೂಚನೆಗಳ ಬಗ್ಗೆ ಚರ್ಚಿಸಲಾಗಿದೆ.
- **ಈ ಕೆಳಕಂಡ ಅಧಿಕೃತ ನಿರ್ಣಯಗಳನ್ನು ದಿನಾಂಕ:18.12.2025ರಂದು ಸದನದಲ್ಲಿ ಮಂಡಿಸಲಾಗಿದ್ದು, ಸದನವು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.**

1) ರಾಯಚೂರು ಜಿಲ್ಲೆಯಲ್ಲಿ ತಕ್ಷಣವೇ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ಅನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಆಗ್ರಹಿಸುವ ಬಗ್ಗೆ.
2) ಬೆಂಗಳೂರು–ಮೈಸೂರು ಪ್ರದೇಶದಲ್ಲಿ ಕೇಂದ್ರಿಕೃತವಾಗಿರುವ 73 ರಾಷ್ಟ್ರೀಯ ಪ್ರಾಮುಖ್ಯತೆಯ ಕೇಂದ್ರ ಸರ್ಕಾರದ ಸಂಸ್ಥೆಗಳನ್ನು ಗುರುತಿಸಿ, ಅವುಗಳಲ್ಲಿ ಕನಿಷ್ಟ 25 ಪ್ರಮುಖ ಸಂಶೋಧನಾ ಸಂಸ್ಥೆಗಳು ಸೇರಿದಂತೆ, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವರ್ಗಾಯಿಸಲು ಭಾರತ ಸರ್ಕಾರವನ್ನು ಆಗ್ರಹಿಸುವ ಬಗ್ಗೆ.
3) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 (UKP-III)ನ್ನು ತಕ್ಷಣವೇ ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು, ಕೇಂದ್ರ ಅನುದಾನ ಬಿಡುಗಡೆ ಮಾಡಲು ಮತ್ತು ಕೃಷ್ಣಾ ಜಲವಿವಾದ ನ್ಯಾಯಾಧೀಕರಣ–2 (KWDT-II)ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆಗೆ ಒತ್ತಾಯಿಸುವ ಬಗ್ಗೆ
4) ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗೆ ರೂ.5000 ಕೋಟಿ ಹೊಂದಾಣಿಕೆ ಅನುದಾನವನ್ನು ವಿದರ್ಭ ಅಭಿವೃದ್ಧಿ ಮಾದರಿಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡುವಂತೆ ಆಗ್ರಹಿಸುವ ಬಗ್ಗೆ
5) ಕರ್ನಾಟಕದಲ್ಲಿ ಕಬ್ಬು ಮತ್ತು ಇತರೆ ಕಚ್ಚಾ ವಸ್ತುಗಳನ್ನು ಆಧರಿಸಿ ಉತ್ಪಾದಿಸುವ ಎಥೆನಾಲ್ ಸಾಮರ್ಥ್ಯಕ್ಕೆ ಅನುಗುಣವಾಗಿ ತಾರತಮ್ಯ ಮಾಡದೇ ಸಮಾನವಾದ ಎಥೆನಾಲ್ ಸಂಗ್ರಹಣೆ ಪ್ರಮಾಣವನ್ನು ನಿಗದಿಪಡಿಸಿ ರೈತರ ರಕ್ಷಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುವ ಬಗ್ಗೆ
6) ಮಹದಾಯಿ ನ್ಯಾಯಾಧೀಕರಣದ ತೀರ್ಪಿನನ್ವಯ ಕುಡಿಯುವ ನೀರು ಪೂರೈಕೆಯ ಮಹತ್ವಾಕಾಂಕ್ಷೆಯ ಕಳಸಾ–ಬಂಡೂರಿ ನಾಲಾ ತಿರುವು ಯೋಜನೆಗೆ ಅಗತ್ಯವಿರುವ ಅರಣ್ಯ ಮತ್ತು ವನ್ಯಜೀವಿ ಮಂಡಳಿಗಳ ಅನುಮೋದನೆಗಳನ್ನು ತ್ವರಿತವಾಗಿ ಒದಗಿಸಲು ಭಾರತ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ.
7) ರಾಜ್ಯದ ಮೀಸಲಾತಿ ಅಧಿನಿಯಮಗಳನ್ನು ಭಾರತ ಸಂವಿಧಾನದ ಒಂಭತ್ತನೇ ಅನುಸೂಚಿಗೆ (9th Schedule) ಸೇರ್ಪಡೆಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ.

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಉಪ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ಬೆಳಗಾವಿಯಲ್ಲಿ ವಸತಿ ಮತ್ತು ಸಾರಿಗೆ ವ್ಯವಸ್ಥೆ ಮಾಡಿಕೊಟ್ಟು ಶಾಸಕರ ಸೌಕರ್ಯಕ್ಕೆ ನಿರಂತರವಾಗಿ ಪ್ರಯತ್ನಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಎಲ್ಲರಿಗೂ ಹಾಗೂ ವಿಶೇಷವಾಗಿ ಬೆಳಗಾವಿ ಜಿಲ್ಲಾಡಳಿತದವರಿಗೆ ಹಾಗೂ ಕಾನೂನು ಸುವ್ಯವಸ್ಥೆಯ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಿದ ಪೋಲೀಸ್ ವರಿಷ್ಠಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನಾಡಿನ ಜನತೆಗೆ ಮುಂಬರುವ 2026ರ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತೇನೆ.

*******

# 7. 2025–26ನೇ ಸಾಲಿನ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳ ರಚನೆ

## ಕರ್ನಾಟಕ ವಿಧಾನಸಭೆ

### ಹದಿನಾರನೇ ವಿಧಾನಸಭೆ

### ಲಘು ಪ್ರಕಟಣೆ ಭಾಗ–2

### (ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

### ಶುಕ್ರವಾರ, ದಿನಾಂಕ 21ನೇ ನವೆಂಬರ್, 2025

**ಸಂಖ್ಯೆ: 168**

2025–26ನೇ ಸಾಲಿನ ಕರ್ನಾಟಕ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ಈ ಕೆಳಕಂಡ ಸದಸ್ಯರುಗಳು ನಾಮನಿರ್ದೇಶನ ಹೊಂದಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

### (ಅ) ಜಂಟಿ ಸಮಿತಿಗಳು

### 1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| **ಶ್ರೀಯುತರುಗಳಾದ :** | | | |
| **1.** | **ಆರಗ ಜ್ಞಾನೇಂದ್ರ** | **9.** | ಜೆ.ಟಿ. ಪಾಟೀಲ್ |
| 2. | ಆರ್.ವಿ. ದೇಶಪಾಂಡೆ | 10. | ಡಾ॥ ಅಜಯ್ ಧರ್ಮಸಿಂಗ್ |
| 3. | ಅಪ್ಪಾಜಿ. ಸಿ.ಎಸ್. ನಾಡಗೌಡ | 11. | ಪಿ.ಎಂ. ನರೇಂದ್ರ ಸ್ವಾಮಿ |
| 4. | ಜಿ.ಟಿ. ದೇವೇಗೌಡ | 12. | ಕೆ. ರಾಘವೇಂದ್ರ ಬಸವರಾಜ್ ಹಿಟ್ನಾಳ್ |
| 5. | ಬಸವರಾಜ್ ನೀಲಪ್ಪ ಶಿವಣ್ಣನವರ್ | 13. | ಡಾ॥ ಶಿವರಾಜ್ ಪಾಟೀಲ್ |
| 6. | ಗುರುಪಾದಗೌಡ ಸಂಗನಗೌಡ ಪಾಟೀಲ್ | 14. | ಬಿ. ಸುರೇಶ್ ಗೌಡ |
| 7. | ಕೌಜಲಗಿ ಮಹಾಂತೇಶ್ ಶಿವಾನಂದ್ | 15. | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ |
| 8. | ಲಕ್ಷ್ಮಣ ಸಂಗಪ್ಪ ಸವದಿ | | |

| ವಿಧಾನ ಪರಿಷತ್ತಿನ ಸದಸ್ಯರು | | | |
|---|---|---|---|
| 1. | ಅಡಗೂರ್ ಹೆಚ್. ವಿಶ್ವನಾಥ್ | 4. | ಡಾ॥ ಎಂ.ಆರ್ ಸೀತಾರಾಂ |
| 2. | ಬಿ.ಕೆ. ಹರಿಪ್ರಸಾದ್ | 5. | ಎಸ್.ಎಲ್. ಭೋಜೇಗೌಡ |
| 3. | ಸಿ.ಟಿ. ರವಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಆರಗ ಜ್ಞಾನೇಂದ್ರ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 2. ಸಾರ್ವಜನಿಕ ಉದ್ಯಮಗಳ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| | **ಶ್ರೀಯುತರುಗಳಾದ :** | | |
| **1.** | **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್** | **9.** | ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. |
| 2. | ಎನ್.ವೈ. ಗೋಪಾಲಕೃಷ್ಣ | 10. | ಟಿ. ರಘುಮೂರ್ತಿ |
| 3. | ಶ್ಯಾಮನೂರು ಶಿವಶಂಕರಪ್ಪ | 11. | ಶಾಂತನಗೌಡ ಡಿ.ಜಿ. |
| 4. | ಹಂಪನಗೌಡ ಬಾದರ್ಲಿ | 12. | ಕೆ. ಗೋಪಾಲಯ್ಯ |
| 5. | ಜಿ.ಕೆ. ವೆಂಕಟಶಿವಾರೆಡ್ಡಿ | 13. | ಎಸ್. ಮುನಿರಾಜು |
| 6. | ಕೆ.ಎಂ. ಶಿವಲಿಂಗೇಗೌಡ | 14. | ಪ್ರಕಾಶ್ ಕೆ. ಕೋಳಿವಾಡ |
| 7. | ಸತೀಶ್ ರೆಡ್ಡಿ ಎಂ. | 15. | ಜಿ. ಜನಾರ್ಧನ ರೆಡ್ಡಿ |
| 8. | ಎಂ. ಕೃಷ್ಣಪ್ಪ (ಬೆಂಗಳೂರು ದಕ್ಷಿಣ) | | |
| ವಿಧಾನ ಪರಿಷತ್ತಿನ ಸದಸ್ಯರು | | | |
| 1. | ಡಾ॥ ಕೆ. ಗೋವಿಂದರಾಜ್ | 4. | ಟಿ. ಎನ್. ಜವರಾಯಿ ಗೌಡ |
| 2. | ಐವನ್ ಡಿ ಸೋಜಾ | 5. | ಕಿಶೋರ್ ಕುಮಾರ್ ಪುತ್ತೂರ್ |
| 3. | ವೈ. ಎಂ. ಸತೀಶ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 3. ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| **1.** | **ಎ.ಆರ್. ಕೃಷ್ಣಮೂರ್ತಿ** | **9.** | ರಾಜಾ ವೇಣುಗೋಪಾಲ್ ನಾಯಕ್ |
| 2. | ಜಾರಕಿಹೊಳಿ ರಮೇಶ್ ಲಕ್ಷ್ಮಣರಾವ್ | 10. | ಬಸವರಾಜ್ ಮತ್ತಿಮೂಡ್ |
| 3. | ಐಹೊಳೆ ದುರ್ಯೋಧನ ಮಹಾಲಿಂಗಪ್ಪ | 11. | ಶ್ರೀಮತಿ ನಯನಾ ಮೋಟಮ್ಮ |
| 4. | ಬಿ. ಶಿವಣ್ಣ | 12. | ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ್ |
| 5. | ಶ್ರೀಮತಿ ರೂಪಕಲಾ ಎಂ. | 13. | ಕೃಷ್ಣ ನಾಯಕ |
| 6. | ಟಿ.ಡಿ. ರಾಜೇಗೌಡ | 14. | ಡಾ॥ ಚಂದ್ರು ಲಮಾಣಿ |
| 7. | ಪಠಾಣ್‌ಯಾಸೀರ್ ಅಹಮದ್‌ಖಾನ್ | 15. | ಸಮೃದ್ಧಿ ವಿ. ಮಂಜುನಾಥ್ |
| 8. | ಎ.ಸಿ. ಶ್ರೀನಿವಾಸ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1. | ಶಾಂತಾರಾಮ್ ಬುಡ್ನ ಸಿದ್ದಿ | 4. | ಹೆಚ್.ಪಿ. ಸುಧಾಮ ದಾಸ್ |
| 2. | ಡಾ॥ ಡಿ. ತಿಮ್ಮಯ್ಯ | 5. | ಎಫ್. ಎಚ್. ಜಕ್ಕಪ್ಪನವರ್ |
| 3. | ಶ್ರೀಮತಿ ಹೇಮಲತಾ ನಾಯಕ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಎ.ಆರ್. ಕೃಷ್ಣಮೂರ್ತಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

... 4

## 4. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| **1.** | **ತನ್ವೀರ್ ಸೇಠ್** | **9.** | ಜಿ.ಹೆಚ್. ಶ್ರೀನಿವಾಸ |
| 2. | ಬಿ.ಜಿ. ಗೋವಿಂದಪ್ಪ | 10. | ಉಮಾನಾಥ ಎ. ಕೋಟ್ಯಾನ್ |
| 3. | ಬಿ. ನಾಗೇಂದ್ರ | 11. | ಬಿ.ಪಿ. ಹರೀಶ್ |
| 4. | ಜಿ. ಹಂಪಯ್ಯ ನಾಯಕ್ | 12. | ರಾಜೇಶ್ ನಾಯಕ್ ಯು. |
| 5. | ಬಿ.ಎ. ಬಸವರಾಜ | 13. | ಹೆಚ್.ಎ. ಇಕ್ಬಾಲ್ ಹುಸೇನ್ |
| 6. | ಅನಿಲ್ ಚಿಕ್ಕಮಾದು | 14. | ಚನ್ನಬಸಪ್ಪ (ಚೆನ್ನಿ) |
| 7. | ಕಟಕದೊಂಡ ವಿಠ್ಠಲ್ ದೊಂಡಿಬಾ | 15. | ಶ್ರೀಮತಿ ಕರೆಮ್ಮ ಜಿ. ನಾಯ್ಕ |
| 8. | ಬಿ.ಎಂ. ನಾಗರಾಜ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1. | ಕೆ. ಅಬ್ದುಲ್ ಜಬ್ಬಾರ್ | 4. | ಕೇಶವ ಪ್ರಸಾದ್ ಎಸ್. |
| 2. | ಚನ್ನರಾಜ್ ಬಸವರಾಜ್ ಹಟ್ಟಿಹೊಳಿ | 5. | ಕೆ. ವಿವೇಕಾನಂದ |
| 3. | ಹೆಚ್.ಎಸ್. ಗೋಪಿನಾಥ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ತನ್ವೀರ್ ಸೇಠ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 5. ಅಧೀನ ಶಾಸನ ರಚನಾ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| **1.** | **ಎಸ್. ಆರ್. ಶ್ರೀನಿವಾಸ್ (ವಾಸು)** | 9. | ಡಾ॥ ಮಂತರ್‌ಗೌಡ |
| 2. | ಎಸ್. ರಘು | 10. | ದರ್ಶನ್ ಧ್ರುವನಾರಾಯಣ |
| 3. | ಬಸನಗೌಡ ದದ್ದಲ್ | 11. | ಧೀರಜ್ ಮುನಿರಾಜ್ |
| 4. | ಎನ್. ಹೆಚ್. ಕೋನರೆಡ್ಡಿ | 12. | ಗುರ್ಮೆ ಸುರೇಶ್ ಶೆಟ್ಟಿ |

| | | | |
|---|---|---|---|
| 5. | ಕೆ.ವೈ. ನಂಜೇಗೌಡ | 13. | ಜಗದೀಶ್ ಶಿವಯ್ಯ ಗುಡಗುಂಟಿ |
| 6. | ಟಿ.ಡಿ. ರಾಜೇಗೌಡ | 14. | ಜಿ.ಡಿ. ಹರೀಶ್‌ಗೌಡ |
| 7. | ಬಿ.ಬಿ. ಚಿಮ್ಮನಕಟ್ಟಿ | 15. | ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ್ |
| 8. | ಶರಣು ಸಲಗರ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1. | ಶರವಣ ಟಿ.ಎ | 4. | ಲಖನ್ ಲಕ್ಷ್ಮಣರಾವ್ ಜಾರಕಿಹೊಳಿ |
| 2. | ಡಾ॥ ಯತೀಂದ್ರ ಎಸ್. | 5. | ಶಿವಕುಮಾರ್ ಕೆ. |
| 3. | ಚಿದಾನಂದ್ ಎಂ. ಗೌಡ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಎಸ್.ಆರ್. ಶ್ರೀನಿವಾಸ್ (ವಾಸು)** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| **1.** | **ಹೆಚ್.ಡಿ. ರೇವಣ್ಣ** | 9. | ಕೊತ್ತೂರ್ ಜಿ. ಮಂಜುನಾಥ |
| 2. | ಸಿದ್ದು ಸವದಿ | 10. | ಪ್ರದೀಪ್ ಈಶ್ವರ್ |
| 3. | ಪ್ರಿಯಕೃಷ್ಣ | 11. | ರವಿಕುಮಾರಗೌಡ (ಗಣಿಗ) |
| 4. | ಮುನಿರತ್ನ | 12. | ಕೆ.ಎಸ್. ಬಸವಂತಪ್ಪ |
| 5. | ಸತೀಶ್ ಕೃಷ್ಣ ಸೈಲ್ | 13. | ಡಾ॥ ಶೈಲೇಂದ್ರ ಬೆಲ್ದಾಳೆ |
| 6. | ಜಿ.ಬಿ. ಜ್ಯೋತಿ ಗಣೇಶ್ | 14. | ಡಾ॥ ಸಿದ್ದು ಪಾಟೀಲ್ |
| 7. | ಚನ್ನಾರೆಡ್ಡಿ ಪಾಟೀಲ್ ತುನ್ನೂರ್ | 15. | ಶರಣಗೌಡ ಕಂದಕೂರ |
| 8. | ಬಿ. ದೇವೇಂದ್ರಪ್ಪ | | |

| ವಿಧಾನ ಪರಿಷತ್ತಿನ ಸದಸ್ಯರು | | | |
|---|---|---|---|
| 1. | ಎನ್. ನಾಗರಾಜು (ಎಂ.ಟಿ.ಬಿ) | 4. | ಎ. ವಸಂತ ಕುಮಾರ್ |
| 2. | ಡಾ॥ ಎಂ.ಜಿ. ಮುಳೆ | 5. | ಜಗದೇವ್ ಗುತ್ತೇದಾರ್ |
| 3. | ಎಂ.ಎಲ್. ಅನಿಲ್ ಕುಮಾರ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಹೆಚ್.ಡಿ. ರೇವಣ್ಣ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 7. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| **ಶ್ರೀಯುತರುಗಳಾದ :** | | | |
| **1.** | **ಶ್ರೀಮತಿ ಕನೀಜ್ ಫಾತಿಮಾ** | 9. | ಶ್ರೀನಿವಾಸಯ್ಯ ಎನ್. |
| 2. | ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ | 10. | ಹೆಚ್.ವಿ. ವೆಂಕಟೇಶ್ |
| 3. | ಅರವಿಂದ್ ಬೆಲ್ಲದ್ | 11. | ದರ್ಶನ್ ಪುಟ್ಟಣ್ಣಯ್ಯ |
| 4. | ಡಾ॥ ಭರತ್‌ಶೆಟ್ಟಿ ವೈ. | 12. | ಹೆಚ್.ಕೆ. ಸುರೇಶ್ (ಹುಲ್ಲಳ್ಳಿ ಸುರೇಶ್) |
| 5. | ಜೆ.ಎನ್. ಗಣೇಶ್ | 13. | ಶ್ರೀಮತಿ ಭಾಗೀರಥಿ ಮುರುಳ್ಯ |
| 6. | ಶ್ರೀಮತಿ ಈ. ಅನ್ನಪೂರ್ಣ | 14. | ಹೆಚ್.ಟಿ. ಮಂಜು |
| 7. | ಬಾಬಾಸಾಹೇಬ್ ಪಾಟೀಲ್ | 15. | ಸ್ವರೂಪ್ ಪ್ರಕಾಶ್ |
| 8. | ಬಸವರಾಜು ವಿ. ಶಿವಗಂಗಾ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1. | ಶ್ರೀಮತಿ ಭಾರತಿ ಶೆಟ್ಟಿ | 4. | ಡಾ॥ ಧನಂಜಯ ಸರ್ಜಿ |
| 2. | ಶರಣಗೌಡ ಬಯ್ಯಾಪುರ | 5. | ಕೆ. ವಿವೇಕಾನಂದ |
| 3. | ಶ್ರೀಮತಿ ಬಲ್ಕೀಸ್ ಬಾನು | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀಮತಿ ಕನೀಜ್ ಫಾತಿಮಾ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 8. ಗ್ರಂಥಾಲಯ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| 1. | ಎಸ್. ಸುರೇಶ್ ಕುಮಾರ್ | 4. | ಕೆ.ಹೆಚ್. ಪುಟ್ಟಸ್ವಾಮಿಗೌಡ (ಕೆ.ಹೆಚ್.ಪಿ) |
| 2. | ರಿಜ್ವಾನ್ ಅರ್ಷದ್ | 5. | ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ್ |
| 3. | ಎ.ಸಿ. ಶ್ರೀನಿವಾಸ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1. | ಎಸ್. ವ್ಹಿ. ಸಂಕನೂರ | 3. | ಶರಣಗೌಡ ಬಯ್ಯಾಪುರ |
| 2. | ಡಾ॥ ಯತೀಂದ್ರ ಎಸ್. | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 371 (2) ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಗ್ರಂಥಾಲಯ ಸಮಿತಿಯ ಸದಸ್ಯರಾಗಿದ್ದು, ನಿಯಮ 211(1) ರ ಮೇರೆಗೆ **ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು** ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 9. ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| **1.** | **ಸಿ. ಪುಟ್ಟರಂಗಶೆಟ್ಟಿ** | 9. | ಡಾ॥ ಹೆಚ್.ಡಿ. ರಂಗನಾಥ್ |
| 2. | ಎಂ. ಚಂದ್ರಪ್ಪ | 10. | ಹರೀಶ್ ಪೂಂಜ |
| 3. | ಎಂ.ವೈ. ಪಾಟೀಲ್ | 11. | ಆನಂದ ಕೆ.ಎಸ್. |

| | | | |
|---|---|---|---|
| 4. | ಬಿ.ಕೆ. ಸಂಗಮೇಶ್ವರ್ | 12. | ಅಶೋಕ್ ಮಲ್ಲಪ್ಪ ಮನಗುಳಿ |
| 5. | ರವಿಸುಬ್ರಹ್ಮಣ್ಯ ಎಲ್.ಎ. | 13. | ಹೆಚ್.ಎಂ. ಗಣೇಶ್ ಪ್ರಸಾದ್ |
| 6. | ಎ.ಬಿ. ರಮೇಶ್ ಬಂಡಿಸಿದ್ದೇಗೌಡ | 14. | ಕತ್ತಿ ನಿಖಿಲ್ ಉಮೇಶ್ |
| 7. | ದಿನಕರ್ ಕೇಶವ್ ಶೆಟ್ಟಿ | 15. | ಬಿ.ಎನ್. ರವಿಕುಮಾರ್ |
| 8. | ಹೆಚ್.ಆರ್. ಗವಿಯಪ್ಪ | | |

| **ವಿಧಾನ ಪರಿಷತ್ತಿನ ಸದಸ್ಯರು** | | | |
|---|---|---|---|
| 1. | ಪಿ.ಹೆಚ್. ಪೂಜಾರ್ | 4. | ಗಣಪತಿ ದುಮ್ಮಾ ಉಳ್ವೇಕರ್ |
| 2. | ಭೀಮರಾವ್ ಬಸವರಾಜ ಪಾಟೀಲ್ | 5. | ಸಿ.ಎನ್. ಮಂಜೇಗೌಡ |
| 3. | ರಾಜೇಂದ್ರ ರಾಜಣ್ಣ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಸಿ. ಪುಟ್ಟರಂಗಶೆಟ್ಟಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

**ವಿಶೇಷ ಸೂಚನೆ:** ಕರ್ನಾಟಕ ವಿಧಾನಮಂಡಲದ ಜಂಟಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವತಿಯಿಂದ ಪ್ರತ್ಯೇಕವಾಗಿ ದಿನಾಂಕ:17.11.2025ರಂದು ಹೊರಡಿಸಲ್ಪಟ್ಟ ಲಘು ಪ್ರಕಟಣೆಯಂತೆ ಸಮಿತಿಯ ಸದಸ್ಯರಾಗಿರುತ್ತಾರೆ.

# (ಆ) ವಿಧಾನಸಭೆಯ ಸಮಿತಿಗಳು

## 1. ಅಂದಾಜುಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| **1.** | **ಕೆ. ಷಡಕ್ಷರಿ** | 10. | ಎಂ.ಟಿ. ಕೃಷ್ಣಪ್ಪ |
| 2. | ಹೆಚ್.ಸಿ. ಬಾಲಕೃಷ್ಣ | 11. | ಅಬ್ಬಯ್ಯ ಪ್ರಸಾದ್ |
| 3. | ಭರಮಗೌಡ ಆಲಗೌಡ ಕಾಗೆ | 12. | ಬಸನಗೌಡ ತುರುವಿಹಾಳ್ |
| 4. | ಸಿ.ಪಿ. ಯೋಗೇಶ್ವರ | 13. | ಮಾನಪ್ಪ ಡಿ. ವಜ್ಜಲ್ |
| 5. | ಎನ್.ಎ. ಹ್ಯಾರಿಸ್ | 14. | ಶ್ರೀಮತಿ ಶಾರದಾ ಪೂರ್ಯ ನಾಯ್ಕ |
| 6. | ಎಂ. ಕೃಷ್ಣಪ್ಪ (ವಿಜಯನಗರ) | 15. | ಆಸಿಫ್ (ರಾಜು) ಸೇಠ್ |
| 7. | ಅಭಯ ಪಾಟೀಲ | 16. | ಶ್ರೀಮತಿ ಲತಾ ಮಲ್ಲಿಕಾರ್ಜುನ |
| 8. | ಸಿ.ಸಿ. ಪಾಟೀಲ್ | 17. | ಬಿ.ವೈ. ವಿಜಯೇಂದ್ರ |
| 9. | ವಿ. ಸುನಿಲ್ ಕುಮಾರ್ | 18. | ಅಶೋಕ ಕುಮಾರ್ ರೈ ಕೆ.ಎಸ್ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಕೆ. ಷಡಕ್ಷರಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 2. ಸರ್ಕಾರಿ ಭರವಸೆಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| **1.** | **ಕ್ಯಾತ್ಸಂದ್ರ ಎನ್. ರಾಜಣ್ಣ** | 9. | ಅಲ್ಲಮಪ್ರಭು ಪಾಟೀಲ್ |
| 2. | ಪ್ರಭು ಬಿ. ಚವ್ಹಾಣ | 10. | ಹೆಚ್.ಡಿ. ತಮ್ಮಯ್ಯ |
| 3. | ಗಣೇಶ್ ಪ್ರಕಾಶ್ ಹುಕ್ಕೇರಿ | 11. | ಟಿ.ಎಸ್. ಶ್ರೀವತ್ಸ |
| 4. | ಗೋಪಾಲಕೃಷ್ಣ ಬೇಳೂರು | 12. | ಎ. ಕಿರಣ್ ಕುಮಾರ ಕೊಡ್ಗಿ |

| | | | |
|---|---|---|---|
| 5. | ಎಸ್. ಎನ್. ಸುಬ್ಬಾರೆಡ್ಡಿ | 13. | ವಿಠಲ್ ಸೋಮಣ್ಣ ಹಲಗೇಕರ್ |
| 6. | ಯು.ಬಿ. ಬಣಕಾರ್ | 14. | ಸಿ.ಕೆ. ರಾಮಮೂರ್ತಿ |
| 7. | ಕಾಶಪ್ಪನವರ ವಿಜಯಾನಂದ ಶಿವಶಂಕರಪ್ಪ | 15. | ಎಂ.ಆರ್. ಮಂಜುನಾಥ್ |
| 8. | ಉದಯ ಬಿ. ಗರುಡಾಚಾರ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 3. ಹಕ್ಕುಬಾಧ್ಯತೆಗಳ ಸಮಿತಿ

| **ಶ್ರೀಯುತರುಗಳಾದ :** | | | |
|---|---|---|---|
| **1.** | **ಯು.ಬಿ. ಬಣಕಾರ್** | 7. | ವಿಶ್ವಾಸ್ ವಸಂತ್ ವೈದ್ಯ |
| 2. | ಡಾ॥ ಅಶ್ವಥ್ ನಾರಾಯಣ್ ಸಿ.ಎನ್. | 8. | ಪ್ರಕಾಶ್ ಕೆ. ಕೋಳಿವಾಡ |
| 3. | ಸಿ.ಬಿ. ಸುರೇಶ್‌ಬಾಬು | 9. | ಕೆ.ಹೆಚ್. ಪುಟ್ಟಸ್ವಾಮಿಗೌಡ (ಕೆಹೆಚ್‌ಪಿ) |
| 4. | ರಿಜ್ವಾನ್ ಅರ್ಷದ್ | 10. | ಸಿಮೆಂಟ್ ಮಂಜು |
| 5. | ಡಿ. ವೇದವ್ಯಾಸ ಕಾಮತ್ | 11. | ಗುರುರಾಜ್ ಶೆಟ್ಟಿ ಗಂಟಿಹೊಳೆ |
| 6. | ಶ್ರೀನಿವಾಸ ಎನ್.ಟಿ. | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಯು.ಬಿ. ಬಣಕಾರ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 4. ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ

| **ಶ್ರೀಯುತರುಗಳಾದ :** | | | |
|---|---|---|---|
| **1.** | **ರುದ್ರಪ್ಪ ಮಾನಪ್ಪ ಲಮಾಣಿ** | 7. | ಮಾನೆ ಶ್ರೀನಿವಾಸ್ |
| 2. | ಕೌಜಲಗಿ ಮಹಾಂತೇಶ್ ಶಿವಾನಂದ್ | 8. | ಶರತ್ ಕುಮಾರ್ ಬಚ್ಚೇಗೌಡ |

| | | | |
|---|---|---|---|
| 3. | ಸಿ.ಬಿ. ಸುರೇಶ್‌ಬಾಬು | 9. | ಡಾ॥ ಭರತ್‌ಶೆಟ್ಟಿ ವೈ. |
| 4. | ಜೆ.ಟಿ. ಪಾಟೀಲ್ | 10. | ಗುರುರಾಜ್ ಶೆಟ್ಟಿ ಗಂಟಿಹೊಳೆ |
| 5. | ಡಾ॥ ಹೆಚ್.ಡಿ. ರಂಗನಾಥ್ | 11. | ಯಶಪಾಲ್ ಎ. ಸುವರ್ಣ |
| 6. | ಎನ್.ಹೆಚ್. ಕೋನರಡ್ಡಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 283ರ ಮೇರೆಗೆ ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 5. ಅರ್ಜಿಗಳ ಸಮಿತಿ

| | | | |
|---|---|---|---|
| | **ಶ್ರೀಯುತರುಗಳಾದ :** | | |
| **1.** | **ರುದ್ರಪ್ಪ ಮಾನಪ್ಪ ಲಮಾಣಿ** | 9. | ಮಾನೆ ಶ್ರೀನಿವಾಸ್ |
| 2. | ಎಸ್. ಸುರೇಶ್ ಕುಮಾರ್ | 10. | ಶರತ್ ಕುಮಾರ್ ಬಚ್ಚೇಗೌಡ |
| 3. | ಎಸ್.ಆರ್. ವಿಶ್ವನಾಥ್ | 11. | ಜಿ.ಹೆಚ್. ಶ್ರೀನಿವಾಸ |
| 4. | ಎ. ಮಂಜು | 12. | ಡಾ॥ ಅವಿನಾಶ್ ಉಮೇಶ್ ಜಾಧವ್ |
| 5. | ಬಸನಗೌಡ ಆರ್. ಪಾಟೀಲ್ (ಯತ್ನಾಳ್) | 13. | ಭೀಮಣ್ಣ ಟಿ. ನಾಯಕ್ |
| 6. | ಎಸ್.ಟಿ. ಸೋಮಶೇಖರ್ | 14. | ರವಿಶಂಕರ್ ಡಿ. |
| 7. | ಸಿ.ಎನ್. ಬಾಲಕೃಷ್ಣ | 15. | ಮಹೇಶ್ ಟೆಂಗಿನಕಾಯಿ |
| 8. | ರಿಜ್ವಾನ್ ಅರ್ಷದ್ | 16. | ಕೆ. ಹರೀಶ್‌ಗೌಡ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 211(2)ರ ಮೇರೆಗೆ ಮಾನ್ಯ ಸಭಾಧ್ಯಕ್ಷರು ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 6. ವಸತಿ ಸೌಕರ್ಯ ಸಮಿತಿ

| **ಶ್ರೀಯುತರುಗಳಾದ :** | | | |
|---|---|---|---|
| **1.** | **ರುದ್ರಪ್ಪ ಮಾನಪ್ಪ ಲಮಾಣಿ** | 8. | ಶ್ರೀಮತಿ ಮಂಜುಳ ಎಸ್. |
| 2. | ವಿನಯ ಕುಲಕರ್ಣಿ | 9. | ಯಶಪಾಲ್ ಎ. ಸುವರ್ಣ |
| 3. | ಅರಬೈಲ್ ಹೆಬ್ಬಾರ್ ಶಿವರಾಮ್ | 10. | ಎಂ.ಆರ್. ಪಾಟೀಲ್ |
| 4. | ನೇಮಿರಾಜ ನಾಯಕ್ | 11. | ಜಿ.ಡಿ. ಹರೀಶ್‌ಗೌಡ |
| 5. | ನಾರಾ ಭರತ್ ರೆಡ್ಡಿ | 12. | |
| 6. | ಉದಯ ಕೆ.ಎಂ. | 13. | |
| 7. | ಕೆ.ಸಿ. ವೀರೆಂದ್ರ ಪಪ್ಪಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 211(2)ರ ಮೇರೆಗೆ ಮಾನ್ಯ ಸಭಾಧ್ಯಕ್ಷರು ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

**8. ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ**

# ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ 25ನೇ ನವೆಂಬರ್, 2025

**ಸಂಖ್ಯೆ: 170**

2025–26ನೇ ಸಾಲಿನ ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ ಅವರ ಬದಲಿಗೆ ಸಾರ್ವಜನಿಕ ಉದ್ಯಮಗಳ ಸಮಿತಿಯ ಸದಸ್ಯರಾದ ಶ್ರೀ ಟಿ. ರಘುಮೂರ್ತಿ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 211 (2) ರ ಮೇರೆಗೆ ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ ಅವರನ್ನು ಸದರಿ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ,**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

## 9. Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ

# ಕರ್ನಾಟಕ ವಿಧಾನಸಭೆ

**(ಹದಿನಾರನೇ ವಿಧಾನಸಭೆ)**

**ಎಂಟನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 25ನೇ ನವೆಂಬರ್, 2025**

---

**ಸಂಖ್ಯೆ: 171**

ಸನ್ಮಾನ್ಯ ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ವಿಧಾನಸಭೆಯ ಅಧ್ಯಕ್ಷತೆಯನ್ನು (Panel of Chairmen) ವಹಿಸಿಕೊಳ್ಳಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 9ರ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರು ಈ ಕೆಳಕಂಡ ವಿಧಾನಸಭಾ ಸದಸ್ಯರುಗಳನ್ನು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ :**

1. ಅಪ್ಪಾಜಿ ಅಲಿಯಾಸ್ ಚನ್ನಬಸವರಾಜ ಬಿನ್ ಶಂಕರರಾವ ನಾಡಗೌಡ
2. ತನ್ವೀರ್ ಸೇಠ್
3. ಬಿ. ಆರ್. ಪಾಟೀಲ್ (ಭೋಜರಾಜ್)
4. ಅಬ್ಬಯ್ಯ ಪ್ರಸಾದ್
5. ಆರಗ ಜ್ಞಾನೇಂದ್ರ
6. ಎಂ. ಟಿ. ಕೃಷ್ಣಪ್ಪ

**ಎಂ.ಕೆ. ವಿಶಾಲಾಕ್ಷಿ**

ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆ ಸಚಿವಾಲಯ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

**10.2025–26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ**

**ಕರ್ನಾಟಕ ವಿಧಾನಸಭೆ**

ಹದಿನಾರನೇ ವಿಧಾನಸಭೆ

ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ 17ನೇ ಡಿಸೆಂಬರ್, 2025

**ಸಂಖ್ಯೆ: 173**

2025–26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗಿದ್ದ ಮಾನ್ಯ ಸದಸ್ಯರಾದ ಶ್ರೀಮತಿ ಕನೀಜ್ ಫಾತಿಮಾ ಅವರ ಬದಲಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರಾದ ಶ್ರೀಮತಿ ಈ. ಅನ್ನಪೂರ್ಣ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 211(2)ರ ಮೇರೆಗೆ ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಶ್ರೀಮತಿ ಕನೀಜ್ ಫಾತಿಮಾ ಅವರನ್ನು ಸದರಿ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ,**

ಕಾರ್ಯದರ್ಶಿ,

ಕರ್ನಾಟಕ ವಿಧಾನಸಭೆ ಸಚಿವಾಲಯ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# ಭಾಗ–3
# ಸಂಸತ್ತು ಸುದ್ದಿಗಳು

## 1. ಶಾಸನಸಭೆ ಅವಧಿ ಕಡಿತಗೊಳಿಸುವ ಅಧಿಕಾರ ಸಂಸತ್‌ಗಿದೆ ಎಂದ ಆಯೋಗ

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಐದು ವರ್ಷದ ಅವಧಿಯನ್ನು ತಿದ್ದುಪಡಿಯ ಮೂಲಕ ಬದಲಾವಣೆ ಮಾಡುವ ಸಾಂವಿಧಾನಿಕ ಅಧಿಕಾರ ಸಂಸತ್‌ಗೆ ಇದೆ ಎಂದು 23ನೇ ಕಾನೂನು ಆಯೋಗ ತಿಳಿಸಿದೆ.

'ಒಂದು ದೇಶ, ಒಂದು ಚುನಾವಣೆ' ಕುರಿತ ವಿಧೇಯಕಗಳ ಪರಿಶೀಲನೆಗೆ ರಚನೆಯಾಗಿರುವ ಜಂಟಿ ಸದನ ಸಮಿತಿ (ಜೆಪಿಸಿ) ಮುಂದೆ ವಿಷಯ ಮಂಡಿಸಿರುವ ಕಾನೂನು ಆಯೋಗ, ಸಂವಿಧಾನದ 83, 172ನೇ ವಿಧಿಯಡಿ ಲೋಕಸಭೆ ಹಾಗೂ ವಿಧಾನಸಭೆಯ ನಿಗದಿತ ಅವಧಿಗೆ ಕತ್ತರಿ ಹಾಕಲು ಅವಕಾಶವಿಲ್ಲ, ಆದರೆ, ರಾಷ್ಟ್ರೀಯ ಹಿತಾಸಕ್ತಿ, ದೊಡ್ಡ ಮಟ್ಟದ ಬದಲಾವಣೆಯ ಉದ್ದೇಶಕ್ಕಾಗಿ ಅವಧಿಯನ್ನು ಹೆಚ್ಚು ಕಡಿಮೆ ಮಾಡುವ ಅಧಿಕಾರವನ್ನು ಸಂಸತ್ ಹೊಂದಿದೆ ಎಂದು ತಿಳಿಸಿದೆ.

ಸಂವಿಧಾನ 83 ಮತ್ತು 172ನೇ ವಿಧಿ ಅಡಿಯಲ್ಲಿ ನಿಗದಿಪಡಿಸಲಾದ ಲೋಕಸಭೆ ಅಥವಾ ರಾಜ್ಯ ವಿಧಾನಸಭೆಗಳ ಅವಧಿಯನ್ನು ಸಾಮಾನ್ಯ ಶಾಸನದ ಮೂಲಕ ಕಡಿಮೆ ಮಾಡಲು ಸಾಧ್ಯವಿಲ್ಲ, ಸಾರ್ವಜನಿಕ ಕಲ್ಯಾಣದ ಉದ್ದೇಶ ಪೂರೈಸಲು ಸಾಂವಿಧಾನಿಕ ತಿದ್ದುಪಡಿ ಮೂಲಕ ಬದಲಾವಣೆ ಮಾಡಬಹುದಾಗಿದೆ ಎಂದು ಕಾನೂನು ಆಯೋಗ ವಿವರಿಸಿದೆ.

ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಯನ್ನು ಏಕಕಾಲಕ್ಕೆ ನಡೆಸುವ ಉದ್ದೇಶಕ್ಕಾಗಿ ಶಾಸನಸಭೆಗಳ ಅವಧಿಯನ್ನು ಕಡಿತಗೊಳಿಸುವ ಇಲ್ಲವೇ ವಿಸ್ತರಿಸುವ ಅವಕಾಶ ಸಂಸತ್ ಹೊಂದಿದೆ ಎಂದು ಕಾನೂನು ಆಯೋಗ ತಿಳಿಸಿದೆ.

ಏಕಕಾಲಕ್ಕೆ ಚುನಾವಣೆ ನಡೆಸುವ ವಿಧೇಯಕಗಳಿಂದ ಸರ್ಕಾರ ಆಯ್ಕೆ ಮಾಡುವ ಜನರ ಹಕ್ಕುಗಳಿಗೆ ಧಕ್ಕೆಯಾಗುವುದಿಲ್ಲ. ಉದ್ದೇಶಿತ ವಿಧೇಯಕಗಳ ಉದ್ದೇಶ ಲೋಕಸಭೆ, ವಿಧಾನಸಭೆ ಚುನಾವಣೆಯನ್ನು ಏಕಕಾಲಕ್ಕೆ ನಡೆಸುವುದಾಗಿದೆ. ಇದರಿಂದ ಸಂವಿಧಾನದ ಮೂಲ ರಚನೆ ಉಲ್ಲಂಘಿಸುವುದಿಲ್ಲ ಎಂದು ಆಯೋಗ ವಿವರಣೆ ನೀಡಿದೆ. ಜತೆಗೆ ಉದ್ದೇಶಿತ ವಿಧೇಯಕಗಳಿಗೆ ಅರ್ಧದಷ್ಟು ರಾಜ್ಯಗಳ ಅನುಮತಿ ಬೇಕಾಗಿಲ್ಲ ಎಂದು ಸ್ಪಷ್ಟಪಡಿಸಿದೆ.

ಪ್ರಸ್ತಾವಿತ ತಿದ್ದುಪಡಿಗಳು ಸಂವಿಧಾನದ 368(2) ಬರುವುದಿಲ್ಲ. ಹೀಗಾಗಿ ರಾಜ್ಯಗಳ ಒಪ್ಪಿಗೆ ಪಡೆಯುವ ಅಗತ್ಯ ಇರುವುದಿಲ್ಲ ಎಂದು ಆಯೋಗ ವಿವರಿಸಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:01.12.2025

## 2. ರಾಜಭವನಗಳ ಹೆಸರು ಇನ್ನು ಲೋಕಭವನ ಎಂದು ಬದಲು

ವಸಾಹತುಶಾಹಿ ಗುರುತುಗಳನ್ನು ಅಳಿಸಿಹಾಕುವ ಉದ್ದೇಶದಿಂದ ರಾಜ್ಯಪಾಲರ ಅಧಿಕೃತ ನಿವಾಸವನ್ನು 'ರಾಜಭವನ'ದ ಬದಲಿಗೆ 'ಲೋಕ ಭವನ' ಎಂದು ಮರುನಾಮಕರಣ ಮಾಡಬೇಕೆಂದು ಕೇಂದ್ರ ಗೃಹ ಸಚಿವಾಲಯ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಇದರ ಬೆನ್ನಲ್ಲೇ, ಕೇರಳ ರಾಜಭವನವು ದಿನಾಂಕ:01.12.2026ರಂದು ಮರುನಾಮಕರಣಕ್ಕೆ ಮುಂದಾಗಿದೆ. ಅಸ್ಸಾಂ, ತಮಿಳುನಾಡು, ಪಶ್ಚಿಮ ಬಂಗಾಳ, ಲಡಾಖ್ ರಾಜ್ಯಪಾಲರು ಈಗಾಗಲೇ ಈ ಆದೇಶವನ್ನು ಜಾರಿಗೆ ತಂದಿದ್ದಾರೆ. ಕೇಂದ್ರದ ಆದೇಶದನ್ವಯ ದೆಹಲಿ ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗೌವರ್ನರ್‌ಗಳ 'ರಾಜ ನಿವಾಸ'ವನ್ನು 'ಲೋಕ ನಿವಾಸ'ವಾಗಿ ಹೆಸರಿಸಲು ನಿರ್ಧರಿಸಲಾಗಿದೆ.

**ವರ್ಷದ ಹಿಂದೆಯೇ ನಿರ್ಧಾರ:** 2024ರ ಆ.2ರಂದು ರಾಷ್ಟ್ರಪತಿ ಭವನದಲ್ಲಿ ರಾಜ್ಯಪಾಲರ ಸಭೆ ನಡೆದಿತ್ತು. ಈ 'ರಾಜಭವನ ಎಂಬುದು ಬ್ರಿಟಿಷ್ ವೇಳೆ, ವಸಾಹತುಶಾಹಿಯನ್ನು ಪ್ರತಿಬಿಂಬಿಸುತ್ತದೆ. ಇದನ್ನು ಭಾರತೀಯವಾಗಿ ಪರಿವರ್ತಿಸಬೇಕು' ಎಂದು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ

ನೇತೃತ್ವದ ರಾಜ್ಯಪಾಲರ ಸಮಿತಿ ಶಿಫಾರಸ್ಸು ಮಾಡಿತ್ತು ಹಾಗೂ ಬಳಿಕ ಇದನ್ನು ಸಭೆ ಅಂಗೀಕರಿಸಿತ್ತು. ಈಗ ಕೇಂದ್ರ ಗೃಹ ಸಚಿವಾಲಯವೂ ಈ ಪ್ರಸ್ತಾವವನ್ನು ಅಂಗೀಕರಿಸಿ, ಮಾಡುವಂತೆ ರಾಜ್ಯಗಳಿಗೆ ಸೂಚಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:01.12.2025

## 3. ರಾಜಭವನ ಬಳಿಕ ಪ್ರಧಾನಿ ಕಚೇರಿಯ ಹೆಸರು ಬದಲು

ಇತ್ತೀಚೆಗಷ್ಟೇ ರಾಜ್ಯಪಾಲರ ನಿವಾಸವಾದ 'ರಾಜಭವನ'ವನ್ನು 'ಲೋಕಭವನ'ವಾಗಿ ಮರುನಾಮಕರಣ ಮಾಡುವಂತೆ ಆದೇಶಿಸಿದ್ದ ಕೇಂದ್ರ ಸರ್ಕಾರ, ಇದೀಗ ಪ್ರಧಾನಮಂತ್ರಿಗಳ ಕಚೇರಿಯನ್ನು(ಪಿಎಂಒ) **'**ಸೇವಾ ತೀರ್ಥ' ಎಂದು ಹೆಸರಿಸಲು ನಿರ್ಧರಿಸಿದೆ. ಇದುವರೆಗೆ ಪಿಎಂಒವನ್ನು 'ಎಕ್ಸಿಕ್ಯುಟಿವ್ ಎನ್‌ಕ್ಲೇವ್' ಎಂದು ಕರೆಯಲಾಗುತ್ತಿತ್ತು.

ಸೆಂಟ್ರಲ್ ವಿಸ್ತಾ ಪುನರ್‌ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಹೊಸ ಕಟ್ಟಡ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

ಪಿಎಂಒ, ಸಂಪುಟ ಸಚಿವಾಲಯ, ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯ ಮತ್ತು ಭಾರತ ಸದನದ ಕಚೇರಿಗಳನ್ನು ಇದೇ ಸಂಕೀರ್ಣಕ್ಕೆ ವರ್ಗಾಯಿಸಲಾಗುತ್ತಿದೆ. ಇವು ಸರ್ಕಾರದ ಮಹತ್ವದ ಕಾರ್ಯಸ್ಥಳಗಳಾಗಿರುವುದರಿಂದ ಜನತೆಯನ್ನೇ ಕೇಂದ್ರವಾಗಿಸಿಕೊಂಡು ಮರುನಾಮಕರಣ ಮಾಡಲು ಸರ್ಕಾರ ಮುಂದಾಗಿದೆ.

ಸತ್ತೆಯಿಂದ(ಅಧಿಕಾರ) ಸೇವೆಯೆಡೆಗೆ ಆಡಳಿತದಿಂದ ಜವಾಬ್ದಾರಿಯೆಡೆಗೆ ಮುನ್ನಡೆಯುವುದು ಸರ್ಕಾರದ ಉದ್ದೇಶ. ಹಾಗಾಗಿ ಆಡಳಿತಾತ್ಮಕವಾಗಿ ಮಾತ್ರವಲ್ಲದೆ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಿಎಂಒಗೆ ಸೇವಾ ತೀರ್ಥವೆಂದು ಹೆಸರು ಬದಲಿಸಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿಂದೆ ರಾಜಪಥವನ್ನು ಕರ್ತವ್ಯಪಥ ಎಂದು, ಕೇಂದ್ರ ಸಚಿವಾಲಯವನ್ನು ಕರ್ತವ್ಯ ಭವನ ಎಂದು ಹೆಸರಿಸಲಾಗಿತ್ತು.

**ಆಧಾರ:ಕನ್ನಡ ಪ್ರಭ,** ದಿನಾಂಕ:03.12.2025

## 4. RS clears Bill to impose cess on pan masala units

The Rajya Sabha on 8th December 2025 passed the Health Security se National Security Cess Bill after a debate, where Opposition members argued that the Bill is an encroachment upon the rights of States.

In her reply to the debate, Union Finance Minister Nirmala Sitharaman said cess as the percentage of the gross tax revenue during the erstwhile United Progressive Alliance regime was 7% and in 2025-26, it was 6.1%. “Far lower cess is being collected now than what was collected under the UPA,” she said, countering the charges that the revenues collected by the Centre as cess were not divided with the States.

**'Clarify on allocation'**

The Bill seeks to impose a cess on manufacturing un-its of tobacco product pan masala, which will be used to augment expenditure on national security and public health. During the debate, the Opposition asked the government to clarify how allocation will be made to States and Union Territories from the cess as health is a State subject.

AAP member Ashok Kumar Mittal said the share of cess had increased in the revenue collection of the Central government. "This is causing so much loss to States. The August 25 report of the Comptroller and Auditor-General says the Central government has failed to transfer 23.69 lakh crore worth of cess collection to intended reserve," he said, and added that Section 21 of the Bill provided that any court would take cognisance of a crime only when the commissioner of that department permitted it.

Trinamool Congress member Saket Gokhale and CPI(M) member John Brittas too expressed similar concerns. DMK member Kanimozhi N.V.N. Somu said Tamil Nadu would never allow the State's rights, revenues or autonomy to slowly get chipped away under the guise of reforms.

**Courtesy:**The Hindu, Dated:09.12.2025

## 5. ಕೊಬ್ಬರಿಗೆ ಬೆಂಬಲ ಬೆಲೆ ₹ 445 ಹೆಚ್ಚಳ

2026ರ ಹಂಗಾಮಿಗೆ ಕೇಂದ್ರ ಸರ್ಕಾರವು ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ 445 ರೂ. ಹೆಚ್ಚಿಸಿದ್ದು, ಇದೀಗ ಕ್ವಿಂಟಲ್ 12027 ರೂ. ಆಗಲಿದೆ. ಅದೇ ರೀತಿ ಉಂಡೆ ಕೊಬ್ಬರಿಗೂ 400 ರೂ. ಬೆಂಬಲ ಬೆಲೆ ಹೆಚ್ಚಿಸಲಾಗಿದ್ದು, ಇದರಿಂದಾಗಿ 1 ಕ್ವಿಂಟಲ್ ಉಂಡೆ ಕೊಬ್ಬರಿ ಬೆಲೆ 12,500 ರೂ. ಆಗಿದೆ ಎಂದು ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಅವರು ತಿಳಿಸಿದ್ದಾರೆ.

ಬೆಂಬಲ ಬೆಲೆ ಹೆಚ್ಚಳದಿಂದ ರಾಜ್ಯದ ತೆಂಗು ಬೆಳೆಗಾರರಿಗೆ ಅನುಕೂಲವಾಗಲಿದೆ. ಕೊಬ್ಬರಿ ಆದಾಯ ಹೆಚ್ಚಾಗುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಹೆಚ್ಚುತ್ತಿರುವ ಕೊಬ್ಬರಿ ಉತ್ಪನ್ನಗಳ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಉತ್ಪಾದನೆ ಹೆಚ್ಚಿಸಲು ಕೇಂದ್ರ ಈ ಕ್ರಮ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. 1 ಕ್ವಿಂಟಲ್ ಹೋಳು ಕೊಬ್ಬರಿಗೆ 445 ರೂ. ಬೆಂಬಲ ಬೆಲೆ ಹೆಚ್ಚಳ ಮಾಡಲಾಗಿದೆ. ಇದರೊಂದಿಗೆ 1 ಕ್ವಿಂಟಾಲ್ ಹೋಳು ಕೊಬ್ಬರಿ ಬೆಲೆ 12,027 ರೂ. ಆಗಿದೆ. ಇದೇ ವೇಳೆ ಉಂಡೆ ಕೊಬ್ಬರಿಗೂ 400 ರೂ. ಬೆಂಬಲ ಬೆಲೆ ಹೆಚ್ಚಿಸಲಾಗಿದ್ದು, ಇದರಿಂದಾಗಿ 1 ಕ್ವಿಂಟಾಲ್ ಉಂಡೆ ಕೊಬ್ಬರಿ ಬೆಲೆ 12,500 ರೂ. ಆಗಿದೆ.

2014ರಿಂದಲೂ ನಿಗದಿತವಾಗಿ ಕೊಬ್ಬರಿಯ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ಹೆಚ್ಚಳ ಮಾಡುತ್ತಾ ಬಂದಿದ್ದು 2014ರಲ್ಲಿ 1 ಕ್ವಿಂಟಾಲ್ ಹೋಳು ಕೊಬ್ಬರಿಗೆ 5,250 ರೂ. ಮತ್ತು ಉಂಡೆ ಕೊಬ್ಬರಿಗೆ 5,500 ರೂ. ಇತ್ತು. ಇದೀಗ ಎರಡೂ ತರದ ಕೊಬ್ಬರಿ ಬೆಲೆಯಲ್ಲಿಯೂ ಕ್ರಮವಾಗಿ ಶೇ.129 ಮತ್ತು ಶೇ.127ರಷ್ಟು ಹೆಚ್ಚಳವಾಗಿದೆ.

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಉಂಡೆ ಹಾಗೂ ಹೋಳು ಕೊಬ್ಬರಿಯ ನ್ಯಾಯಯುತ ಹಾಗೂ ಉತ್ತಮ ಗುಣಮಟ್ಟಕ್ಕೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗಿದೆ. ಬೆಂಬಲ ಬೆಲೆ ಯೋಜನೆ(ಪಿಎಸ್‌ಎಸ್) ಅಡಿ, ಕೊಬ್ಬರಿ ಖರೀದಿಗಾಗಿ ಭಾರತದ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ ನಿಯಮಿತ ಮತ್ತು ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟ(ಎನ್‌ಸಿಸಿಎಫ್)ಗಳು ಕೇಂದ್ರ ನೋಡಲ್ ಏಜೆನ್ಸಿ(ಸಿಎನ್)ಗಳಾಗಿ ಮುಂದುವರಿಸುತ್ತವೆ ಎಂದು ಆಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

2018–19ರ ಕೇಂದ್ರ ಬಜೆಟ್‌ನಲ್ಲಿ ಎಲ್ಲಾ ಆದೇಶಿತ ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಅಖಿಲ ಭಾರತ ಸರಾಸರಿ ಉತ್ಪಾದನಾ ವೆಚ್ಚದ ಕನಿಷ್ಠ 1.5 ಪಟ್ಟು ಹೆಚ್ಚಿನ ಮಟ್ಟದಲ್ಲಿ ನಿಗದಿಪಡಿಸುವುದಾಗಿ ಘೋಷಿಸಲಾಗಿತ್ತು.

**ಆಧಾರ:**ಉದಯವಾಣಿ, ದಿನಾಂಕ:03.12.2025

## 6. 7 yrs later, OBC list awaits approval from Parliament

Centre has not notified the central list of OBCs for the past seven years since it granted constitutional status to National Commission for Backward Classes, which mandated that the list of back wards will in the future be approved by Parliament as against the present practice of publishing it through an executive order.

The indecision on the crucial list, well placed govt sources said, is a result of govt's apparent reluctance to touch the Rohini commission report on sub-categorisation of backward classes halting the transition to the new path laid down by the 102nd constitutional amendment of 2018.

As a consequence, the central list of OBCs has remained frozen since 2018, without any fresh inclusion or exclusion of communities. Sources said the central list has to be notified by Parliament in view of 102nd constitutional amendment that put NCBC at par with the national commissions for SCs and STs, while laying down that the OBC list too would follow the notification process of parliamentary approval like the lists of SCs and STs. "Govt has not yet moved on readying the proposal for parliamentary approval of OBC list because it would bring into picture the Rohini commission. A process that was initiated in 2019 was put in deep freeze," a source said. The seeming hurdle created by the Rohini commission is puzzling. Sources said govt cannot simply replicate the existing OBC list through Parliament because it was found to have many discrepancies, like spellings, and had asked the Rohini panel to compile corrections.

But the panel's main mandate was sub-division of central list of OBCs, which emerged as the key political agenda of BJP a few years ago. But since then, BJP gave up its push to divide the backward list because of apparently altered political sensitivity, and has kept the report confidential since July 31, 2023, when the commission finally submitted its report after 14 extensions over six years.

"Moving to correct the OBC list now for Parliament's approval would require opening the Rohini report," a senior official said. Amid the limbo, the list has remained frozen for seven years as the old system of inclusion/exclusion was repealed along with promulgation of 102nd constitutional amendment.

**Courtesy:**Times of India, Dated:15.12.2025

## 7. G RAM G to replace NREGA, guarantee 125 days of work

Set to consign the Congress stamped MGNREGA to history the Modi govt will unveil a new law on guaranteed unskilled rural Jobs, with a structure that will

shift the Centre's financial burden to states, provide fixed budgets for states instead of the present practice of it being demand-driven, and annually pause the scheme for two months during the agricultural season in tweaks that will rewrite the concept of job guarantee from what has been known for the last two decades,

Titled 'Viksit Bharat Guarantee for Rozgar and Ajeevika Mission (Gramin) (VB-G RAM G) Bill, 2025', the bill will repeal MGNREGA, and put in place an implementation paraphernalia that is similar to the job guarantee scheme even as it diverges on consequential provisions. Also, it hikes the promised employment for a rural household from 100 days under MGNREGA to 125 days.

The bill, set to draw protests from the opposition in Parliament, was not tabled on 5th December even though it was listed in the Lok Sabha agenda.

As per the proposed Act, the Centre will bear 60% of the cost of the scheme, while states will bear the remaining 40%. In case of north eastern states and hill states of Uttarakhand, Himachal Pradesh and J&K, the fund sharing between the Centre and state will be 90:10.

his fund sharing formula is a major departure from MGNREGA, as it constitutes a flat division of costs on the lines of a "centrally sponsored scheme", without the distinctions of "labour cost" and "material cost" as prevalent under MGNREGA.

Under MGNREGA, Centre bears the entire cost of labour budget (wages) and 75% of material cost, besides a big part of administrative expenditure.

Moreover, the scheme will no longer be "demand-driven" as under MGNREGA in which budget for states is cleared according to "work plan" and "labour budget" anticipated work demand-presented to Union rural development ministry by individual states at start of the year. In contrast, in new law, as per Sec22, Centre will determine annual state wise "normative allocation" based on parameters to be laid down. The "normative allocation" is defined as allocation of fund being made so far by Centre to state. Any expenditure above the "normative allocation" will be borne by the state.

Most importantly, 'VB-G RAM G' will not be in operation for two months of a year, which would be notified as "peak agricultural seasons" -60 days to correspond with sowing & harvesting, and which states will announce in advance. As per Section 6, no work shall be commenced or executed during this period. The govt's rationale for the 60-day pause is "to facilitate adequate availability of agricultural labour during the said period". Essentially, the govt has agreed with the claims that MGNREGA is responsible for shortage of agricultural labour during peak seasons.

In finer detail of the implementation framework, provisions of proposed bill mirror details of MGNREGA from fixation of wages to the role of panchayats to setting up of monitoring authorities like "central gramin rozgar guarantee council" and its state counterparts, audit, preparation of village and block development plans. A

job-seeker will still be entitled to "unem-ployment allowance" to be paid by state, if she/he is not provided work within a fortnight of demand. The wages under the new scheme will be similar to the one under MGNREGA.

The programme will now be a centrally sponsored scheme, and every state govt will have to prepare a scheme within six months after the commencement of the Act.

**Courtesy:**Times of India, Dated:16.12.2025

## 8. LS clears ₹41,455 crore for additional spending

THE Lok Sabha on 16th December 2025 cleared the first tranche of Supplementary Demands for Grants, seeking an allocation of ₹41,455 crore of additional spending by the Centre in the current financial year, including expenditure of over 18,000 crore for fertilizer subsidy.

As per the Supplementary Demands, parliamentary approval was sought for ₹18,525 crore towards fertilizer and allied subsidies, and nearly 29,500 crore for the petroleum ministry to compensate oil market ing companies for under-recoveries. Finance Minister Nirmala Sitharaman said that the Centre had created a "bumper buffer" of urea to cater to higher demand following a good monsoon and increased fertilizer usage by farmers. She argued that there is a rise in fertilizer consumption as there has been a boost in farming due favourable rainfall. The package also includes 1,304 crore in additional spending for the department of higher education and 225 crore for the Commerce Ministry.

Replying to a debate, Sitharaman said she was disappointed that some MPs had described the move as a failure of budget planning."Supplementary demands are extremely essential for a responsible government. I do not allow more than two supplementary demands; if possible, I only keep one supplementary demand," she said.

Parliament approved proposals involving a gross additional expenditure of ₹1.32 lakh crore. Of this, the net cash outgo stands at 41,455.39 crore, while savings of ₹90,812 crore are expected across various ministries and departments.

Emphasising fiscal restraint, she said the government had consciously limited the number of supplemen tary spending approvals."I have reduced the number of supplementary demands. I don't want it to be more than two at the extreme, if anything. In fact, I try to have just one supplementary," she said.

**Courtesy:**Indian Express, Dated:16.12.2025

## 9. Insurance Bill passed in LS; 100% FDI now a reality

THE Lok Sabha on 16th December 2025 passed the Sabka Bima Sabki Raksha (Amendment of Insurance Laws) Bill, 2025, paving the way for allowing up to 100% 'foreign direct investment (FDI) in the insurance sector.

The Bill, introduced with the objective of boosting capital inflows, improving insurance penetration and enhancing, ease of doing business, also empowers the insurance regulator to disgorge unlaw-ful gains made by insurers and insurance intermediaries.

Addressing the Lok Sabha, Finance Minister Nirmala Sitharaman said the legislation aims to increase competition in the insurance market, enabling consumers to access a wider range of products at more affordable premium rates. "When competition comes into the market, the rate automatically comes down. Monopoly doesn't give us that advantage. The more the competition, the better the rates," she said.

Sitharaman underlined the need for further capital infusion into the sector, stating that permitting 100% FDI would help India benefit from better technology, world-class risk assessment models and globally competitive insurance products. "The proposed removal of the upper cap on FDI in the in-surance sector will be a significant enabler in meeting these objectives," she added.

Dispelling concerns that foreign players could dominate the sector, Sitharaman noted that despite the earlier FDI cap of 74%, only four insurance companies currently have foreign investment at that level. Of the 40 insurers with any FDI, 10 have foreign investment of less than 26%, 23 have FDI between 26% and 49%, and three have FDI between 49% and 74%, she said.

While seeking to create a level playing field for both domestic and foreign insurers and intermediaries, the Bill also strengthens the regulator's en-forcement powers.

Sitharaman said the amendments would empower the regulator to order disgorgement of wrongful gains. "When insurance companies make wrongful profits, those gains will be disgorged by the regulator," she said.

**Courtesy:**Indian Express, Dated:17.12.2025

## 10. **ಸುಧಾ ಮೂರ್ತಿಗೆ ಲೋಕಮತ ಉತ್ತಮ ರಾಜ್ಯಸಭೆ ಪಟು ಪ್ರಶಸ್ತಿ**

ಮೊದಲ ಬಾರಿ ಸಂಸತ್ ಪ್ರವೇಶಿಸಿರುವ ಕರ್ನಾಟಕ ಸಮಾಜಸೇವಕಿ, ಇನ್ಫೋ ನಾರಾಯಣ ಮೂರ್ತಿ ಅವರ ಪತ್ನಿ ಸುಧಾಮೂರ್ತಿ ಅವರಿಗೆ ರಾಜ್ಯಸಭೆ ವಿಭಾಗದಲ್ಲಿ ಖ್ಯಾತ ಮರಾಠಿ ಪತ್ರಿಕೆ ಲೋಕಮತದ 'ಪಾದಾರ್ಪಣೆ ಮಾಡಿದ ಉತ್ತಮ ಸಂಸದೆ 2025' ಪ್ರಶಸ್ತಿ ಲಭಿಸಿದೆ. ಲೋಕಸಭೆ ವಿಭಾಗದಲ್ಲಿ ಸಮಾಜವಾದಿ ಪಕ್ಷದ ಇಕ್ರಾ ಚೌಧರಿಗೆ ಈ ಗೌರವ ಸಿಕ್ಕಿದೆ. ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾ। ಬಿ.ಆರ್.ಗವಾಯಿ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಖುರೇಷಿ, ಆಧ್ಯಾತ್ಮಿಕ ಗುರು ಆಚಾರ್ಯ ಲೋಕೇಶ್ ಮುನಿ, ಲೋಕಮತ ಮಾಧ್ಯಮ ಸಂಸ್ಥೆಯ ಸಂಪಾದಕ ರಾಜೇಂದ್ರ ದರ್ಡಾ ಅವರ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

**ಆಧಾರ:** ಕನ್ನಡ ಪ್ರಭ, ದಿನಾಂಕ:18.12.2025

## 11. **ಸಂಸತ್ತಿನ ಚಳಿಗಾಲದ ಅಧಿವೇಶನ: 10ರ ಪೈಕಿ 8 ಮಸೂದೆ ಪಾಸ್**

ಸಂಸತ್ತಿನ ಚಳಿಗಾಲದ ಅಧಿವೇಶನ ಮುಕ್ತಾಯಗೊಂಡಿದ್ದು, 10 ಮಸೂದೆಗಳ ಪೈಕಿ 8 ಮಸೂದೆಗಳು ಅಂಗೀಕಾರ ಪಡೆದುಕೊಂಡಿವೆ. ಎರಡು ಮಸೂದೆಗಳನ್ನು ಜಂಟಿ ಸದನ ಸಮಿತಿ ಪರಾಮರ್ಶೆಗೆ ಕಳುಹಿಸಲಾಗಿದೆ. ವಾಯುಮಾಲಿನ್ಯ ಕುರಿತು ಚರ್ಚೆಗೆ ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದವಾದರೂ, ಅದಕ್ಕೆ ಅವಕಾಶ ದೊರೆಯಲಿಲ್ಲ.

ಹಣಕಾಸು ವಿಧೇಯಕ, ಆಹಾರ ಭದ್ರತೆಯಿಂದ ರಾಷ್ಟ್ರೀಯ ಭದ್ರತೆ ಸೆಸ್ ವಿಧೇಯಕ, ಕೇಂದ್ರ ಅಬಕಾರಿ ವಿಧೇಯಕ, ಮಣಿಪುರ ಜಿಎಸ್ಟಿ ವಿಧೇಯಕಗಳು ಅನುಮೋದನೆ ಪಡೆದುಕೊಂಡಿವೆ. ಆಹಾರ ಭದ್ರತೆ ಬಿಲ್ ಮತ್ತು ಅಬಕಾರಿ ವಿಧೇಯಕಗಳಲ್ಲಿ ತಂಬಾಕು ಉತ್ಪನ್ನಗಳಿಗೆ ಸೆಸ್ ಹೇರುವ ಪ್ರಸ್ತಾವವಿದ್ದಿತು.

ಡಿಸೆಂಬರ್ 1ರಂದು ಅಧಿವೇಶನ ಆರಂಭವಾಗಿತ್ತು. ಅದರಂತೆ ನ್ಯೂಕ್ಲಿಯರ್ ಎನರ್ಜಿ ಫಾರ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ ಬಿಲ್, ವಿಬಿ ಜಿರಾಮ್‌ಜಿ ಬಿಲ್‌ಗಳೂ ಅನುಮೋದನೆ ಪಡೆದುಕೊಂಡವು.

ಆದರೆ, ನರೇಗಾ ಬದಲು ಯೋಜನೆಗೆ ವಿಬಿ ಜಿರಾಮ್ ಜಿ ಎನ್ನುವ ಹೆಸರನ್ನು ಇಡಲು ತಂದಿರುವ ವಿಧೇಯಕಕ್ಕೆ ಪ್ರತಿಪಕ್ಷಗಳಿಂದ ವಿರೋಧ ವ್ಯಕ್ತವಾಗಿದ್ದು, ಇದು ಕಾಯ್ದೆಯಾಗಿ ಪರಿವರ್ತನೆಗೊಂಡರೂ, ದೇಶಾದ್ಯಂತ ಹೋರಾಟ ನಡೆಸುವುದಾಗಿ ಕಾಂಗ್ರೆಸ್ ಎಚ್ಚರಿಕೆ ನೀಡಿದೆ. ವಾಯುಮಾಲಿನ್ಯದ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಪ್ರತಿಪಕ್ಷಗಳು ಕೋರಿದ್ದವು. ಇದಕ್ಕೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಚರ್ಚೆಗೆ ಸಿದ್ಧ ಎಂದಿದ್ದರೂ, ಅದು ಚರ್ಚೆಗೇ ಬರಲಿಲ್ಲ.

ಈ ಬಾರಿಯ ವಿಶೇಷವೆಂದರೆ, ಸದನದಲ್ಲಿ ಕಲಾಪ ನಡೆಸಲು ಪ್ರತಿಪಕ್ಷಗಳು ಅವಕಾಶ ನೀಡಿದ್ದು. ಹೀಗಾಗಿ ವಂದೇಮಾತರಂ ಮತ್ತು ಮತಪಟ್ಟಿ ಪರಿಷ್ಕರಣೆ ಕುರಿತು ಚರ್ಚೆ ನಡೆದವು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:20.12.2025

# ಭಾಗ–4

# ಕೇಂದ್ರ ಸರ್ಕಾರ ಸುದ್ದಿಗಳು

## 1. ಆತಿಥ್ಯ ಅಧಿಕಾರದಲ್ಲಿ ಮೋದಿ 25ನೇ ವರ್ಷಕ್ಕೆ ಪಾದಾರ್ಪಣೆ

ಪ್ರಧಾನಿ ನರೇಂದ್ರ ಮೋದಿಯವರು 7ನೇ ಅಕ್ಟೋಬರ್ 2025ರಂದು ಸರ್ಕಾರದ ಮುಖ್ಯಸ್ಥರಾಗಿ 24 ವರ್ಷಗಳನ್ನು ಪೂರೈಸಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದಾರೆ.

07ನೇ ಅಕ್ಟೋಬರ್ 2001ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದ್ದರು. ಅಂದಿನಿಂದ ಇಂದಿನವರೆಗೆ ಅವರು ನಿರಂತರವಾಗಿ ಸರ್ಕಾರಗಳ ಮುಖ್ಯಸ್ಥರಾಗಿ ಅಧಿಕಾರಿದಲ್ಲಿದ್ದಾರೆ. ಅರ್ಥಾತ್ 2001 ರಿಂದ 2014ರ ಮಧ್ಯಭಾಗದವರೆಗೆ ಅವರು 13ವರ್ಷ ಕಾಲ ಗುಜರಾತ್ ಮುಖ್ಯಮಂತ್ರಿ ಹುದ್ದೆಯಲ್ಲಿದ್ದರು. ನಂತರ 2014ರಲ್ಲಿ ಪ್ರಧಾನಿಯಾಗಿ ಪದೋನ್ನತಿ ಹೊಂದಿದ ಅವರು ಈವರೆಗೆ ಕಳೆದ 11 ವರ್ಷಗಳಿಂದ ಆ ಹುದ್ದೆಯಲ್ಲಿ ಮುಂದುವರೆದಿದ್ದಾರೆ.

ಈ ಬಗ್ಗೆ ಟ್ವೀಟರ್‌ನಲ್ಲಿ ಹರ್ಷ ವ್ಯಕ್ತಪಡಿಸಿರುವ ಮೋದಿ ತಾವು ಮೊದಲ ಸಲ ಪಿ.ಎಂ.ಹಾಗೂ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಫೋಟೋ ಹಂಚಿಕೊಂಡಿದ್ದಾರೆ. ಜನರ ಜೀವನ ಸುಧಾರಿಸುವುದು ಮತ್ತು ಈ ಮಹಾನ್ ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡುವುದು ನನ್ನ ನಿರಂತರ ಪ್ರಯತ್ನವಾಗಿದೆ. ಭಾರತವಾಸಿಗಳ ನಿರಂತರ ಆಶೀರ್ವಾದದಿಂದಾಗಿ ನಾನು ಸರ್ಕಾರದ ಮುಖ್ಯಸ್ಥನಾಗಿ 25ನೇ ವರ್ಷಕ್ಕೆ ಕಾಲಿಡುತ್ತಿದ್ದೇನೆ. ಭಾರತ ಜನರಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದ್ದಾರೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:08.10.2025

## 2. Government notifies Digital Personal Data Protection Act

The Union government notified large parts of the Digital Personal Data Protection (DPDP) Act, 2023 on dated 14.11.2025, addressing the need for a law to protect the data privacy of Indian citizens.

The DPDP Rules, 2025 are also a significant step forward in compliance with the Supreme Court's 2017 K.S. Puttaswamy v. Union of India judgment affirming the right to privacy.

The law, passed in August 2023 in Parliament, requires firms to safeguard the digital data of Indian citizens, with exemptions for the "State and its instrumentalities", and prescribes penalties for firms that breach these obligations.

Meanwhile, transparency activists have said the law weakens the Right to Information Act, 2005 by removing the obligation of government bodies to provide "personal information" if the public interest outweighs a public official's right to privacy.

That amendment is in force from 15.11.2025. However, "data fiduciaries", who collect and use personal data, will have until November 2026 to comply with some provisions, such as putting out the details of their designated Data Protection officer. That same month, the Consent Manager framework, which allows firms to exercise data removal and amendment rights on behalf of "data principals" (users), will also come into force.

It may take until May 2027 for large tech firms to be subject to the full force of the Act, which also provides for the constitution of the Data Protection Board of India(DPBI) by the Centre.

Another notification - there were a total of four on dated 15.11.2025 sets the number of members in the DPBI at four. The board can hold inquiries in response to complaints and impose penalties in case of data breaches. The board's members, who have not yet been chosen, will be appointed by the Ministry of Electronics and Information Technology (MeitY).

The DPDP Act, 2023, has gone through three major drafts since 2017, with the first draft in 2018 imposing conditions like data localisation that were furiously resisted by technology firms. The latest version of the Act, which strips out many of the requirements of the original draft, has been relatively better received among large Indian and global tech firms, which as "significant data fiduciaries," would face additional compliance requirements.

Nasscom, which represents the main IT and technology firms, said in a statement issued through its Data Security Council of India (DSCI) initiative that it welcomed the Rules, but had problems with the Act that could not be solved by "subordinate legislation", such as tight rules around parental consent and short disclosure deadlines for breaches. "On international data transfers, Nasscom-DSCI recognises the importance of developing mechanisms that support interoperability and facilitate co-operation with India's key trading partners," Nasscom said.

Delhi-based digital rights advocacy Internet Freedom Foundation said the notified Rules "do not address key structural concerns repeatedly raised by civil society" and rued the fact that they "[defer] most core obligations and rights" by a year and a half. The Rules "provides statutory backing for enabling personal data collection by state agencies with scant oversight, thereby entrenching state control over personal data," the IFF said.

**Courtesy:**The Hindu, Dated:15.11.2025

## 3. 2030ರ ಕಾಮನ್‌ವೆಲ್ತ್ ಗೇಮ್ಸ್‌ಗೆ ಭಾರತದ ಆತಿಥ್ಯ

ಭಾರತ ಕ್ರೀಡಾ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದು, 2030ರ ಕಾಮನ್‌ವೆಲ್ತ್ ಕ್ರೀಡಾಕೂಟದ ಆತಿಥ್ಯ ಹಕ್ಕು ಪಡೆಯುವಲ್ಲಿ ಯಶಸ್ವಿಯಾಗಿದೆ. ಅಹಮದಾಬಾದ್‌ನಲ್ಲಿ ಕ್ರೀಡಾ ಕೂಟ ನಡೆಯಲಿದೆ. ಈ ಮೂಲಕ ಭಾರತ 2 ದಶಕಗಳ ಬಳಿಕ ಕಾಮನ್‌ವೆಲ್ತ್ ರಾಷ್ಟ್ರಗಳ ನಡುವೆ ನಡೆಯಲಿರುವ ಬಹುಕ್ರೀಡಾ ಕೂಟಕ್ಕೆ ಆತಿಥ್ಯ ವಹಿಸಲಿದೆ.

ದಿನಾಂಕ:26.11.2025ರಂದು ನಡೆದ ಕಾಮನ್‌ವೆಲ್ತ್ ಸ್ಪೋರ್ಟ್ಸ್‌ನ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗಿದೆ. 74 ಸದಸ್ಯರಿದ್ದ ಸಭೆಯಲ್ಲಿ ಭಾರತ ಸಲ್ಲಿಸಿದ್ದ ಉಮೇದುವಾರಿಕೆಗೆ ಸರ್ವಾನುಮತದಿಂದ ಒಪ್ಪಿಗೆ ದೊರೆಯಿತು.

ನೈಜೀರಿಯಾದ ಅಬುಜಾ ಕೂಡ ರೇಸ್‌ನಲ್ಲಿತ್ತು. ಆದರೆ ಅಹಮದಾಬಾದ್ ಪರ ಸದಸ್ಯರು ಒಲವು ತೋರಿದರು. ಕಾಮನ್‌ವೆಲ್ತ್ ಗೇಮ್ಸ್‌ನ ಆತಿಥ್ಯ ಹಕ್ಕು ಸಿಕ್ಕಿರುವುದರಿಂದ 2030 ಒಲಿಂಪಿಕ್ಸ್ ಆಯೋಜಿಸಬೇಕು ಎನ್ನುವ ಭಾರತದ ಕನಸಿಗೆ ಮತ್ತಷ್ಟು ಬಲ ತುಂಬಿದಂತಾಗಿದೆ. 2010ರಲ್ಲಿ ಭಾರತ ಕಡೆಯದಾಗಿ ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜಿಸಿತ್ತು.

**ಆಧಾರ:**ಕನ್ನಡ ಪ್ರಭ, ದಿನಾಂಕ:27.11.2025

## 4. ಜಿಎಸ್‌ಟಿ: ₹1.70 ಲಕ್ಷ ಕೋಟಿ ಸಂಗ್ರಹ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ನವೆಂಬರ್ ತಿಂಗಳಿನಲ್ಲಿ ₹1.70 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಇದು ಕಳೆದ ಒಂದು ವರ್ಷದಲ್ಲಿ ದಾಖಲಾದ ಅತ್ಯಂತ ಕಡಿಮೆ ಮಾಸಿಕ ಸಂಗ್ರಹವಾಗಿದೆ ಎಂದು ತಿಳಿಸಿದೆ. 2024ರ ನವೆಂಬರ್‌ನಲ್ಲಿ ₹1.69 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ನವೆಂಬರ್ ವರಮಾನ ಸಂಗ್ರಹದಲ್ಲಿ ಶೇ 0.7ರಷ್ಟು ಮಾತ್ರ ಹೆಚ್ಚಳವಾಗಿದೆ ಎಂದು ತಿಳಿಸಿದೆ. 2025ರ ಅಕ್ಟೋಬರ್‌ನಲ್ಲಿ ₹1.96 ಲಕ್ಷ ಕೋಟಿ ಸಂಗ್ರಹವಾಗಿತ್ತು.

ಜಿಎಸ್‌ಟಿ ಮಂಡಳಿಯು ಸೆಪ್ಟೆಂಬರ್ 22ರಂದು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದರಿಂದ ಸರಕುಗಳ ಬೆಲೆ ಕಡಿಮೆ ಆಯಿತು. ಇದೇ ವರಮಾನ ಸಂಗ್ರಹದ ಇಳಿಕೆಗೆ ಕಾರಣ ಎಂದು ತಿಳಿಸಿದೆ. ಆದರೂ, ಜಿಎಸ್‌ಟಿ ಇಳಿಕೆಯ ನಡುವೆಯೂ ಕಳೆದ ನವೆಂಬರ್ ತಿಂಗಳಿಗೆ ಹೋಲಿಸಿದರೆ ಈ ಬಾರಿ ವರಮಾನ ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 2.3ರಷ್ಟು ಇಳಿಕೆ ಕಂಡಿದ್ದು, ₹1.24 ಲಕ್ಷ ಕೋಟಿಯಾಗಿದೆ.

ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನವು 10.2ರಷ್ಟು ಏರಿಕೆಯಾಗಿದೆ. ಜಿಎಸಸಟಿ ಮರುಪಾವತಿಯಲ್ಲಿ ಶೇ.4ರಷ್ಟು ಕಡಿಮೆಯಾಗಿದ್ದು, ₹18,196 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.52 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಮರುಪಾವತಿಸುವವರೆಗೆ ಪರಿಹಾರ ಸೆಸ್ ಈಗ ತಾತ್ಕಾಲಿಕ ವ್ಯವಸ್ಥೆಯಾಗಿರುವುದರಿಂದ, ಒಟ್ಟು ಜಿಎಸ್‌ಟಿ ಸಂಗ್ರಹವನ್ನು ಲೆಕ್ಕಾಚಾರ ಮಾಡುವಾಗ ಸೆಸ್ ಅನ್ನು ಸೇರಿಸಲಾಗಿಲ್ಲ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹರಿಯಾಣ, ಅಸ್ಸಾಂ ಮತ್ತು ಕೇರಳ ಜಿಎಸ್‌ಟಿ ವರಮಾನದಲ್ಲಿ ಕ್ರಮವಾಗಿ ಶೇ.17, ಶೇ.18 ಮತ್ತು ಶೇ.8ರಷ್ಟು ಬೆಳವಣಿಗೆ ಕಂಡಿದ್ದರೆ, ಮಧ್ಯಪ್ರದೇಶ ಮತ್ತು ಒಡಿಶಾ ಕ್ರಮವಾಗಿ ಶೇ.17 ಮತ್ತು ಶೇ.18 ಕುಸಿತ ಕಂಡಿವೆ ಎಂದು ತಿಳಿಸಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ₹7,383 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಅದು ಈ ವರ್ಷದ ನವೆಂಬರ್‌ನಲ್ಲಿ ₹7,574 ಕೋಟಿಗೆ ಏರಿಕೆಯಾಗಿದ್ದು, ಶೇ 3ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಮಹಾರಾಷ್ಟ್ರವು ಅತಿ ಹೆಚ್ಚು, ₹16,122 ಕೋಟಿ ಜಿಎಸ್‌ಟಿ ಸಂಗ್ರಹಿಸಿದ ರಾಜ್ಯ ಎನಿಸಿದೆ. ಕಳೆದ ನವೆಂಬರ್‌ಗೆ ಹೋಲಿಸಿದರೆ ಈ ಸಾಲಿನ ನವೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ಶೇ.4ರಷ್ಟಿದೆ. ಉತ್ತರ ಪ್ರದೇಶವು ₹7,667 ಕೋಟಿ ಸಂಗ್ರಹಿಸಿದ್ದು, ಎರಡನೇ ಸ್ಥಾನದಲ್ಲಿದೆ.

**ಆಧಾರ:ಪ್ರಜಾವಾಣಿ,**, ದಿನಾಂಕ:02.12.2025

## 5. ಬ್ಯಾಂಕ್‌ಗಳಲ್ಲಿ ತ್ರಿಭಾಷಾ ಸೂತ್ರ ಕಡ್ಡಾಯ

ಬ್ಯಾಂಕ್‌ಗಳಲ್ಲಿ ಗ್ರಾಹಕರಿಗೆ ಸುಲಭ ಸೇವೆ ಒದಗಿಸುವ ಸಲುವಾಗಿ ತ್ರಿಭಾಷಾ ಸೂತ್ರ ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶನ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

"ಗ್ರಾಹಕರು ಬಳಸುವ ವಿವಿಧ ಬಗೆಯ ಅರ್ಜಿಗಳು, ಪಾಸ್‌ಬುಕ್ ಮೊದಲಾದವು ಹಿಂದಿ, ಇಂಗ್ಲಿಷ್ ಮತ್ತು ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಗಳಲ್ಲಿರಬೇಕು ಎಂದು ನಿರ್ದೇಶನ ನೀಡಲಾಗಿದೆ,"

ಎಂದು ಕೇಂದ್ರ ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ 2ನೇ ಡಿಸೆಂಬರ್ 2025ರಂದು ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

"ಸಂವಹನವನ್ನು ಸರಾಗಗೊಳಿಸಿ ಗ್ರಾಹಕರಿಗೆ ಪರಿಣಾಮಕಾರಿ ಸೇವೆ ಒದಗಿಸಲು ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ನೀಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ಬ್ಯಾಂಕ್‌ಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸಿದೆ. ಭಾರತೀಯ ಬ್ಯಾಂಕ್‌ಗಳ ಒಕ್ಕೂಟ (ಐಬಿಎ) ಕೂಡ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಗ್ರಾಹಕರೊಂದಿಗೆ ಸ್ಥಳೀಯ ಭಾಷೆಗಳಲ್ಲಿ ಮಾತುಕತೆ ನಡೆಸಬೇಕು. ಸ್ಥಳೀಯ ಭಾಷೆ ಬಲ್ಲ ಅಧಿಕಾರಿಗಳ ನೇಮಕಕ್ಕೆ ಆದ್ಯತೆ ನೀಡಬೇಕೆಂದು ಸಲಹೆ ನೀಡಿದೆ," ಎಂದು ಸಚಿವರು ವಿವರಿಸಿದರು.

"ಬ್ಯಾಂಕ್‌ಗಳಲ್ಲಿ ಎಲ್ಲ ಕೌಂಟರ್‌ಗಳಲ್ಲಿ ಸೂಚನಾ ಫಲಕಗಳನ್ನು ಹಾಕುವುದರಿಂದ ಹಿಡಿದು ಸಾಮಾನ್ಯ ಕೆಲಸ ಕಾರ್ಯಗಳ ನಿರ್ವಹಣೆ ತನಕ ಬ್ಯಾಂಕ್‌ನ ನಿರ್ದೇಶಕರ ಮಂಡಳಿ ಅನುಮೋದಿಸಿರುವ ನೀತಿಯನ್ನು ಪಾಲಿಸಬೇಕು ಎಂದು ಸೂಚಿಸಲಾಗಿದೆ. ಬ್ಯಾಂಕ್‌ಗಳಲ್ಲಿ ಗ್ರಾಹಕರಿಗೆ ನೀಡುವ ಸೇವೆ ಮತ್ತು ಸೌಲಭ್ಯಗಳ ವಿವರಗಳಿರುವ ಕಿರು ಪುಸ್ತಕಗಳನ್ನು ಒದಗಿಸಬೇಕು." ಎಂದು ಹೇಳಿದರು.

"ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ನೆರವು ನೀಡಲು ಬ್ಯಾಂಕುಗಳು ಬಹುಭಾಷಾ ಸಂಪರ್ಕ ಕೇಂದ್ರಗಳು ಮತ್ತು ಡಿಜಿಟಲ್ ವಾಹಿನಿಗಳನ್ನು ಹೊಂದಿವೆ ಎಂದು ಮಾಹಿತಿ ನೀಡಿದರು. ಬ್ಯಾಂಕುಗಳಲ್ಲಿ ಗ್ರಾಹಕ ಸೇವೆಗೆ ಸಂಬಂಧಿಸಿದಂತೆ ಪ್ರಾದೇಶಿಕ ಭಾಷೆಗಳ ಬಳಕೆಯ ಬಗ್ಗೆ ಆರ್‌ಬಿಐ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಹಣಕಾಸು ಸೇವೆಗಳ ಇಲಾಖೆ (ಡಿಎಫ್‌ಎಸ್) ಸಾರ್ವಜನಿಕ ವಲಯದ ಬ್ಯಾಂಕುಗಳಿಗೂ ಸೂಚಿಸಿದೆ. ಇದಲ್ಲದೆ ಶೆಡ್ಯೂಲ್ ಕಮರ್ಷಿಯಲ್ ಬ್ಯಾಂಕುಗಳಿಗೂ ಕೂಡ ಹಿಂದಿ, ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಗಳನ್ನು ಒಳಗೊಂಡ ತ್ರಿಭಾಷಾ ಸೂತ್ರ ಅನುಸರಿಸಬೇಕು ಎಂದು ಆರ್‌ಬಿಐ ನಿರ್ದೇಶಿಸಿರುವುದನ್ನು ಸಚಿವರು ರಾಜ್ಯಸಭೆಗೆ ತಿಳಿಸಿದರು.

"ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬ್ಯಾಂಕಿಂಗ್ ನೇಮಕಾತಿಗಳಲ್ಲಿ ಸ್ಥಳೀಯ ಭಾಷಾ ಪ್ರಾವೀಣ್ಯತೆ ಪರೀಕ್ಷೆ (ಎಲ್‌ಪಿಟಿ)ಯಲ್ಲಿ ಉತ್ತೀರ್ಣರಾಗಬೇಕಾಗುತ್ತದೆ. ಪ್ರಾದೇಶಿಕ ಭಾಷೆಗಳ ಬಳಕೆಯಿಂದ ಗ್ರಾಹಕರಿಗೆ ಬ್ಯಾಂಕಿಂಗ್ ವ್ಯವಹಾರಗಳು ಹೆಚ್ಚು ಸುಲಭ ಎಂದೆನಿಸುತ್ತದೆ,"ಎಂದು ಚೌಧರಿ ಹೇಳಿದರು.

**ಆಧಾರ:ಪ್ರಜಾವಾಣಿ,**, ದಿನಾಂಕ:03.12.2025

## 6. **Govt. withdraws order to install Sanchar Saathi app**

The Department of Telecommunications on 03rd December 2025 walked back its directions phone manufacturers ordering them to install a government app starting next year. The reversal caps a turbulent episode, in which the government first downplayed the nature of the mandate before committing to withdraw it altogether, arguing that a recent spike in downloads of Sanchar Saathi meant that there was "no need" for smartphone manufacturers to preload the app on their devices.

"The number of users has been increasing rapidly, and the mandate to install the app was meant to accelerate this process and make the app available to less aware citizens easily," a statement said.

The original direction was one of at least three issued after the DoT gave itself new powers to regulate Telecommunication Identifier User Entities

(TIUE), a concept the department created to allow it to issue such orders to any entity that used phone numbers, not just telecom operators. The order, not shared publicly but leaked by one or more recipients who were not expecting it, sparked immediate uproar as Internet users, civil society and the Opposition collectively criticised the idea of a government app being placed on phones of all in without their dians knowledge.

Responding to Congress MP Deepinder Singh Hooda in Parliament, Communications Minister Jyotiraditya Scindia defended the app, saying that "1.5 crore fraudulent mobile connections were disconnected, 26 lakh lost phones were traced. we have only taken steps to make the app available to everyone" Still, Mr. Scindia said, "This app's success is premised on public support; if. based on feedback, we have to change the order, we are ready to do that."

This is the third such order that was issued after the DoT notified an amendment to the Telecom Cyber Security Rules, 2024 last month. Another order requires platforms like WhatsApp to restrict accounts from operating on their platform if the device being used to access the service doesn't contain the registered SIM card. That order also mandated that services like WhatsApp Web would have to be logged out every six hours, as opposed to staying signed in persistently.

Yet another order, which has not been previously reported, was issued to major messaging and social media platforms, requiring them to integrate the DoT's Financial Fraud Risk Indicator and a blacklist of suspended mobile numbers into their databases, and "immediately deactivate" their accounts on these platforms.

The orders come from the DoT's seven person strong Al and Digital Intelligence Unit, which deals with issues ranging from SIM security, "illegal telecom setups," and coordinating with the Reserve Bank of India on issues of financial fraud.

In its December 1 order, the DoT said, "In order to safeguard the citizens from buying the non-genuine handsets, enable easy reporting of suspected misuse of telecom resources... the DoT has issued Directions [to] Ensure that the Sanchar Saathi mobile application is pre-installed on all mobile handsets manufactured or imported for use in India."

In the latest statement withdrawing the order, the Department said, "Just in last one day, 6 lakh citizens have registered for downloading the App which is a 10x increase in its uptake ... Given Sanchar Saathi's increasing acceptance, Government has decided not to make the pre-installation mandatory for mobile manufacturers."

**Courtesy:**The Hindu, Dated:04.12.2025

## 7. With new Bill, demand-led job scheme set to turn supply-driven

The  Union governent is set to introce the Viksit Act Bharat Guarantee For Rozgard Ajeevika Mission (Gramin) Bill to replace the Mahatma Gandhi National Rural Employ Guarantee Act (MGNREGA), 2005 in the Lok Sabha. The move will mark a shift from a "demand-driven framework" to a "supply driven scheme".

Under the new system, allocations will be capped within a fixed budget de termined by the Union government based on "parameters" not yet specified. Employment will be provided only in rural areas notified by the Centre.

While the VB-G RAM G Bill increases the number of guaranteed workdays from 100 to 125, it significantly raises the financial burden on States from the current 10% she to 40% of total expendit.

The government circulated the Bill among MPs on Monday, framing it as legislation to "establish a rural development framework aligned with the national vision of Viksit Bharat @2047"Under the MGNREGA, the Union government was responsible for 100% of the labour wages and 75% of the material wages.

**Courtesy:**The Hindu, Dated:16.12.2025

## 8. Rajkumar Goyal takes oath as CIC; 8 more sworn in

President Droupadi Murmu on Monday administered the oath of office to former Indian Administrative Service (IAS) officer Raj Kumar Goyal as the Chief Information Commissioner of the Central Information Commission. Mr. Goyal took charge and administered the oath of office to eight new Information Commissioners in the presence of two incumbent Information Commissioners, Anandi Ramalingam and Vinod Kumar Tiwari

The new appointees are Surendra Singh Meena, Ashutosh Chaturvedi, Swa-gat Das, Sudha Rani Relan P.R. Ramesh, Khush-want Singh Sethi, Jaya Varma Sinha, and Sanjeev Kumar Jindal. The Central Information Commission, set up under the RTI Act with up to 10 members, now has a full panel for the first time in nine years.

**Courtesy:**The Hindu, Dated:16.12.2025

## 9. ಪಿಎಂ ಕಿಸಾನ್‌ಗೆ ರೈತ ಐಡಿ

ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್(ಪಿಎಂ–ಕಿಸಾನ್) ಯೋಜನೆಯಲ್ಲಿ ಅನರ್ಹ ಫಲಾನುಭವಿಗಳನ್ನು ತಡೆಯಲು ಕರ್ನಾಟಕದ ಫ್ರುಟ್ಸ್ ಐಡಿ ಮಾದರಿಯಲ್ಲೇ ದೇಶದ ರೈತರಿಗೆ ವಿಶಿಷ್ಟ ಗುರುತಿನ ಚೀಟಿ(ರೈತ ಐಡಿ) ವಿತರಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಈವರೆಗೆ ದೇಶಾದ್ಯಂತ ಅನರ್ಹರಿಗೆ ವಿತರಣೆಯಾಗಿದ್ದ 416 ಕೋಟಿ ರೂ. ಮೊತ್ತವನ್ನು ಮರುವಸೂಲಿ ಮಾಡಿದ್ದು, ಇಂತಹ ಅವ್ಯವಹಾರವನ್ನು ಶಾಶ್ವತವಾಗಿ ತಡೆಯಲು ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ. ಕೃಷಿ ಭೂಮಿ ಹೊಂದಿದ ರೈತ ಕುಟುಂಬಗಳಿಗೆ ಆರ್ಥಿಕ ಸಹಾಯವಾಗಿ ವಾರ್ಷಿಕ 6,000 ರೂ.

ನೀಡಲಾಗುತ್ತಿದೆ. ಪ್ರತಿ ನಾಲ್ಕು ತಿಂಗಳಿಗೊಮ್ಮೆ ವರ್ಷಕ್ಕೆ ಮೂರು ಬಾರಿ ತಲಾ 2,000 ರೂ.ನಂತೆ ಫಲಾನುಭವಿಯ ಬ್ಯಾಂಕ್ ಬಿಡುಗಡೆಯಾಗಿದೆ. ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಲಾಗುತ್ತಿದೆ. ಕಳೆದ ತಿಂಗಳು ನವೆಂಬರ್ 19ರಂದು 21ನೇ ಕಂತು ಆರಂಭವಾದಾಗಿನಿಂದ ಈವರೆಗೆ ಯೋಜನೆ 4.09 ಲಕ್ಷ ಕೋಟಿ ರೂ.ಅನ್ನು ಫಲಾನುಭವಿಗಳ ಖಾತೆಗಳಿಗೆ ಸಂದಾಯ ಮಾಡಲಾಗಿದೆ. ಯೋಜನೆಯಲ್ಲಿ ಅನರ್ಹ ಫಲಾನುಭವಿಗಳ ಸಂಖ್ಯೆ ಹೆಚ್ಚುತ್ತಿರುವ ಪ್ರಕರಣಗಳು ಪತ್ತೆಯಾದ ಹಿನ್ನೆಲೆಯಲ್ಲಿ ಯೋಜನೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಸೇರಿ 14 ರಾಜ್ಯಗಳಲ್ಲಿ ಹೊಸದಾಗಿ ನೋಂದಣಿಯಾಗುವ ರೈತರಿಗೆ ರೈತ ಕಾರ್ಡ್ ಕಡ್ಡಾಯಗೊಳಿಸಲಾಗಿದೆ.

ಕರ್ನಾಟಕದಲ್ಲಿ 59,13,902 ರೈತರಿಗೆ ಗುರುತಿನ ಚೀಟಿ ವಿತರಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದರಲ್ಲಿ ಡಿ.4ರವರೆಗೆ ರಾಜ್ಯ ಕೃಷಿ ಇಲಾಖೆಯ ಫ್ರೂಟ್ಸ್ ಐಡಿ ಹೊಂದಿರುವ 45,14,772 ರೈತರನ್ನು ಅಂಗೀಕರಿಸಿದ್ದು, ಇನ್ನೂ 13,99,130 ಮಂದಿಗೆ ರೈತ ಕಾರ್ಡ್ ವಿತರಿಸಿರುವ ಪ್ರಕ್ರಿಯೆಯನ್ನು ಶುರು ಮಾಡಿದೆ. ಅನರ್ಹರ ಖಾತೆಗಳನ್ನು ಸ್ಥಗಿತಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದೇ ಕಾರಣಕ್ಕಾಗಿ ಫಲಾನುಭವಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ.

ಕರ್ನಾಟಕದಲ್ಲಿ 7ನೇ ಕಂತಿನಲ್ಲಿ 52,81,757 ರೈತರಿಗೆ 1,063 ಕೋಟಿ ರೂ. ಬಿಡುಗಡೆಯಾಗಿತ್ತು. ಕಳೆದ ತಿಂಗಳು ಬಿಡುಗಡೆಯಾದ 21ನೇ ಕಂತಿನಲ್ಲಿ 41,43,679 ರೈತರಿಗೆ 828 ಕೋಟಿ ರೂ. ಪಾವತಿಯಾಗಿದೆ. ಅಂದರೆ 7ನೇ ಕಂತಿನಿಂದ 21ನೇ ಕಂತಿನ ವೇಳೆಗೆ ರಾಜ್ಯದಲ್ಲಿ 11,38,078 ಖಾತೆಗಳು ಬಂದ್ ಆಗಿವೆ. ಇದೇ ರೀತಿ ದೇಶಾದ್ಯಂತ 7ನೇ ಕಂತಿನಲ್ಲಿ 98,47,6200 ರೈತರ ಖಾತೆಗಳಿಗೆ 20,475 ಕೋಟಿ ರೂ. ಜಮೆ ಮಾಡಲಾಗಿತ್ತು. ನವೆಂಬರ್‌ನಲ್ಲಿ ಬಿಡುಗಡೆಯಾದ 21ನೇ ಕಂತಿನಲ್ಲಿ 93,45.52.32 ಖಾತೆಗಳಿಗೆ 18,691 ಕೋಟಿ ರೂ. ಜಮೆಯಾಗಿದೆ. ಅಂದರೆ 7ನೇ ಕಂತಿನಿಂದ 21ನೇ ಕಂತಿನ ವೇಳೆಗೆ ದೇಶಾದ್ಯಂತ 50,20,968 ಅನರ್ಹ ಖಾತೆಗಳು ಸ್ಥಗಿತಗೊಂಡಿವೆ. ಇನ್ನಷ್ಟು ಪಾರದರ್ಶಕತೆ ತರಲು ಕರ್ನಾಟಕದಲ್ಲಿ ಭಾರಿಯಾಗಿರುವ ಫ್ರೂಟ್ಸ್ ಐಡಿ ಮಾದರಿಯಲ್ಲೇ ದೇಶಾದ್ಯಂತ ಒಂದೇ ರೈತ ಐಡಿ ಕೊಡಲು ಕೇಂದ್ರ ಸರ್ಕಾರ ಯೋಜನೆ ಕೈಗೆತ್ತಿಕೊಂಡಿವೆ.

**ಆಧಾರ:**ವಿಜಯವಾಣಿ, ದಿನಾಂಕ:17.12.2025

# ಭಾಗ– 5

# ರಾಜ್ಯ ಸರ್ಕಾರ ಸುದ್ದಿಗಳು

## 1. ಬೆಂಗಳೂರು ಕೃಷಿ ವಿ.ವಿ. ಐವರು ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಕೃಷಿಮೇಳ–2025ರ ಪ್ರಯುಕ್ತ ರಾಜ್ಯಮಟ್ಟದ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗಳಿಗೆ ಐವರು ಕೃಷಿ ಸಾಧಕರನ್ನು ಆಯ್ಕೆ ಮಾಡಿದೆ.

ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಕೋಲಾರ ತಾಲ್ಲೂಕು ಮದನಹಳ್ಳಿ ಗ್ರಾಮದ ರವಿಶಂಕರ್ ಎಂ.ಎನ್., ಎಂ.ಎಚ್. ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಬೀಡಿಗಾನಹಳ್ಳಿಯ ಮಂಜುನಾಥ ಬಿ.ಆರ್. ಅವರನ್ನು ಆಯ್ಕೆ ಮಾಡಲಾಗಿದೆ.

ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ ತಾಲ್ಲೂಕು ಲಕ್ಷ್ಮೀಪುರ ಗ್ರಾಮದ ಶಿವರಾಜು ಎಲ್.ವಿ., ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಪದ್ಮನಿ, ಆರ್.ದ್ವಾರಕಿನಾಥ್ ಅತ್ಯುತ್ತಮ ರೈತ ಪ್ರಶಸ್ತಿಗೆ ಗೋವಿಂದಪ್ಪ ಎಚ್.ಎಲ್. ಅವರನ್ನು ಆಯ್ಕೆ ಮಾಡಲಾಗಿದೆ.

ಇದಲ್ಲದೇ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗೆ ಆನೇಕಲ್ ತಾಲ್ಲೂಕು ಹಳೇಹಳ್ಳಿ ತಾಲ್ಲೂಕಿನ ಸತೀಶ್ ಕುಮಾರ್, ಯಲಹಂಕ ತಾಲ್ಲೂಕು ಚೊಕ್ಕನಹಳ್ಳಿ ಲಕ್ಷ್ಮಮ್ಮ ಸೇರಿದಂತೆ 12 ಸಾಧಕರನ್ನು ಆಯ್ಕೆ ಮಾಡಲಾಗಿದೆ.

ತಾಲ್ಲೂಕು ಮಟ್ಟದ ಯುವ ರೈತ ಮತ್ತು ಯುವ ರೈತ ಮಹಿಳೆ ಪ್ರಶಸ್ತಿಗೆ 74 ಮಂದಿಯನ್ನು ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

**ಆಧಾರ:**ಪ್ರಜಾವಾಣಿ, ದಿನಾಂಕ:27.10.2025

## 2. ಭೂ ಪರಿವರ್ತಿತ ಜಮೀನು: ಬಡಾವಣೆ ವಿನ್ಯಾಸಕ್ಕೆ ಸುತ್ತೋಲೆ

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಪ್ರದೇಶಗಳಲ್ಲಿನ ಭೂಪರಿವರ್ತಿತ ಜಮೀನುಗಳಲ್ಲಿ ಬಡಾವಣೆಗಳ ವಿನ್ಯಾಸ ಅನುಮೋದನೆಯ ಕುರಿತು ವಹಿಸಬೇಕಾದ ಕ್ರಮಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ತಿದ್ದುಪಡಿ) ಅಧಿನಿಯಮ, 2025ರ ಪ್ರಕರಣ 199(ಬಿ)ರಲ್ಲಿ ಕಟ್ಟಡ ನಿರ್ಮಾಣ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗಾಗಿ ಹೊಸ ಖಾತಾ ಅಥವಾ ಪಿ.ಐ.ಡಿಯನ್ನು ನೀಡಲು ಗ್ರಾಮ ಪಂಚಾಯತಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಲಾದ ಪ್ರಾಧಿಕಾರಗಳು, ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರದ ಮೂಲಕ ಬಡಾವಣೆ ನಕ್ಷೆಗಾಗಿ ಪೂರ್ವಾನುಮೋದನೆಯನ್ನು ಪಡೆದುಕೊಳ್ಳಬೇಕಾಗಿದೆ. ಬಡಾವಣೆ ಅಭಿವೃದ್ಧಿದಾರರು ನಮೂನೆ–1ರಲ್ಲಿ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಗ್ರಾಮ ಪಂಚಾಯತ್‌ಗೆ ಸಲ್ಲಿಸಬೇಕು. ವಿನ್ಯಾಸ ನಕ್ಷೆಯ ಪ್ರಕಾರ, ಬಡಾವಣೆಯ ಮಾಲೀಕರು ಸಂಬಂಧಿಸಿದ ಗ್ರಾಮ ಪಂಚಾಯತ್‌ಗೆ ರಸ್ತೆಗಳ ಅಗಲೀಕರಣಕ್ಕೆ ಮೀಸಲಿರಿಸಿದ ರಸ್ತೆಗಳು ಸೇರಿದಂತೆ ರಸ್ತೆಗಳು, ಪಾರ್ಕ್‌ಗಳು, ವಾಹನ ನಿಲ್ದಾಣಗಳು, ನಾಗರೀಕ ಸೌಲಭ್ಯದ ಪ್ರದೇಶಗಳು, ಸಾರ್ವಜನಿಕ ಬಳಕೆಯ ಪ್ರದೇಶಗಳು ಹಾಗೂ ಇತರೆ ಮೂಲ ಸೌಕರ್ಯಗಳ ಪ್ರದೇಶಗಳನ್ನು ಉಚಿತವಾಗಿ ನೋಂದಾಯಿತ ಪರಿತ್ಯಾಜನ ಪತ್ರದ ಮುಖಾಂತರ ವರ್ಗಾಯಿಸಬೇಕಾಗುತ್ತದೆ.

ಬಡಾವಣೆಯ ಮಾಲೀಕರು, ವಿನಿಮಯ–11ರ ಪ್ರಕಾರ ಅನುಮೋದಿತ ಬಡಾವಣೆಯಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಂತೆ ಸಂಬಂಧಿಸಿದ ಇಲಾಖೆಗಳಾದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ

ಇಲಾಖೆ, ಎಸ್ಕಾಂ ಹಾಗೂ ಅವಶ್ಯಕ ಇತರೆ ಇಲಾಖೆಗಳಿಂದ ಅನುಮೋದಿತ ವಿನ್ಯಾಸದಂತೆ ದೃಢೀಕೃತ ಅಂದಾಜು ಪಟ್ಟಿಗಳನ್ವಯ ಅನುಷ್ಠಾನ ಮಾಡಬೇಕು.

ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಪ್ರದೇಶದಲ್ಲಿ ಬರುವ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿನ ಭೂಪರಿವರ್ತಿತ ಜಮೀನುಗಳಲ್ಲಿ ವಿನ್ಯಾಸ ಅನುಮೋದನೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಿರುವುದನ್ನು ಖಾತ್ರಿಪಡಿಸಿಕೊಂಡು, ಬಡಾವಣೆಗಳಿಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳನ್ನು ನಿರ್ವಹಿಸಿ, ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಅಗತ್ಯ ಕ್ರಮವಹಿಸಲು ತಿಳಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:27.10.2025

## 3. 72 ಜನರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ

ಸಹಕಾರ ಕ್ಷೇತ್ರ ಗಟ್ಟಿಯಾದರೆ ಆರ್ಥಿಕ ಹಾಗೂ ಸಾಮಾಜಿಕ ಚೈತನ್ಯ ಹೆಚ್ಚಾಗಲಿದೆ. ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಿಸಿದರು.

ಸಹಕಾರ ಇಲಾಖೆ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ದಿನಾಂಕ:12.11.2025ರಂದು ಹಮ್ಮಿಕೊಂಡಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ, ಸಹಕಾರಿ ಪುರಸ್ಕೃತರಿಗೆ 'ಸಹಕಾರ ರತ್ನ' ಪ್ರಶಸ್ತಿ ವಿತರಿಸಿ, ಗ್ರಾಮೀಣ ಭಾರತದ ಪ್ರಗತಿಗಾಗಿ ಸಹಕಾರ ಕ್ಷೇತ್ರ ಬಹಳ ಮುಖ್ಯವಾಗಿದ್ದು, ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲವಾಗಿದೆ. ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಚೈತನ್ಯ ನೀಡಿದ್ದಾರೆ ಎಂದು ಅವರನ್ನು ಸರಿಸಿದರು.

ರಾಜ್ಯದ ಗದಗ ಜಿಲ್ಲೆಯ ಕಣಗಿನಾಳ್‌ನಲ್ಲಿ ಮೊಟ್ಟ ಮೊದಲ ಸಹಕಾರ ಬ್ಯಾಂಕ್ ಸ್ಥಾಪನೆ ಆಗಿತ್ತು. ಆದ್ದರಿಂದಲೇ ಕರ್ನಾಟಕವನ್ನು ಭಾರತದ ಸಹಕಾರ ಕ್ಷೇತ್ರದ ರಾಜಧಾನಿ ಎಂದು ಕರೆಯುತ್ತಾರೆ ಎಂದು ಹೇಳಿದರು.

ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪನವರು ಮಾಡಿದ್ದ ಒಂದು ಲೀಟರ್ ಹಾಲಿನ ಪ್ರೋತ್ಸಾಹ ಧನ 2 ರೂ. ನಿಂದ 3 ರೂ ಏರಿಸಿದ್ದೆ. ಸದ್ಯ ಅದು 5 ರೂ.ಗೆ ಏರಿಕೆಯಾಗಿದೆ. ಆ ಮೂಲಕ ಪ್ರತಿ ದಿನ 5 ಕೋಟಿ ರೂಪಾಯಿ ಹಾಲು ಉತ್ಪಾದಕರಿಗೆ ಸಂದಾಯವಾಗುತ್ತಿದೆ ಎಂದರು. ಕರ್ನಾಟಕದಲ್ಲಿ 1 ಕೋಟಿ ಲೀಟರ್ ಹಾಲು ಪ್ರತಿ ದಿನ ಉತ್ಪಾದನೆಯಾಗುತ್ತಿದ್ದು, ಅದರ ಉತ್ಪನ್ನ ಮತ್ತು ಉಪ ಉತ್ಪನ್ನಗಳನ್ನು ನಂದಿನಿ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಸಹಕಾರ ಬ್ಯಾಂಕುಗಳ ಮೂಲಕ 37 ಲಕ್ಷ ರೈತರಿಗೆ 27 ಸಾವಿರ ಕೋಟಿ ರೂ. ಸಾಲ ಸೌಲಭ್ಯವನ್ನು ನೀಡುತ್ತಿರುವ ರಾಜ್ಯ ಸರ್ಕಾರ, 5 ಲಕ್ಷದವರೆಗೆ ಬಡ್ಡಿರಹಿತ ಸಾಲವನ್ನು ನೀಡಿ ಸಹಕಾರ ಕ್ಷೇತ್ರವನ್ನು ಬಲಪಡಿಸಲು ಮಹತ್ವದ ಹೆಜ್ಜೆ ಇರಿಸಿದೆ ಎಂದು ಸಿಎಂ ವಿವರಿಸಿದರು.

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಮಾತನಾಡಿ, ಕಾರ್ಮಿಕ ಶೋಷಣೆಯನ್ನು ತಪ್ಪಿಸುವುದಕ್ಕೆ ಜಾಗತಿಕವಾಗಿ ಆರಂಭವಾದ ಸಹಕಾರ ಸಂಘಗಳು ಭಾರತದಲ್ಲೂ ಬಹಳ ಹಿಂದೆಯೇ ಸ್ಥಾಪನೆಗೊಂಡಿವೆ. 2 ಲಕ್ಷ ಜನ ಈ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಹಕಾರಿ ತತ್ವಗಳ ಬಗ್ಗೆ ಶಾಲಾ ಪಠ್ಯದಲ್ಲಿ ಸೇರಿಸುವ ಅಗತ್ಯವಿದೆ. ಸರ್ಕಾರ ಈ ಬಗ್ಗೆ ಯೋಚಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಕೆ.ಆರ್.ಚನ್ನಕೇಶವಮೂರ್ತಿ, ಹೆಚ್.ಸಿ. ಗೋಪಾಲ, ಬಿ.ಆರ್. ವಾಸುದೇವ್, ಈ.ದೊಡ್ಡನಾಗಯ್ಯ,ಸುಮಾ ಜನಾರ್ಧನ್ ಸೇರಿದಂತೆ 72 ಸಹಕಾರಿ ಧುರೀಣರಿಗೆ 'ಸಹಕಾರ ರತ್ನ' ಪ್ರಶಸ್ತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶಾಸಕರಾದ ಎಸ್.ಟಿ.ಸೋಮಶೇಖರ್, ಕೆ.ಷಡಕ್ಷರಿ, ಪ್ರಕಾಶ್ ಕೋಳಿವಾಡ್, ಸಹಕಾರಿ ಪದಾಧಿಕಾರಿಗಳಿದ್ದರು.

**ಆಧಾರ:**ಉದಯವಾಣಿ, ದಿನಾಂಕ:27.10.2025

## 4. Digital Nagarik programme launched in govt. schools

To create awareness about cybersecurity and digital safety among students, the Karnataka government has begun a Digital Nagarik programme in all government primary and high schools of the State.

Around 1 lakh teachers and 10 lakh students from classes 6 to 10 will benefit from the programme and will be made aware of safe Internet use, cyber safety rules, online etiquette, digital rights, responsibilities and data privacy.

The programme is taken up in collaboration with the Union Ministry of Eduation and the social media giant Meta. A successful pilot was conducted in Bengaluru, Mysuru, Belagavi and Dakshina Kannada districts in 2024-25.

Educational Research and Training (DSERT) will initially train 1,00,000 teachers using the DISHA portal, who will subsequently raise awareness among teachers commenced on November 15.

To create awareness about digital safety, a host of activities, including awareness campaigns, classroom sessions, poster competitions, and student led drives, have been planned as part of the Digital Nagarik programme. A Digital Nagrik Toolkit will plan initiatives that promote safe and responsible online behaviour.

Schools are encouraged to nominate student leaders as Digital Nagrik Ambassadors to lead these ac tivities. Top-performing schools and Digital Nagrik Ambassadors will be recognised and featured for their outstanding contributions.

The programme comes in the backdrop of Increased usage of smartphones and the Internet by children, especially after the pandemic, when classes were also shifted online.

"In recent years, children have been spending more time online after school. There seems to be no proper monitoring of this. Due to this, cases of digital bullying, phishing, and morphing targeting children have also shot up. In this context, it is imperative to create awareness bersecurity and digital safety, and the Digital Nagarik programme is an initiative in this direction," said Gopalakrishna H.N., Director, DSERT.

**Courtesy:**The Hindu, Dated:17.11.2025

## 5. ಸಿಎಂ ಆಗಿ 7.5 ವರ್ಷ ಪೂರೈಸಿದ ಸಿದ್ದು!

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ನವೆಂಬರ್ 20ಕ್ಕೆ ಒಟ್ಟಾರೆ ಏಳೂವರೆ ವರ್ಷ ಪೂರೈಸುತ್ತಿದ್ದು, ಎರಡನೇ ಬಾರಿ ಸಿಎಂ ಆಗಿ ಗುರುವಾರಕ್ಕೆ ಎರಡೂವರೆ ವರ್ಷ ಪೂರ್ಣಗೊಳಿಸಲಿದ್ದಾರೆ. ಅಧಿಕಾರ ಹಸ್ತಾಂತರದ ಗುಲ್ಲು ಜೋರಾಗಿ ನಡೆಯುತ್ತಿರುವ ಮಧ್ಯೆಯೇ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ ಎಂಬ ಅಭಯ ಹೈಕಮಾಂಡ್ ಹೇಳಿರುವುದು ಸಿದ್ದು ಬೆಂಬಲಿಗರಲ್ಲಿ ಸಂಭ್ರಮ ಹೆಚ್ಚಿಸಿದೆ. ಈ ಮಧ್ಯೆ ರಾಜ್ಯದ ಅತಿ ಹೆಚ್ಚು ಅವಧಿಗೆ ಸಿಎಂ ಆದ ದಾಖಲೆಗೆ ಇನ್ನೇನು ಕೇವಲ 52 ದಿನ ಬಾಕಿ ಇದೆ!

ಮೈಸೂರು ರಾಜ್ಯದ ಅವಧಿಯೂ ಸೇರಿದಂತೆ ಮರುನಾಮಕರಣಗೊಂಡ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಹಿಂದುಳಿದ ವರ್ಗಗಳ ನೇತಾರರೆಂದೇ ಖ್ಯಾತಿಯಾದ ಡಿ. ದೇವರಾಜ ಅರಸು ಅವರು ಎರಡು ಅವಧಿಗೆ ಅತಿ ಹೆಚ್ಚು ಅಂದರೆ 7 ವರ್ಷ 239 ದಿನಗಳ ಕಾಲ ಮುಖ್ಯಮಂತ್ರಿ ಆಗಿದ್ದರು. ಒಂದು ಅವಧಿಯಲ್ಲಿ 5 ವರ್ಷ 286 ದಿನಗಳು, ಮತ್ತೊಂದು ಅವಧಿಗೆ 1 ವರ್ಷ 318 ದಿನಗಳ ಕಾಲ ಸಿಎಂ ಆಗಿ ಅಧಿಕಾರ ನಡೆಸಿದ್ದರು. ಭೂ ಸುಧಾರಣೆ ಕಾಯ್ದೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಹೆಸರಾಗಿದ್ದ ಅರಸು ನಂತರ ಮತ್ತಾವುದೇ ಮುಖ್ಯಮಂತ್ರಿಗಳು ಇಷ್ಟು ಸುದೀರ್ಘ ಅವಧಿಗೆ ರಾಜ್ಯವನ್ನು ಆಳಿರಲಿಲ್ಲ.

ಅರಸು ನಂತರ ಅರಸು ಸಿದ್ಧಾಂತಗಳನ್ನೇ ಮುಂದಿಟ್ಟುಕೊಂಡು ರಾಜಕೀಯ ಹೆಜ್ಜೆಗಳನ್ನಿರಿಸುತ್ತ ಬಂದಿರುವ ಸಿದ್ದರಾಮಯ್ಯ 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ 5 ವರ್ಷ 4 ದಿನಗಳ ಕಾಲ ಅಧಿಕಾರ ನಿಭಾಯಿಸಿದ್ದರು. ನಂತರ 2023ರಲ್ಲಿ ಮೇ 30ರಂದು ಎರಡನೇ ಬಾರಿ ಮುಖ್ಯಮಂತ್ರಿಯಾದರು. ನವೆಂಬರ್ 20ಕ್ಕೆ ಸರಿಯಾಗಿ ಎರಡೂವರೆ ವರ್ಷಗಳನ್ನು ಪೂರೈಸುತ್ತಿದ್ದಾರೆ. ಇನ್ನೂ 52 ದಿನಗಳನ್ನು ಕಳೆದರೆ ದೇವರಾಜ ಅರಸು ದಾಖಲೆ ಮುರಿದು ಮುನ್ನುಗ್ಗಲಿದ್ದಾರೆ. ಅಂದರೆ ಜನವರಿ 20ಕ್ಕೆ ರಾಜ್ಯದ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಕೀರ್ತಿಗೆ ಸಿದ್ದರಾಮಯ್ಯ ಭಾಜನರಾಗಲಿದ್ದಾರೆ. ಮೇ 20ಕ್ಕೆ ಕಾಂಗ್ರೆಸ್ ಸರಕಾರದ 3 ವರ್ಷ ಅವಧಿ ಪೂರ್ಣಗೊಳ್ಳಲಿದೆ. ದೇವರಾಜ ಅರಸು ಅವರ ದಾಖಲೆಯ ಸಿಎಂ ಅವಧಿಯನ್ನು ಮೀರಿ ಸಿದ್ದರಾಮಯ್ಯ ಹೊಸ ದಾಖಲೆ ಬರೆಯಲು ಕಾಂಗ್ರೆಸ್ ಹೈಕಮಾಂಡ್ ಅನುವು ಮಾಡಿಕೊಡಲಿದೆ ಎಂಬುದು ಸಿದ್ದರಾಮಯ್ಯ ಬೆಂಬಲಿಗರ ಬಲವಾದ ನಂಬಿಕೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಹುದ್ದೆ ಮೇಲೆ ಕಣ್ಣಿರುವುದು ರಹಸ್ಯವೇನಲ್ಲ. ಆದರೆ ಸಿದ್ದರಾಮಯ್ಯ ಅವರನ್ನು ಬದಲಿಸಲು ಹೈಕಮಾಂಡ್ ಒಪ್ಪುತ್ತದೆಯೇ? ಒಪ್ಪಿದರೆ ಯಾವಾಗ ಅದು ಕಾರ್ಯಗತವಾಗುತ್ತದೆ? ಸಿದ್ದರಾಮಯ್ಯ ದಾಖಲೆ ಅವಧಿಗೆ ಸಿಎಂ ಆದರೆ ಕಾಂಗ್ರೆಸ್‌ಗೆ ಲಾಭವಾಗಲಿದೆ ಎಂಬ ಬೆಂಬಲಿಗರ ಪ್ರತಿಪಾದನೆ ಕಾಂಗ್ರೆಸ್ ಹಿರಿಯ ನಾಯಕರ ಪ್ರಕಾರ, 2026ರ ಮೇ 20ರವರೆಗೆ ಸಿದ್ದರಾಮಯ್ಯ ಬದಲಾವಣೆಗೆ ಹೈಕಮಾಂಡ್ ಮನಸ್ಸು ಮಾಡುವುದಿಲ್ಲ. ತದನಂತರ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಬಹುಮುಖ್ಯ ಹುದ್ದೆಗಳು ಬದಲಾಗಲಿದ್ದು, ಆಗ ರಾಜ್ಯದಲ್ಲೂ ಕೆಲವು ಮಾರ್ಪಾಟು ಮಾಡಲು ಹೈಕಮಾಂಡ್ ಮುಂದಾಗಬಹುದು, ಸಂಪುಟ ಪುನರ್‌ರಚನೆ ಅಥವಾ ವಿಸ್ತರಣೆಗೂ ಸಿಎಂ ಹುದ್ದೆ ಬದಲಾವಣೆಗೂ ನೇರ ಸಂಬಂಧ ಇಲ್ಲ ಎನ್ನುತ್ತಿವೆ ಮೂಲಗಳು. ಹೀಗಾಗಿ ಸಿದ್ದರಾಮಯ್ಯ ದಾಖಲೆ ಅವಧಿಗೆ ಬಜೆಟ್ ಮಂಡನೆ ಮಾಡಿದ್ದು, ದಾಖಲೆ ಅವಧಿಯ ಸಿಎಂ ಆಗುವುದಕ್ಕೂ ಸಿದ್ಧತೆ ನಡೆಸಿದ್ದಾರೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:20.11.2025

## 6. ಸಾಲುಮರದ ತಿಮ್ಮಕ್ಕ ಹೆಸರಲ್ಲಿ ಐವರಿಗೆ ಪ್ರಶಸ್ತಿ: ಸಿಎಂ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯಲ್ಲಿ 1 ಕೋಟಿ ರೂ.ದತ್ತಿ ನಿಧಿ ಸ್ಥಾಪಿಸಿ ಠೇವಣಿ ಇಡುವ ಹಣದ ಬಡ್ಡಿಯಲ್ಲಿ ಪ್ರತಿ ವರ್ಷವೂ ಪರಿಸರ ಜಾಗೃತಿ ಕಾರ್ಯಕ್ರಮ ಆಯೋಜಿಸಿ ಪರಿಸರಕ್ಕಾಗಿ ದುಡಿದ ಐವರು ಮಹನೀಯರಿಗೆ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಅರಮನೆ ಮೈದಾನದಲ್ಲಿ 19ನೇ ನವೆಂಬರ್ 2025ರಂದು ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರ ಮನವಿಗೆ ಸ್ಪಂದಿಸಿದ ಸಿ.ಎಂ ಸಿದ್ದರಾಮಯ್ಯ, ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ 1 ಕೋಟಿ ರೂ. ದತ್ತಿ ನಿಧಿ ಸ್ಥಾಪಿಸಿ ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿ ವರ್ಷವೂ ಪರಿಸರಕ್ಕಾಗಿ ದುಡಿದ 5 ಮಂದಿ ಮಹನೀಯರಿಗೆ ಸಾಲುಮರದ ತಿಮ್ಮಕ್ಕ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು. ಎಂದು ಭರವಸೆ ನೀಡಿದರು. ಮಾಲಿನ್ಯ ರಹಿತ

ಪರಿಸರವನ್ನು ನಿರ್ಮಿಸುವುದು ಅತ್ಯಂತ ಅವಶ್ಯವಾಗಿದೆ. ನಾವು ಉಸಿರಾಡುವ ಗಾಳಿ, ನೀರು ಹಾಗೂ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅಗತ್ಯ, ಕೇಂದ್ರದ ವರದಿಯ ಪ್ರಕಾರ ದೇಶದ 131 ನಗರಗಳು ಮಾಲಿನ್ಯದಿಂದ ಕೂಡಿದ್ದು, ನಿಗದಿತ ಮಟ್ಟಕ್ಕಿಂತಲೂ ಹೆಚ್ಚಿದೆ. ಅದರಲ್ಲಿ ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ ಮತ್ತು ಕಲಬುರಗಿ ಜಿಲ್ಲೆಗಳು ಸೇರಿವೆ. ಇದು ಆತಂಕಕಾರಿ ವಿಷಯ. ಸಾಲುಮರದ ತಿಮ್ಮಕ್ಕ ಬಹಳಷ್ಟು ಮರಗಿಡಗಳನ್ನು ತಮ್ಮ ಮಕ್ಕಳಂತೆ ಬೆಳೆಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಪ್ರತಿ ಯೊಬ್ಬರೂ ಸಾಲಮರದ ತಿಮ್ಮಕ್ಕನವರಂತ ಆಗಬೇಕು ಎನ್ನುವ ಆಶಯ ನಮ್ಮದು ಎಂದು ಹೇಳಿದರು.

ಡಿ.ಸಿ.ಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ನಾವುಗಳು ಇರಲಿ, ಇಲ್ಲದಿರಲಿ, ನಮ್ಮ ಪರಿಸರ, ನೀರು, ಗಾಳಿ, ಬೆಳಕು ಶಾಶ್ವತವಾಗಿ ಇರುತ್ತವೆ. ನೀರು, ಗಾಳಿಗೆ ಬಣ್ಣ ಇಲ್ಲ, ನಾವು ಇವುಗಳನ್ನು ಕಾಪಾಡಿಕೊಂಡು ಹೋಗಬೇಕು, ಪ್ರಕೃತಿ ನಿಯಮ ಎಲ್ಲರಿಗೂ ಒಂದೇ, ಸೂರ್ಯ ಹುಟ್ಟುವುದು, ಮುಳುಗುವುದು, ಗಾಳಿ ಯಾವ ದಿಕ್ಕಿನಲ್ಲಿ ಬೀಸಬೇಕು ಎಲ್ಲವೂ ಪ್ರಕೃತಿ ನಿಯಮ ಎಂದರು.

ದೆಹಲಿಯ ಗಾಳಿ ಸೇವಿಸಿದರೆ ಒಂದು ದಿನಕ್ಕೆ 14 ಸಿಗರೇಟ್ ಸೇದುವುದಕ್ಕೆ ಸಮವಾಗುವಷ್ಟು ಮಾಲಿನ್ಯವಾಗಿದೆ ಎಂದು ತಿಳಿಸಿದರು. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಪರಿಸರ ಸಂರಕ್ಷಣೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹೊಣೆಯಾಗಿದ್ದು, ಎಲ್ಲ ಸಿಬ್ಬಂದಿ ಹೆಚ್ಚು ಪ್ರಾಮಾಣಿಕತೆಯಿಂದ ಯಾವುದೇ ಒತ್ತಡಕ್ಕೆ ಒಳಗಾಗದೆ ನಿಯಮಗಳನ್ನು ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ ಪರಿಸರ ಸಂರಕ್ಷಿಸಬೇಕು ಎಂದರು. ಇದೇ ವೇಳೆ ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಕೆಲಸ ಮಾಡಿದ್ದ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟ ಸಾಧಕರಿಗೆ 'ಇಂದಿರಾ ಪ್ರಿಯದರ್ಶಿ ಪರಿಸರ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು.

**ಆಧಾರ:**ಉದಯವಾಣಿ, ದಿನಾಂಕ:20.11.2025

## 7. ನಕಲಿ ಔಷಧ ಮಾರಿದ್ರೆ ಬೇಲ್ ನಿರಾಕರಿಸುವ ಮಸೂದೆ ಸಿದ್ಧ

ಔಷಧಗಳು ಮತ್ತು ಸೌಂದರ್ಯ ವರ್ಧಕಗಳು(ಕರ್ನಾಟಕ ತಿದ್ದುಪಡಿ) ವಿಧೇಯಕ–2025', 'ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ–2025' ಸೇರಿ ಐದು ವಿಧೇಯಕಗಳನ್ನು ಮುಂಬರುವ ಬೆಳಗಾವಿಯಲ್ಲಿ ಅಧಿವೇಶನದಲ್ಲಿ ಮಂಡಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ನಕಲಿ ಅಥವಾ ಕಲಬೆರಕೆ ಔಷಧ ಹಾಗೂ ಸೌಂದರ್ಯ ವರ್ಧಕಗಳ ಮಾರಾಟ ಜಾಮೀನು ರಹಿತ ಅಪರಾಧವೆಂದು ಪರಿಗಣಿಸುವ, ಜೀವಾವಧಿ ಶಿಕ್ಷೆಗೆ ಪರಿವರ್ತಿಸುವ ಅಂಶಗಳನ್ನು ತಿದ್ದುಪಡಿ ವಿಧೇಯಕ ಒಳಗೊಂಡಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಇದರ ಜತೆಗೆ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ(ಕ್ಷೇಮಾಭಿವೃದ್ಧಿ) ತಿದ್ದುಪಡಿ ವಿಧೇಯಕ 2025', 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳು ತಿದ್ದುಪಡಿ ವಿಧೇಯಕ–2025', ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ(2ನೇ ತಿದ್ದುಪಡಿ) ವಿಧೇಯಕ–2025ಅನ್ನು ಅಧಿವೇಶನದಲ್ಲಿ ಮಂಡಿಸಲು ತೀರ್ಮಾನಿಸಿದೆ ಎಂದು ಹೇಳಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:28.11.2025

## 8. ಹಣಕಾಸು, ಆಡಳಿತದಲ್ಲಿ ದಕ್ಷತೆ

ಆರ್ಥಿಕ ಸಂಪನ್ಮೂಲ ಕ್ರೋಢೀಕರಣ, ಬಳಕೆ ವಿಧಾನ, ಪರಿಣಾಮ, ಪ್ರಯೋಜನಗಳ ಮೇಲೆ ರಾಜ್ಯದ ಐದನೇ ಹಣಕಾಸು ಆಯೋಗ ಬೆಳಕು ಚೆಲ್ಲಿದೆ. ಆಡಳಿತದಲ್ಲಿ ದಕ್ಷತೆ, ಸ್ಥಳೀಯ ಸರ್ಕಾರಗಳಿಗೆ ಆದ್ಯತೆ ನೀಡಬೇಕು ಎಂದು ಅಂತಿಮ ವರದಿಯಲ್ಲಿ ಉಲ್ಲೇಖಿಸಿದೆ.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಆಯೋಗದ ಅಧ್ಯಕ್ಷ ಡಾ.ಸಿ.ನಾರಾಯಣಸ್ವಾಮಿ ಅಂತಿಮ ವರದಿ ಸಲ್ಲಿಸಿದ್ದು, ಆಯೋಗದ ಕಾಲಾವಧಿ 30ನೇ ನವೆಂಬರ್ 25ರಂದು ಮುಕ್ತಾಯವಾಗಿದೆ. ಸುಸ್ಥಿರ ಅಭಿವೃದ್ಧಿಗೆ ನಿಗದಿಪಡಿಸಿದ 30 ಗುರಿಗಳನ್ನು ಪ್ರತ್ಯೇಕವಾಗಿ ದಾಖಲಿಸಿದ್ದಾರೆ. ಅಂತಿಮ ವರದಿ ಹಾಗೂ ಶಿಫಾರಸುಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಕಾರ್ಯಪಡೆ ರಚಿಸಲು ಸರ್ಕಾರಕ್ಕೆ ಸಲಹೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಆರ್ಥಿಕ ಸಂಪನ್ಮೂಲ ಕ್ರೋಡೀಕರಣ, ಸಕಾಲಕ್ಕೆ ಬಿಡುಗಡೆ, ಬಳಕೆ ಹಾಗೂ ಸದ್ಬಳಕ್ಕೆ ಮೌಲ್ಯಮಾಪನ ನಡೆಸಬೇಕು. ಆಡಳಿತದಲ್ಲಿ ಕ್ರಿಯಾಶೀಲತೆ, ದಕ್ಷತೆ, ಉತ್ತರದಾಯಿತ್ವ ನಿಗದಿ, ಸರ್ಕಾರಿ ಸೇವೆಗಳ ಪರಿಣಾಮಕಾರಿ ವಿಲೇವಾರಿಗೆ ಆದ್ಯತೆಗೆ ಸೂಚಿಸಿದೆ. ನೈಸರ್ಗಿಕ ವಿಪತ್ತು ಅನುದಾನದಲ್ಲಿ ಒಂದಿಷ್ಟು ಪಾಲು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಿಂದ ತುರ್ತು ತಾತ್ಕಾಲಿಕ ಪರಿಹಾರ ಕೈಗೆತ್ತಿಕೊಳ್ಳಲು ಆಸರೆಯಾಗುತ್ತದೆ.

ನಗರ–ಪಟ್ಟಣ, ಗ್ರಾಮೀಣ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸುವುದು ಸರ್ಕಾರದ ಕರ್ತವ್ಯವಾಗಿದೆ. ವಿದ್ಯುತ್ ಬಿಲ್ ಪಾವತಿಗೆ ಸಾಲಕ್ಕೆ ಖಾತರಿ ನೀಡುವ ಸರ್ಕಾರ, ಅನಂತರ ಗ್ರಾ.ಪಂ.ಅಭಿವೃದ್ಧಿ ಅನುದಾನದಲ್ಲಿ ಕಡಿತ ಮಾಡುವುದು ಸರಿಯಲ್ಲ. ಗ್ರಾಮೀಣ ಪ್ರದೇಶದಲ್ಲಿ ನಿಷ್ಕ್ರಿಯ ಕೊಳವೆಬಾವಿಗಳು, ಸಾರ್ವಜನಿಕ ಸಂಪರ್ಕಗಳಿಗೆ ವಿದ್ಯುತ್ ಬಿಲ್ ಬರುತ್ತದೆ.

ಸಮಗ್ರ ಸಮೀಕ್ಷೆ ನಡೆಸಿ ನೈಜ ವಿದ್ಯುತ್ ಸಂಪರ್ಕ ಮತ್ತು ಬಳಕೆ ಆಧಾರದಲ್ಲಿ ಬಿಲ್‌ಗೆ ವ್ಯವಸ್ಥೆ ಮಾಡಬೇಕೆಂದು ಆಯೋಗ ಪ್ರಸ್ತಾಪಿಸಿದೆ ಎನ್ನಲಾಗಿದೆ. ಕೇಂದ್ರ 15ನೇ ಹಣಕಾಸು ಆಯೋಗವು ಆರೋಗ್ಯ ವಲಯದಡಿ ರಾಜ್ಯಕ್ಕೆ 2,929 ಕೋಟಿ ರೂ. ಅನುದಾನ ಹಂಚಿಕೆ ಮಾಡಿದೆ.

ಆದರೆ ಅದರಲ್ಲಿ ಅರ್ಧದಷ್ಟು ಅನುದಾನ ತಡವಾಗಿ ಬಿಡುಗಡೆ ಮಾಡಿದೆ. ಕಠಿಣವಾದ ಮಾರ್ಗಸೂಚಿ ಇತ್ಯಾದಿ ಕಾರಣಗಳಿಂದ ರಾಜ್ಯ ಸರ್ಕಾರ ಅರ್ಧ ಮೊತ್ತ ಬಳಕೆಗೆ ಮಾತ್ರ ಶಕ್ತವಾಗಿದೆ. ಉಳಿದ ಅನುದಾನ ವಿನಿಯೋಗಿಸಿ ಹಣ ಬಳಕೆ ಪ್ರಮಾಣಪತ್ರ ಕಳುಹಿಸಿದ ಮೇಲಷ್ಟೇ 15ನೇ ಹಣಕಾಸು ಅಯೋಗ ಬಾಕಿ ಅನುದಾನ ಬಿಡುಗಡೆ ಮಾಡಲಿದೆ.

**ಆಧಾರ:**ವಿಜಯವಾಣಿ, ದಿನಾಂಕ:01.12.2025

## 9. ರಾಜ್ಯದಲ್ಲಿ 'ಡಿಜಿಟಲ್ ಇ–ಸ್ಟ್ಯಾಂಪ್' ಜಾರಿ

ನೋಂದಣಿ ಮತ್ತು ನೋಂದಣಿಯೇತರ ಛಾಪಾ ಕಾಗದ ವಹಿವಾಟುಗಳಿಗೆ ಬಳಸುವ ಸ್ಟ್ಯಾಂಪ್ ಬದಲಿಗೆ 'ಡಿಜಿಟಲ್ ಇ–ಸ್ಟ್ಯಾಂಪ್' ವ್ಯವಸ್ಥೆಯನ್ನು ಕಂದಾಯ ಗೃಹ ಇಲಾಖೆ ಜಾರಿಗೆ ತಂದಿದೆ."

ಸುದ್ದಿಗೋಷ್ಠಿಯಲ್ಲಿ ದಿನಾಂಕ:01.12.2025ರಂದು ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, 'ಸ್ಟ್ಯಾಂಪ್ ವಂಚನೆ ಮತ್ತು ಭದ್ರತಾ ಲೋಪವನ್ನು ಸಂಪೂರ್ಣ ತೊಡೆದು ಹಾಕಲು ಈ ಹೊಸ ವ್ಯವಸ್ಥೆ ಪರಿಚಯಿಸಲಾಗಿದೆ. ಈ ವ್ಯವಸ್ಥೆಗೆ ಅಗತ್ಯವಾದ ನಿಯಮಗಳನ್ನು ಪ್ರಕಟಿಸಲಾಗಿದ್ದು, ಮುಂದಿನ ದಿನಗಳಲ್ಲಿ 'ಡಿಜಿಟಲ್ ಇ–ಸ್ಟ್ಯಾಂಪ್' ಕಡ್ಡಾಯಗೊಳಿಸಲಾಗುವುದು' ಎಂದರು.

'ನಾಗರಿಕರು ಮಧ್ಯವರ್ತಿಗಳ ನೆರವಿಲ್ಲದೆ, ಮನೆಯಲ್ಲಿಯೇ ಕುಳಿತು 'ಡಿಜಿಟಲ್ ಇ– ಸ್ಟ್ಯಾಂಪ್' ತಯಾರಿಸಿಕೊಳ್ಳಬಹುದು. ಇಂಟರ್‌ನೆಟ್ ಇದ್ದರೆ 24*7 ಜಗತ್ತಿನಲ್ಲಿ ಎಲ್ಲಿಯೇ ಕುಳಿತು ಈ ಸೇವೆಯನ್ನು ಪಡೆಯಬಹುದು. ಎಲ್ಲ ಸೇವೆಗಳು ಸಂಪೂರ್ಣ ಡಿಜಿಟಲ್ ಆಗಿರಲಿದೆ. ಸುರಕ್ಷಿತ ಮತ್ತು ವೇಗವಾಗಿ ಆನ್‌ಲೈನ್ ಪಾವತಿ ಮಾಡಲು ಕೂಡಾ ಅವಕಾಶವಿದೆ' ಎಂದರು.

'ಹಿಂದೆ ಛಾಪಾ ಕಾಗದಗಳನ್ನು ಮುದ್ರಿಸಲಾಗುತ್ತಿತ್ತು. ನಕಲಿ ಹಾಗೂ ಛಾಪಾ ಕಾಗದಗಳ ಮರುಬಳಕೆಯ ವಂಚನೆ ತೆಲಗಿ ಹಗರಣದಿಂದ ಬಹಿರಂಗವಾಗಿತ್ತು. ಅದನ್ನು ತಡೆಯಲು ಭೌತಿಕ ಸ್ಟಾಂಪ್ ಕಾಗದಗಳ ಬಳಕೆ ನಿಲ್ಲಿಸಿ, 'ಇ–ಸ್ಟ್ಯಾಂಪ್' ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು' ಎಂದು ಅವರು ವಿವರಿಸಿದರು.

ಹೋಲ್ಡಿಂಗ್ ಕಾರ್ಪೊರೇಷನ್ ಲಿಮಿಟೆಡ್(ಎಸ್‌ಎಚ್‌ಸಿಐಎಲ್) ಸಹಯೋಗದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 'ಇ–ಸ್ಟ್ಯಾಂಪ್' ಕಾಗದವನ್ನು ಮುದ್ರಿಸುತ್ತಿದೆ. ಆದರೆ, ಝುರಾಕ್ಸ್ ಯಂತ್ರಗಳ ಮೂಲಕ ಇ–ಸ್ಟ್ಯಾಂಪ್ ಪ್ರಮಾಣಪತ್ರಗಳನ್ನು ಅಥವಾ ಅವುಗಳಂತೆಯೇ ಕಾಣುವ ಪ್ರತಿಗಳನ್ನು ಸೃಷ್ಟಿಸಲು ಸಾಧ್ಯವಾಗಿತ್ತು. ಇದರಿಂದ ನಕಲಿ ಮೂಲ ಯಾವುದೆಂದು ಮಾಡುವುದೇ ಸವಾಲಾಗಿದೆ. ಉದ್ದೇಶಕ್ಕೆ ಖರೀದಿಸಿದ ಸ್ಟ್ಯಾಂಪ್ ಕಾಗದವನ್ನು ಬೇರೆ ರೀತಿಯ ದಸ್ತಾವೇಜಿಗೆ ಬಳಸುವ ಪ್ರಸಂಗಗಳೂ ನಡೆದಿವೆ.

ನಕಲಿ, ನಕಲು ಪ್ರತಿ ಹಾಗೂ ತಪ್ಪು ವರ್ಗೀಕರಣದಿಂದ ಸರ್ಕಾರಕ್ಕೆ ಸೇರುವ ಸ್ಟ್ಯಾಂಪ್ ಶುಲ್ಕ ತಪ್ಪಿಸಿದ ಹಲವು ಘಟನೆಗಳೂ ನಡೆದಿವೆ' ಎಂದು ಅವರು ತಿಳಿಸಿದರು. ಡಿಜಿಟಲ್ ಇ–ಸ್ಟ್ಯಾಂಪ್ ವ್ಯವಸ್ಥೆ ಎಲ್ಲ ರೀತಿಯಲ್ಲೂ ಸುರಕ್ಷಿತವಾಗಿ ಇರಲಿದೆ. ಹೊಸ ವ್ಯವಸ್ಥೆ ಜಾರಿಯಿಂದ ಇ–ಸ್ಟ್ಯಾಂಪ್ ವಿತರಣೆಗಾಗಿ ಎಸ್‌ಎಚ್‌ಸಿಐಎಲ್‌ಗೆ ಸರ್ಕಾರ ನೀಡುವ ಕಮಿಷನ್ ಮೊತ್ತ ಉಳಿತಾಯ ಆಗಲಿದೆ' ಎಂದೂ ತಿಳಿಸಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:02.12.2025

## 10. 'ರಾಜಭವನ' ಅಲ್ಲ' ಲೋಕಭವನ'

ಕೇಂದ್ರ ಗೃಹ ಸಚಿವಾಲಯದ ತೀರ್ಮಾನದಂತೆ ದೇಶದಾದ್ಯಂತ ಇರುವ 'ರಾಜ /ಭವನ'ಗಳ ಹೆಸರನ್ನು 'ಲೋಕ ಭವನ' ಎಂದು ಮರುನಾಮಕರಣ ಮಾಡಲಾಗಿದ್ದು, 'ರಾಜ ಭವನ, ಕರ್ನಾಟಕ' ಎನ್ನುವುದನ್ನು 'ಲೋಕ। ಭವನ, ಕರ್ನಾಟಕ' ಎಂದು । ಹೆಸರಿಸಲಾಗಿದೆ.

ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ದಿನಾಂಕ: 03.12.2025ರಂದು ಪತ್ರ ಬರೆದಿರುವ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್, 'ಹೆಸರು ಬದಲಾವಣೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅನುಮೋದನೆ ನೀಡಿದ್ದಾರೆ. ಈ ಆದೇಶವು ತಕ್ಷಣದಿಂದ ಜಾರಿಗೆ ಬರಲಿದೆ ಎಂದು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಸರ್ಕಾರದ ಎಲ್ಲ ಇಲಾಖೆಗಳು, ಸರ್ಕಾರಿ ಆದೇಶಗಳು, ಅಧಿಕೃತ ಪತ್ರ ವ್ಯವಹಾರಗಳು, ವೆಬ್‌ಸೈಟ್ ಹಾಗೂ ಫಲಕಗಳಲ್ಲಿ 'ರಾಜ ಭವನ ಕರ್ನಾಟಕ' ಬದಲು 'ಲೋಕ ಭವನ ಕರ್ನಾಟಕ' ಎಂದು ಬಳಸಬೇಕೆಂದು ಪತ್ರದಲ್ಲಿ ಅವರು ತಿಳಿಸಿದ್ದಾರೆ.

**ಆಧಾರ:**ಪ್ರಜಾವಾಣಿ, ದಿನಾಂಕ:04.12.2025

## 11. ಇ–ಖಾತಾದಲ್ಲಿ ಯುಪಿಒಆರ್ ಮಾಹಿತಿ

ಜಿಬಿಎ ವ್ಯಾಪ್ತಿಯಲ್ಲಿನ ಆಸ್ತಿಗಳ ಇ–ಖಾತಾದಲ್ಲಿ ನಗರ ಆಸ್ತಿ ಮಾಲೀಕತ್ವದ ದಾಖಲೆಗಳನ್ನು (ಯುಪಿಒಆರ್) ಅಳವಡಿಸುವ 'ಇಂಟಿಗ್ರೇಟೆಡ್ ವ್ಯವಸ್ಥೆ'ಯನ್ನು ಜಾರಿ ಇ–ಖಾತಾ ಮಾಡಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ನಗರ ಸಮೀಕ್ಷೆಯಲ್ಲಿ ಯುಪಿಒಆರ್‌ನಲ್ಲಿ ಆಸ್ತಿ ನಕ್ಷೆಗಳು, ಡ್ರೋನ್ ಮೂಲಕ ಪಡೆದುಕೊಂಡ ಓವರ್–ವ್ಯೂ ಚಿತ್ರಗಳನ್ನು ಜಿಬಿಎ ನೀಡುತ್ತಿರುವ ಇ–ಖಾತಾ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗಿದೆ. ನಗರದಲ್ಲಿ ಸುಮಾರು ಎರಡು ವರ್ಷಗಳಿಂದ ಯುಪಿಒಆರ್ ಯೋಜನೆಯಡಿ ನಿರ್ವಹಿಸಲಾಗಿರುವ ಕಾರ್ಯವನ್ನು ಇ–ಖಾತಾ ವ್ಯವಸ್ಥೆಗೆ ಸಂಯೋಜಿಸಲು ಕಂದಾಯ ಇಲಾಖೆ ಅಧಿಕಾರಿಗಳು ಮಾಡಿರುವ ಕಾರ್ಯ ಶ್ಲಾಘನೀಯ ಎಂದರು.

ಇ–ಖಾತಾದಲ್ಲಿರುವ ನಿಖರ, ಜಿಪಿಎಸ್ ಮಾಹಿತಿ, ಯುಪಿಒಆರ್ ನಕ್ಷೆ ಮತ್ತು ಚಿತ್ರಗಳನ್ನು ಜೋಡಿಸುವುದು ಅತ್ಯಂತ ಪ್ರಮುಖವಾಗಿದೆ. ಈಗಾಗಲೇ ಸುಮಾರು ಒಂದು ಲಕ್ಷ ಸಂಯೋಜಿತ ಇ–ಖಾತಾಗಳನ್ನು ನೀಡಲಾಗಿದ್ದು, ಪ್ರತಿದಿನವೂ ಈ ಸಂಖ್ಯೆ ಮತ್ತಷ್ಟು ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದು ಹೇಳಿದರು. ಜಿಬಿಎ ವ್ಯಾಪ್ತಿಯಲ್ಲಿ ಸುಮಾರು 9 ಲಕ್ಷ ಅಂತಿಮ ಇ–ಖಾತಾ ನೀಡಲಾಗಿದ್ದು,

ಸರಾಸರಿ 2,500 ಪ್ರತಿದಿನ ಇ–ಖಾತಾಗಳನ್ನು ನೀಡಲಾಗುತ್ತಿದೆ. ಕಾಯುವ ಅವಧಿ ಸರಾಸರಿ ಎರಡು ದಿನ ಎಂದು ಮಾಹಿತಿ ನೀಡಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:04.12.2025

## 12. Karnataka readies legislation to provide menstrual leave

In the first-ever such legislation proposed in the country, the Karnataka government has readied the Karnataka Women Well Being Leave Bill, 2025, which provides menstrual leave not only for working women in the formal sector but also for female students in educa-tional institutions, trans-genders, ASHAs, angan-wadi, and midday meal personnel, and those working in mines.

An earlier Government Or der had covered the priv ate sector, and last week the government brought its workers under its am-bit. Instead of 18 as a mini-mum age criteria pre-scribed earlier, the Bill does not propose any low-er minimum age limit, but the upper age limit has been capped at 52 or till menopause.

While the working wo men will get one day leave per month, the menstrual leave for students will be upto two days in a month and consequently 2% relaxation in the attendance for menstrual issues in educational institutions.

If the employee does not chose to avail of the leave, she will be entitled for work from home if the facility is available. Not man-dating a doctor's certifi cate, the leave can be availed through a request on e-mail.

The proposed Bill is likely to be cleared in the Cabinet on Thursday, fol-lowing which it will be in-troduced in the legisla ture, sources said. This will be the most compre hensive legislation pro posed so far in the country. When asked if the Bill was in response to the on-going case in the Karnata-ka High Court, sources said that the government was working on the Bill for some time now.

Among other things, the Bill proposes setting up Karnataka Women Well Being Authority, which will be headed by the chairperson of the Karna-taka State Commission for Women to redress grievances arising out of complaints.

A penalty of upto Rs.5,000 for each contravention of the provision has been proposed for those who deny menstrual leave, ill treat or discriminate against menstruating women.

**Courtesy:**The Hindu**,** Dated:10.12.2025

## 13. **1.8.ಲಕ್ಷ ಮಂದಿ ತೆರಿಗೆದಾರರು 'ಗೃಹಲಕ್ಷ್ಮೀ' ಫಲಾನುಭವಿಗಳು!**

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ 'ಗೃಹಲಕ್ಷ್ಮೀ ಯೋಜನೆ' ಅಡಿಯಲ್ಲಿ ಲಾಭ ಪಡೆಯುತ್ತಿರುವ ಫಲಾನುಭವಿಗಳ ಪೈಕಿ 1.80 ಲಕ್ಷ ಮಂದಿ ಆದಾಯ ತೆರಿಗೆ–ಜಿಎಸ್‌ಟಿ ಪಾವತಿದಾರರಾಗಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ವಿಧಾನ ಪರಿಷತ್‌ನಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಿರುವ ಇಲಾಖೆ ಅಧಿಕಾರಿಗಳು, ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು ತಲಾ 2 ಸಾವಿರ ರೂ.ನಂತೆ 2023 ರ ಜೂ.

6ರಿಂದ ಗೃಹಲಕ್ಷ್ಮೀ ಯೋಜನೆ ಅಡಿ ಸಹಾಯಧನ ಪಾವತಿಸಲಾಗುತ್ತಿದೆ. ಅಕ್ಟೋಬರ್ ಅಂತ್ಯಕ್ಕೆ 1.28 ಕೋಟಿ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ ಅರ್ಹ 1.24 ಕೋಟಿ ರು. ಮಹಿಳೆಯರಿಗೆ ಆಗಸ್ಟ್ ಅಂತ್ಯದವರೆಗೆ 22 ಕಂತಿನಲ್ಲಿ ಹಣ ಪಾವತಿಸಲಾಗಿದೆ. ಒಟ್ಟಾರೆ 52,416 ಕೋಟಿ ರು. ಅನುದಾನ ಬಿಡುಗಡೆ ಮಾಡಲಾಗಿದೆ ಎಂದಿದ್ದಾರೆ.

ಸರ್ಕಾರದ ಮಾನದಂಡದಂತೆ ಕುಟುಂಬದ ಯಜಮಾನಿ ಅಥವಾ ಅವರ ಪತಿ ಐಟಿ ಅಥವಾ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುತ್ತಿದ್ದರೆ ಅಂಥವರು ಯೋಜನೆಯ ಫಲಾನುಭವಿಗಳಾಗಲು ಅರ್ಹರಲ್ಲ ಎಂದು ತಿಳಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:16.12.2025

## 14. **6–6–5 ಒಳಮೀಸಲಿಗೆ ಕಾಯ್ದೆ: ಸಂಪುಟ ಅಸ್ತು**

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವ ಐತಿಹಾಸಿಕ ತೀರ್ಮಾನವನ್ನು ಕೈಗೊಂಡಿರುವ ರಾಜ್ಯ ಸರಕಾರ, ಇದೀಗ ಒಳ ಮೀಸಲಾತಿ ಹಂಚಿಕೆಗೆ ಕಾನೂನಾತ್ಮಕ ರಕ್ಷೆ ತರಲು ಮುಂದಾಗಿದೆ.

ದಿನಾಂಕ:11.12.2025ರಂದು ಸುವರ್ಣಸೌಧದಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಆಗಸ್ಟ್ 25ರಂದು ರಾಜ್ಯ ಸರಕಾರ ಹೊರಡಿಸಿದ್ದ ಅಧಿಕೃತ ಆದೇಶದ ಸಂಬಂಧ 'ಕರ್ನಾಟಕ ಪರಿಶಿಷ್ಟ ಜಾತಿಗಳು(ಉಪ ವರ್ಗೀಕರಣ) ವಿಧೇಯಕ'ಕ್ಕೆ ಅನುಮೋದನೆ ನೀಡಿ, ಉಭಯ ಸದನಗಳಲ್ಲಿ ಮಂಡಿಸಲು ತೀರ್ಮಾನಿಸಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಎಡಗೈಗೆ 6%, ಬಲಗೈಗೆ 6% ಹಾಗೂ ಇತರರಿಗೆ 5% ಮೀಸಲು ನೀಡಲಾಗಿದೆ. ರಾಜ್ಯದ 101 ಪರಿಶಿಷ್ಟ ಜಾತಿಗಳನ್ನು 'ಎ', 'ಬಿ', 'ಸಿ' ಎಂದು ಮೂರು ಪ್ರವರ್ಗಗಳಾಗಿ ವಿಂಗಡಿಸಲಾಗಿದೆ. ಅವರಿಗೆ ಈ ಮೀಸಲಾತಿ ಹಂಚಲಾಗಿದೆ.

ಇದಕ್ಕೆ ಕಾನೂನಾತ್ಮಕ ಭದ್ರತೆ ತರಲು ವಿಧೇಯಕ ಅನುಮೋದಿಸಲಾಗಿದೆ. ದಿನಾಂಕ::15.12.2025ರಂದು ವಿಧಾನಸಭೆಯಲ್ಲಿ ವಿಧೇಯಕ ಮಂಡಿಸುವ ನಿರೀಕ್ಷೆ ಇದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು, ಪರಿಶಿಷ್ಟ ಜಾತಿಗಳನ್ನು ಎ, ಬಿ, ಸಿ. ಡಿ, ಇ ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ ಶಿಫಾರಸ್ಸು ಮಾಡಿತ್ತು. ಸುಪ್ರೀಂ ಕೋರ್ಟ್ ತೀರ್ಪಿನಲ್ಲಿದ್ದ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲವು ಮಾರ್ಪಾಡುಗಳೊಂದಿಗೆ ಈ ಶಿಫಾರಸ್ಸುಗಳನ್ನು ಅಂಗೀಕರಿಸಲಾಗಿದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲ ಜಾತಿಗಳಿಗೆ ಶಿಕ್ಷಣ, ಉದ್ಯೋಗ ಮತ್ತು ಇತರೆ ವಿಷಯಗಳಲ್ಲಿ ಅವಕಾಶಗಳನ್ನು ಒದಗಿಸುವಾಗ ಸಮಾನತೆ ಮತ್ತು ನ್ಯಾಯ ಸಮ್ಮತಿಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ ಎಂದು ಸರಕಾರ ಸಮರ್ಥಿಸಿಕೊಂಡಿತ್ತು.

ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆ ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿ, ಕಾಲಕಾಲಕ್ಕೆ ಈ ಜಾತಿಗಳನ್ನು ಅಧ್ಯಯನ ಮಾಡಿ ವರದಿ ನೀಡಲು ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ ರಚಿಸಲು ಕೂಡ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**ಮೂರು ಪ್ರವರ್ಗಗಳಿಗೆ ಒಳಮೀಸಲು ಹಂಚಿಕೆ**

ನ್ಯಾ.ದಾಸ್ ಆಯೋಗವು ಎಡಗೈ ಸಂಬಂಧಿತ ಜಾತಿಗಳೆಂದು ಗುರುತಿಸಿದ ಸಮುದಾಯಗಳಿಗೆ ಶೇ.6ರಷ್ಟು ಮೀಸಲಾತಿಗೆ ಶಿಫಾರಸ್ಸು ಮಾಡಿತ್ತು. ಪರಾಯ, ಮೊಗೇರ ಮುಂತಾದ ಬಲಗೈ ಸಂಬಂಧಿತ ಜಾತಿಗಳನ್ನು ಎಡಗೈ ಸಂಬಂಧಿತ ಜಾತಿಗಳ ಜೊತೆ ಆಯೋಗವು ಸೇರಿಸಿದೆ. ಈ ಜಾತಿಗಳನ್ನು ಬಲಗೈ ಸಂಬಂಧಿತ ಜಾತಿಗಳ ಜೊತೆ ಸೇರಿಸಿ ಆ ಸಮೂಹಕ್ಕೆ ಶೇ.6ರಷ್ಟು ಮೀಸಲಾತಿ

ಕಲ್ಪಿಸಲಾಗಿದೆ. ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಗುಂಪುಗಳಲ್ಲಿರುವ ಒಟ್ಟು 4,74,954 ಜನಸಂಖ್ಯೆಯನ್ನು ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಜಾತಿಗಳ ಜೊತೆ ಸಮಾನವಾಗಿ ಹಂಚಿಕೆ ಮಾಡಲಾಗಿದೆ. ಆಯೋಗವು ಸ್ಪೃಶ್ಯ ಜಾತಿಗಳ(ಕೊರಮ, ಕೊರಚ, ಭೋವಿ, ಲಂಬಾಣಿ) ಗುಂಪಿಗೆ ಶೇ.4 ಮತ್ತು 59 ಜಾತಿಗಳಿರುವ ಒಟ್ಟು 5,22,099 ಜನಸಂಖ್ಯೆಯನ್ನು ಪ್ರವರ್ಗ 'ಎ' ಎಂದು ತೀರ್ಮಾನಿಸಿ ಶೇ.1ರಷ್ಟು ಮೀಸಲಾತಿ ನೀಡುವಂತೆ ಶಿಫಾರಸ್ಸು ಮಾಡಿತ್ತು. ಕೆಲವು ತಾಂತ್ರಿಕ ಕಾರಣಗಳಿಗೆ ಎರಡೂ ಗುಂಪುಗಳನ್ನು ಒಟ್ಟಿಗೆ ಸೇರಿಸಿ ಶೇ.5ರಷ್ಟು ಮೀಸಲಾತಿ ನಿಗದಿ ಮಾಡಲಾಗಿದೆ. ಆ ಮೂಲಕ ಆಯೋಗದ ಶಿಫಾರಸ್ಸು 5ರ ಬದಲು 3 ವರ್ಗಗಳೆಂದು ಮಾರ್ಪಾಟು ಮಾಡಲಾಗಿದೆ.

**ಶೇ.56ರಷ್ಟು ಮೀಸಲಾತಿಗೆ ಸಂಪುಟ ಬದ್ಧತೆ**

ರಾಜ್ಯದಲ್ಲಿ ಸರಕಾರಿ ನೇಮಕಾತಿಗಳು ಮೀಸಲಾತಿ ಸಂಬಂಧ ನೆನೆಗುದಿಗೆ ಬಿದ್ದಿರುವ ಹಿನ್ನೆಲೆಯಲ್ಲಿ ಒಳಮೀಸಲಾತಿ ಕಾಯ್ದೆ ಜಾರಿಗೊಳಿಸುವುದಲ್ಲದೇ ಶೇ.50ರ ಮಿತಿಯನ್ನು ಶೇ.56ರ ಮಿತಿಗೆ ಹೆಚ್ಚಿಸಿಕೊಳ್ಳಲು ಅಗತ್ಯ ಕಾನೂನು ಹೋರಾಟ ನಡೆಸಲು ಸಂಪುಟ ತನ್ನ ಬದ್ಧತೆ ಪ್ರಕಟಿಸಿದೆ ಎಂದು ತಿಳಿದುಬಂದಿದೆ. ಹೈಕೋರ್ಟಿನ ಇತ್ತೀಚಿನ ಆದೇಶದಿಂದ ಆಗಿರುವ ಪರಿಣಾಮ ಕುರಿತಂತೆ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತೆನ್ನಲಾಗಿದೆ. ಷರತ್ತುಬದ್ಧ ನೇಮಕಾತಿಗೆ ಅವಕಾಶ ಇರುವುದರಿಂದ ಶೇ.56ರ ಮೀಸಲಾತಿ ಪ್ರಮಾಣವನ್ನೇ ಅನುಷ್ಠಾನಗೊಳಿಸಲು ಅಗತ್ಯ ಕಾನೂನು ಕ್ರಮಕೈಗೊಳ್ಳಲು ಸಂಪುಟ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

**ಆಧಾರ:** ಸಂಯುಕ್ತ ಕರ್ನಾಟಕ,ದಿನಾಂಕ:12.12.2025

## 15. ತಲಾ ಆದಾಯದಲ್ಲಿ ರಾಜ್ಯವೇ ಪ್ರಥಮ: ಸಿಎಂ

ರಾಜ್ಯದ ಸರಾಸರಿ ವಾರ್ಷಿಕ ತಲಾ ಆದಾಯ 3.39 ಲಕ್ಷ ರೂಪಾಯಿಗಳಾಗಿದ್ದು, ತಲಾ ಆದಾಯದಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ 19ನೇ ಡಿಸೆಂಬರ್ 2025ರಂದು ವಿಧಾನಸಭೆಗೆ ತಿಳಿಸಿದರು.

ತಲಾ ಆದಾಯದಲ್ಲಿ ರಾಜ್ಯ ಒಂದನೇ ಸ್ಥಾನದಲ್ಲಿದ್ದರೂ, ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ಹತ್ತು ಜಿಲ್ಲೆಗಳ ತಲಾ ಆದಾಯ 2 ಲಕ್ಷಕ್ಕಿಂತ ಕಡಿಮೆ ಇರುವುದು ಬೇಸರದ ಸಂಗತಿ ಎಂದರು. ಇದರಲ್ಲಿ ಕಲಬುರ್ಗಿ, ಬೆಳಗಾವಿ, ಗದಗ, ಹಾವೇರಿ, ಬೀದರ್, ಕೊಪ್ಪಳ, ಯಾದಗಿರಿ, ವಿಜಯಪುರ, ರಾಯಚೂರು, ವಿಜಯನಗರ ಇದರಲ್ಲಿ ಸೇರಿವೆ ಎಂದರು.

ಮುಖ್ಯಮಂತ್ರಿಗಳು ಕೊಟ್ಟ ವಿವರದ ಪ್ರಕಾರ, ಕಿತ್ತೂರು ಪ್ರಾಂತ್ಯದ ಬಾಗಲಕೋಟೆ ಮಾತ್ರ ತಲಾ ಆದಾಯದಲ್ಲಿ ಈ ಭಾಗದ ಹದಿನಾಲ್ಕು ಜಿಲ್ಲೆಗಳ ಪೈಕಿ ಮೊದಲ ಸ್ಥಾನದಲ್ಲಿದೆ (2.68 ಲಕ್ಷ). ಆದರೆ, ಎರಡೂ ಪ್ರಾಂತ್ಯಗಳ ಒಂದೇ ಒಂದು ಜಿಲ್ಲೆಯೂ ರಾಜ್ಯದ ಸರಾಸರಿ ತಲಾ ಆದಾಯಕ್ಕೆ ಸಮನಾಗಿ ನಿಲ್ಲುವುದಿಲ್ಲ. ಕಲ್ಯಾಣ ಕರ್ನಾಟಕದ ಕೇಂದ್ರ ಸ್ಥಾನವಾಗಿರುವ ಹಾಗೂ 371ಜೆ ವಿಶೇಷ ಸ್ಥಾನಮಾನ ಪಡೆದು ಹತ್ತು ವರ್ಷಗಳಾಗಿರುವ ಕಲಬುರ್ಗಿ ಇಡೀ ಉತ್ತರ ಭಾಗದಲ್ಲಿ ಮಾತ್ರವಲ್ಲ, ರಾಜ್ಯದಲ್ಲೇ ಕೊನೆಯ ಸ್ಥಾನದಲ್ಲಿದೆ (1.43 ಲಕ್ಷ), ಮೈಸೂರು ಕರ್ನಾಟಕ ಹಾಗೂ ಕರಾವಳಿ ಜಿಲ್ಲೆಗಳ ತಲಾ ಆದಾಯದಿಂದಾಗಿ ದೇಶದಲ್ಲಿ ನಂಬರ್ ಒನ್ ಇದ್ದಾಗ್ಯೂ, ತುಂಗಾ ನದಿಯ ಈ ದಡದ ಕರ್ನಾಟಕ ರಾಜ್ಯಕ್ಕೆ ತಲಾ ಆದಾಯದ ವಿಷಯದಲ್ಲಿ ಮಹತ್ವದ ಕೊಡುಗೆ ಕೊಟ್ಟಿಲ್ಲ. ಅಷ್ಟೇ ಅಲ್ಲ ದಕ್ಷಿಣ ಜಿಲ್ಲೆಗಳಿಗೂ ಉತ್ತರ ಭಾಗದ ಆದಾಯಕ್ಕೂ ಅಜಗಜಾಂತರ ವ್ಯತ್ಯಾಸ ಕಂಡು ಬರುತ್ತದೆ. ಇದು ಪ್ರಾದೇಶಿಕ ಅಸಮತೋಲನಕ್ಕೆ ಹಿಡಿದ ಕನ್ನಡಿ ಎಂಬುದು ಮುಖ್ಯಮಂತ್ರಿಗಳ ಮಾತಿನಿಂದ ವಿಧಿತವಾಯಿತು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:20.12.2025

# ಭಾಗ–6

# ನ್ಯಾಯಾಲಯ ಸುದ್ದಿಗಳು

## 1. ತೆಲಂಗಾಣ ಮೀಸಲಾತಿ ಹೆಚ್ಚಳಕ್ಕೆ ಸುಪ್ರೀಂ ಬ್ರೇಕ್

ಹಿಂದುಳಿದ ವರ್ಗಗಳ ಮೀಸಲಾತಿ ಹೆಚ್ಚಿಸುವ ಸಂಬಂಧ ತೆಲಂಗಾಣ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ವಿರುದ್ಧ ತೆಲಂಗಾಣ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ 16ನೇ ಅಕ್ಟೋಬರ್ 2025ರಂದು ವಜಾಗೊಳಿಸಿದೆ. ಅಲ್ಲದೇ, ಶೇ.50 ಮೀಸಲಾತಿ ಮಿತಿಯನ್ನು ಮೀರಲು ಹಲವಾರು ತೀರ್ಪುಗಳು ಅವಕಾಶ ನೀಡುವುದಿಲ್ಲ ಎನ್ನುವುದನ್ನೂ ಸುಪ್ರೀಂಕೋರ್ಟ್ ಗಮನಿಸಿದೆ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿಕ್ರಮ್‌ನಾಥ್ ಮತ್ತು ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ಪೀಠ ಈ ಅರ್ಜಿಯನ್ನು ವಜಾಗೊಳಿಸಿದೆ. 1992ರ ಇಂದ್ರಾ ಸಾಹ್ನಿ ತೀರ್ಪಿನಲ್ಲಿ ಉನ್ನತ ನ್ಯಾಯಾಲಯವು ನಿಗದಿಪಡಿಸಿದ 50 ಪ್ರತಿಶತ ಮಿತಿಯನ್ನು ಮೀರಿದ ವಿಸ್ತೃತ ಮೀಸಲಾತಿ ಸಂಬಂಧ ಅಕ್ಟೋಬರ್ 9ರಂದು ತೆಲಂಗಾಣ ಹೈಕೋರ್ಟ್ ಈ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

'ಎಲ್ಲ ಪಕ್ಷಗಳ ಸರ್ವಾನುಮತದ ನಿರ್ಣಯವು ಈ ನೀತಿಯನ್ನು ಬೆಂಬಲಿಸುತ್ತದೆ. ಮನವಿಗಳಿಲ್ಲದೆ ಅದನ್ನು ಹೇಗೆ ತಡೆಹಿಡಿಯಬಹುದು? ತಡೆಹಿಡಿಯಲು ಯಾವುದೇ ಕಾರಣಗಳನ್ನು ನೀಡಲಾಗಿಲ್ಲ' ಎಂದು ಸಿಎಂ ರೇವಂತ್ ರೆಡ್ಡಿ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು.

**ಆಧಾರ:** ವಿಜಯವಾಣಿ, ದಿನಾಂಕ:17.10.2025

## 2. ಶಿಕ್ಷಕರಿಗೆ ಸುಪ್ರೀಂ ರಿಲೀಫ್

ರಾಜ್ಯದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ನೇಮಕಾತಿ ಮುಂದುವರಿಸುವಂತೆ ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಆದೇಶವನ್ನು ಎತ್ತಿ ಹಿಡಿದಿದೆ. ಇದರೊಂದಿಗೆ ದೀಪಾವಳಿಯ ಹೊಸ್ತಿಲಲ್ಲೇ ಉದ್ಯೋಗ ಆಕಾಂಕ್ಷಿಗಳ ಪಾಲಿಗೆ ಶುಭಸುದ್ದಿ ದೊರೆತಂತಾಗಿದೆ.

ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾ.ಜೆ.ಕೆ. ಮಹೇಶ್ವರಿ ಮತ್ತು ನ್ಯಾ. ವಿಜಯ್ ಬಿಷ್ಣೋಯ್ ಅವರಿದ್ದ ಪೀಠವು "ನೇಮಕಾತಿ ಪ್ರಕ್ರಿಯೆಯಿಂದ ಉಂಟಾಗುವ ಸೇವಾ ಸಂಬಂಧಿತ ದೂರುಗಳನ್ನು ಪರಿಹರಿಸಲು ಕರ್ನಾಟಕ ಆಡಳಿತ ನ್ಯಾಯಮಂಡಳಿ(ಕೆಎಟಿ) ಸೂಕ್ತ ವೇದಿಕೆ," ಎಂದು ಹೇಳಿದೆ.

"ಏಕಸದಸ್ಯ ಪೀಠ ನೀಡಿದ್ದ ತೀರ್ಪನ್ನು ವಿಭಾಗೀಯ ಪೀಠವು ರದ್ದುಗೊಳಿಸಿರುವುದು ಸರಿಯಾಗಿಯೇ ಇದೆ. ಪ್ರಕರಣವನ್ನು ನ್ಯಾಯಮಂಡಳಿಗೆ ವರ್ಗಾಯಿಸುವುದರಲ್ಲಿ ಯಾವುದೇ ಲೋಪ ಎಸಗಿಲ್ಲ ಹೈಕೋರ್ಟ್ ಮುಂದೆ ಸಲ್ಲಿಸಲಾದ ಅರ್ಜಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ. ಎಂಬ ವಿಭಾಗೀಯ ಪೀಠದ ತೀರ್ಮಾನ ಸರಿಯಾಗಿಯೇ ಇದೆ," ಎಂದು ತೀರ್ಪು ಬರೆದ ನ್ಯಾ.ವಿಜಯ ಬಿಷ್ಣೋಯ್ ಅಭಿಪ್ರಾಯಪಟ್ಟಿದ್ದಾರೆ.

'ಸೇವಾ ನ್ಯಾಯಮಂಡಳಿಗಳ ವ್ಯಾಪ್ತಿಗೆ ಸಂಬಂಧಿಸಿದ ರಿಟ್ ಅರ್ಜಿಗಳನ್ನು ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್‌ಗಳು ಸ್ವೀಕರಿಸಬಾರದು,' ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದೆ. ನ್ಯಾಯ ಮಂಡಳಿಯ ಅಂತಿಮ ತೀರ್ಪಿಗೆ ಅನುಗುಣವಾಗಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಪೀಠ ನಿರ್ದೇಶನ ನೀಡಿದೆ.

"ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳು ತಮ್ಮ ತಕರಾರನ್ನು ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು," ಎಂದು ವಿಭಾಗೀಯ ಪೀಠ 2023ರ ಅಕ್ಟೋಬರ್ 13ರಂದು ತನ್ನ ತೀರ್ಪಿನಲ್ಲಿ ಸೂಚಿಸಿತ್ತು.

35 ಶೈಕ್ಷಣಿಕ ಜಿಲ್ಲೆಗಳಲ್ಲಿ 6–8ನೇ ತರಗತಿವರೆಗೆ 13,352 ನೇಮಕಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆ 2022 ಮಾರ್ಚ್ 21ರಂದು ಅಧಿಸೂಚನೆ ಹೊರಡಿಸಿತ್ತು. 2022ರ ಮೇ ತಿಂಗಳಲ್ಲಿ ನಡೆದ ಲಿಖಿತ ಪರೀಕ್ಷೆಯ ಬಳಿಕ ನವೆಂಬರ್ 18ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣಪತ್ರ ಪರಿಗಣಿಸಲಾಗಿತ್ತು. ವಿವಾಹಿತ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎಂಬ ಬಗ್ಗೆ ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಅರ್ಹತೆ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅವಕಾಶ ಪಡೆಯದವರು ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠವು, ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣ ಪತ್ರವನ್ನೂ ಪರಿಗಣಿಸಬೇಕು ಎಂದು ಆದೇಶಿಸಿ ತಾತ್ಕಾಲಿಕ ಆಯ್ಕೆಪಟ್ಟಿ ರದ್ದುಗೊಳಿಸಿತ್ತು.

ಕೋರ್ಟ್ ಆದೇಶದಂತೆ ಆಯ್ಕೆಪಟ್ಟಿಯನ್ನು ಸರಕಾರ ಪರಿಷ್ಕರಿಸಿತ್ತು. 2023ರ ಮಾ.8ರಂದು ಪ್ರಕಟಿಸಿದ ಪರಿಷ್ಕೃತ ಪಟ್ಟಿಯಲ್ಲಿ ಮೊದಲ ಪಟ್ಟಿಯಲ್ಲಿದ್ದ 451 ಅಭ್ಯರ್ಥಿಗಳನ್ನು ಕೈ ಬಿಡಲಾಗಿತ್ತು. ಅವಕಾಶ ವಂಚಿತ ಈ ಅಭ್ಯರ್ಥಿಗಳು ಪರಿಷ್ಕೃತ ಪಟ್ಟಿಯನ್ನು ಪ್ರಶ್ನಿಸಿ ಮತ್ತೆ ಹೈಕೋರ್ಟ್ ವಿಭಾಗೀಯ ಪೀಠದ ಮೆಟ್ಟಿಲೇರಿದ್ದರು. 2023ರ ಅ.13ರಂದು ವಿಭಾಗೀಯ ಪೀಠ ಏಕಸದಸ್ಯ ಪೀಠದ ಆದೇಶವನ್ನು ರದ್ದುಗೊಳಿಸಿತ್ತು. ನೇಮಕಾತಿಯನ್ನು ಮುಂದುವರಿಸುವುದರ ಜತೆಗೆ, ವಿವಾದವನ್ನು 'ಕೆಎಟಿ' ವೇದಿಕೆಯಲ್ಲಿ ಇತ್ಯರ್ಥಪಡಿಸಿಕೊಳ್ಳುವಂತೆ ಸೂಚಿಸಿತ್ತು. ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:18.10.2025

## 3. No appointments based on internal quota: HC

IN a major development, the Karnataka High Court has restrained the state government from making appointments to the state civil services based on a notification dated August 25, 2025 introducing internal reservation for Scheduled Castes (SC) and sub-classifying the communities into three different groups.

Passing an interim order on a petition filed by the Confederation of Untouchable Nomadic Communities of Karnataka and others belonging to nomadic and semi-nomadic castes under SCs, Justice Suraj Govindaraj clarified that the recruitment process can go on, but appointments cannot be made based on such a process. Granting time till November 5 to the state to the file objections, the court adjourened the hearing to November 13.

Praying the court to quash the notification, saying it is contrary to various judgments of the apex court, the petitioners stated that the government divided various SC communities into three groups A, B and C and distributed the 17% reservation. But the commission headed by retired high court judge Justice Nagamohan Das had recommended five groups after surveying the communities in early 2025. The sub-categorisation by the state government is unscientific, irrational and without adequate determining principles, their petition stated.

THE petitioners alleged that the state government came up with its own formula without adhering to the recommendations of the commission. The nomadic communities that the petitioners belong to are placed in Group-C with 5% reservation,

below Groups A and B, which have been 6% given reservation. They contended that the sub-classification by the state government amounts to grouping most backward communities with the less backward among SCs. This irrational sub-classification defeats the very object of sub-classification, which was meant to give preferential treatment to the most down-trodden among SCs. There is no basis for sub-classifying 101 SC communities into three groups and distributing 17% reservation among them, the petitioners alleged.

**Courtesy**:Indian Express, dated:18.10.2025

## 4. SIR exercise infringes voters' right to political expression, DMK tells SC

The Dravida Munnetra Kazhagam (DMI), Tamil Nadu’s rulling party, in a maiden challenge against the expansion of Special Intensive Revision (SIR) of electoral rolls to 12 States, said the exircise is replete with “arbitrariness, unreasonableness and illegalities" and infringes voters' right to political expression.

In a point-by-point counter to the SIR exercise itself and, in particular, the manner in which it was conducted in Bihar, the DMK, through its organising secretary R.S. Bharathi, represented by senior advocates N.R. Elango and Amit Anand Tiwari, said the second phase was bound to cause "confusion, uncertainty and disenfranchisement of a significant number of voters"

"Universal adult suffrage, constitutionally guaranteed under Article 326, as the foundational basis of free and fair elections is integral to the democratic framework of the Republic. Wrongful exclusion fro m electoral rolls strikes at the very core of this guarantee and directly infringes Article 1900(a), which protects the expression of political opinion of which the freedom of voting is an essential extension, the DMK highlighted.

Referring to the October 27 order of the Election Commission (EC) on the second phase, the party said Booth Level Oficers(BLO)s are repaired to conduct house-to-house enumeration forms and later collect them. "Neither the Representation of People Act(ROPA) nor the Registration of Electors Rules mention any such forms," the DMK pointed out.

In these enumeration forms, electors must fill in relevant details and have been directed not to provide any documents.

The DMK said electors have to provide their eligibility by providing any of the 13 specified documents to prove citizenship. However, the commonly available documents such as ration cards, PAN Cards, and EPIC have been excluded as documents.

“If the voter does not provide any document, they will be required to fill a Form 6 application during the claims and objections period, that is, after the publication of the draft rolls. This means that the names of such voters will automatically be deleted from the draft rolls thus allowing the mass exclusion of

voters from the electoral rolls in a completely subjective or arbitrary manner," the party contended.

The party pointed out that the BLOs would have to identify a probable cause-absent, shifted, death or duplication for electors who do not return their enumeration form.

"BLOs will make recommendations to Electoral Roll Officers [EROs] for inclusion or non inclusion of names of persons who have filled the enumeration forms from the draft electoral rolls. There are no guidelines, principles or policy on the basis of which the recommendations are to be provided, therefore, any assessment will be completely subjective," the DMK flagged. The party argued there was no clarity on whether the non-inclusion could be appealed or if an objection could be filed against the exclusion.

The DMK referred to clause 5(a) of the October 27 onder which said that after the draft rolls, the EROs would inscrutinise the eligibility of voters where they would decide whether an elector's name was to be included or not after issuing notice to voters concerned and giving them a hearing. "It is relevant to note that there is no prescribed method/manner for issuance of notice or the manner in which the hearing is to be conducted” the party noted.

The petition argued that the statutory right to appeal has been rendered mugatory in practice in the SIR ordered. The period for filing claims and objections from December 9 to January 8, 2026

"This overlaps with the notice phase ie., December 9, 2025 to January 31 2026, during which the enumeration forms and disposal of claime and abjections have to be done concurrently by the EROs. The final roll is to be published on February 7, 2026. Therefore, effectively, people have been denied the statutory right to appeal…,” the petitioner submitted. It said there was no statsutory timeline given for the disposal of appeals under Section 24(a) or (b) of the ROPA, The deadline for publication of the final roll that is, February 7, 2023 would likely before appeals are duly adjudicated.

"Even if a person complies with the prescribed timelines, late rejection orders and the absence of a guaranteed disposal window before final roll publication mean that wrongfully excluded electors may remain excluded for purpose of the impending polls and the publication of the revised SIR rolls, the petition said. The party said the SIR timeline for Tamil Nadu coincides with a major monsoon season, followed by Christmas and Pongal.

**Courtesy**: The Hindu, dated:05.11.2025

## 5. ಸಂಸತ್ತು ನಮ್ಮ ಎಲ್ಲ ಆದೇಶ ಬುಡಮೇಲು ಮಾಡಲಾಗದು: ಸುಪ್ರೀಂ

ಅಧ್ಯಕ್ಷರು, ಸದಸ್ಯರಿಗೆ ಕನಿಷ್ಠ, ಗರಿಷ್ಠ ವಯೋಮಿತಿ, ಅಧಿಕಾರಾವಧಿ ನಿಗದಿ ಸೇರಿ ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ 2021ರ ನ್ಯಾಯಮಂಡಳಿಗಳ ಸುಧಾರಣಾ ಕಾಯ್ದೆಯ ಅನೇಕ ನಿಬಂಧನೆಗಳನ್ನು ಸುಪ್ರೀಂ ಕೋರ್ಟ್ 19ನೇ ನವಂಬರ್ 2025ರಂದು ರದ್ದುಮಾಡಿದೆ. ಅಲ್ಲದೆ, ‘ಕೋರ್ಟ್

ಆದೇಶಗಳನ್ನೆಲ್ಲಾ ಬುಡ ಮೇಲು ಮಾಡಲಾಗದು' ಎಂದು ಖಡಕ್ಕಾಗಿ ಹೇಳಿದೆ. ಈ ಆದೇಶದಿಂದ ಕೇಂದ್ರ ಸರ್ಕಾರಕ್ಕೆ ಭಾರಿ ಹಿನ್ನಡೆ ಆಗಿದೆ.

'ಈ ಹಿಂದೆ ನಾವು ಅಸಾಂವಿಧಾನಿಕ ಎಂದು ರದ್ದು ಮಾಡಿದ್ದ ನ್ಯಾಯಮಂಡಳಿಗಳ ಸುಧಾರಣಾ ಅಧಿಸೂಚನೆಯಲ್ಲಿರುವ ಅಂಶಗಳನ್ನೇ ಸಣ್ಣ ಪುಟ್ಟ ತಿದ್ದುಪಡಿಗಳೊಂದಿಗೆ 2021ರ ಕಾಯ್ದೆಯಲ್ಲಿ ಮರು ಜಾರಿಗೊಳಿಸಲಾಗಿದೆ. ಇದು ಸಂವಿಧಾನದಲ್ಲಿ ಹೇಳಲಾದ ಅಧಿಕಾರದ ಪ್ರತ್ಯೇಕತೆ, ನ್ಯಾಯಾಂಗ ಸ್ವಾತಂತ್ರ್ಯದ ತತ್ವಗಳ ಸ್ಪಷ್ಟ ಉಲ್ಲಂಘನೆ' ಎಂದು ಕೋರ್ಟ್ ಹೇಳಿದೆ.

2020ರ ಆದೇಶದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮಂಡಳಿಗಳ ಸದಸ್ಯರು, ಅಧ್ಯಕ್ಷರ ಅಧಿಕಾರಾವಧಿಯನ್ನು 5 ವರ್ಷಕ್ಕೆ ನಿಗದಿಪಡಿಸುವಂತೆ ಆದೇಶಿಸಿತ್ತು. ಆದರೆ, 2021ರಲ್ಲಿ ಈ ಕುರಿತು ಅಧಿಸೂಚನೆ ಹೊರಡಿಸಿದ ಸರ್ಕಾರವು ಅಧ್ಯಕ್ಷರು, ಸದಸ್ಯರ ಅಧಿಕಾರಾವಧಿಯನ್ನು 4 ವರ್ಷಕ್ಕೆ ಸೀಮಿತಗೊಳಿಸಿತ್ತು.

ಅಧಿಸೂಚನೆಯನ್ನು ಸುಪ್ರೀಂ ನಂತರ ರದ್ದು ಮಾಡಿದ್ದು, ಆ ಬಳಿಕ ಈ ಅಧಿಸೂಚನೆಗೆ ಕೆಲ ತಿದ್ದುಪಡಿ ತಂದು 2021ರ ನ್ಯಾಯಾಧಿಕರಣಗಳ ಸುಧಾರಣಾ ಕಾಯ್ದೆ ಜಾರಿ ತರಲಾಗಿತ್ತು. ಅಧಿಕಾರಾವಧಿ ಜತೆಗೆ ನ್ಯಾಯಮಂಡಳಿ ಸದಸ್ಯರು, ಅಧ್ಯಕ್ಷರ ಕನಿಷ್ಠ ವಯೋಮಿತಿ 50 ವರ್ಷಕ್ಕೆ ನಿಗದಿ, ಅಧ್ಯಕ್ಷರಿಗೆ ಗರಿಷ್ಠ ವಯೋಮಿತಿ 70 ವರ್ಷ, ಸದಸ್ಯರಿಗೆ 67 ವರ್ಷ ಎಂದು ನಿಗದಿಪಡಿಸಿತ್ತು. ಜತೆಗೆ, ಈ ನ್ಯಾಯಮಂಡಳಿಗೆ ಇಬ್ಬರ ಹೆಸರು ಸೂಚಿಸಲು ಆಯ್ಕೆ ಸಮಿತಿಗೆ ಅವಕಾಶ ನೀಡಿ, ಅದರಲ್ಲಿ ಒಂದು ಹೆಸರನ್ನು ಸರ್ಕಾರವೇ ಅಂತಿಮಗೊಳಿಸುವ ಅಧಿಕಾರ ನೀಡಲಾಗಿತ್ತು. ಈಗ ಅಧ್ಯಕ್ಷರ ನಿವೃತ್ತಿ ವಯಸ್ಸನ್ನು 65ಕ್ಕೆ ಕೋರ್ಟ್ ಸೀಮಿತಗೊಳಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:20.11.2025

## 6. ಮಸೂದೆ ಸಹಿಗೆ ರಾಷ್ಟ್ರಪತಿ, ಗವರ್ನರ್‌ಗೆ ಕಾಲಮಿತಿ ಇಲ್ಲ

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಸಮ್ಮತಿ ನೀಡಲು ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರ ಮೇಲೆ ಕಾಲಮಿತಿ ಹೇರಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ 20ನೇ ನವಂಬರ್ 2025ರಂದು ಮಹತ್ತರ ತೀರ್ಪು ನೀಡಿದೆ. ಹಾಗೆಯೇ ಮಸೂದೆಗಳಿಗೆ ಪರಿಗಣಿತ (ಡೀಮ್ಡ್) ಒಪ್ಪಿಗೆ ನೀಡುವುದನ್ನೂ ನ್ಯಾಯಾಲಯ ನಿರ್ಬಂಧಿಸಿದೆ. ರಾಜ್ಯಪಾಲರಾದವರು ಸಂವಿಧಾನದ 200ನೇ ವಿಧಿಯಡಿ ತಮಗೆ ನೀಡಲಾದ ಅಧಿಕಾರ ಮೀರಿ ಕಾರ್ಯನಿರ್ವಹಿಸುವುದು ಅಸಾಧ್ಯ ಎಂದು ವಿವರಿಸಿರುವ ಮುಖ್ಯ ನ್ಯಾಯಮೂರ್ತಿ ಗವಾಯಿ ನೇತೃತ್ವದ ಐವರು ನ್ಯಾಯಾಧೀಶರ ಸಂವಿಧಾನ ಪೀಠ, ನಮ್ಮ ಅಭಿಪ್ರಾಯದಂತೆ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳನ್ನು ಪರಿಶೀಲಿಸಲು ಸಂವಿಧಾನವು ರಾಜ್ಯಪಾಲರಿಗೆ ಅಪರಿಮಿತವಾದ ಅಧಿಕಾರವೇನೂ ನೀಡಿಲ್ಲ ಎಂದಿದೆ. ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿ ರಾಜ್ಯಪಾಲರು ಸಂವಿಧಾನ ಒದಗಿಸಿದ ಸ್ಥಿತಿಸ್ಥಾಪಕತ್ವಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುವಂತಿಲ್ಲ ಎಂದಿದೆ.

ಸಂವಿಧಾನದಲ್ಲಿ ರಾಜ್ಯಪಾಲರಿಗೆ 3 ಅವಕಾಶ ನೀಡಲಾಗಿದೆ. ಮಸೂದೆಗಳಿಗೆ ಅನುಮೋದನೆ ನೀಡುವುದು ಅಥವಾ ರಾಷ್ಟ್ರಪತಿಯವರಿಗೆ ಒಪ್ಪಿಸುವುದು ಇಲ್ಲವೇ ಮಸೂದೆಗೆ ಒಪ್ಪಿಗೆ ನೀಡದೇ ತಮ್ಮ ಕೆಲವೊಂದು ಪ್ರತಿಕ್ರಿಯೆಗಳೊಂದಿಗೆ ಸರ್ಕಾರಕ್ಕೆ ಹಿಂದಿರುಗಿಸುವುದು. ಆದರೆ ರಾಜ್ಯಪಾಲರ ಈ ಕಾರ್ಯನಿರ್ವಹಣೆಗೆ ಸಂವಿಧಾನ ರೀತಿಯ ಯಾವುದೇ ಕಾಲಮಿತಿ ನಿಗದಿಪಡಿಸದಿರುವುದರಿಂದ ಈ ನ್ಯಾಯಾಲಯವು ಕಾನೂನಾತ್ಮಕ ರೀತಿಯಲ್ಲಿ ಅವರಿಗೆ ಸಮಯಮಿತಿ ಹೇರುವುದು ಸೂಕ್ತವಾಗದು ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ತಮಿಳುನಾಡು ಸರ್ಕಾರ ಸಲ್ಲಿಸಿದ ಮನವಿ ಮೇರೆಗೆ ಕಳೆದ ಏಪ್ರಿಲ್ 8ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪರ್ದಿವಾಲಾ ನೇತೃತ್ವದ ನ್ಯಾಯಪೀಠವು, ರಾಜ್ಯವಿಧಾನಸಭೆ ಅಂಗೀಕರಿಸಿದ

ಮಸೂದೆಗಳಿಗೆ ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ಮೂರು ತಿಂಗಳೊಳಗೆ ಅಂಗೀಕಾರ ನೀಡಬೇಕೆಂದು ತೀರ್ಪು ನೀಡಿತ್ತು. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿಯವರಾದ ದ್ರೌಪದಿ ಮುರ್ಮು ಅವರು ಸಂವಿಧಾನದ 143(1)ರಡಿ ತಮಗೆ ನೀಡಲಾದ ಅಪರೂಪದ ಅಧಿಕಾರ ಚಲಾಯಿಸಿ, ಸುಪ್ರೀಂಕೋರ್ಟ್ ಮುಂದೆ 14 ಪ್ರಮುಖ ಪ್ರಶ್ನೆಗಳನ್ನೆತ್ತಿ ಆ ಬಗ್ಗೆ ಅಭಿಪ್ರಾಯ ನೀಡುವಂತೆ ನ್ಯಾಯಾಲಯಕ್ಕೆ ಸೂಚಿಸಿದ್ದರು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:20.11.2025

# ಭಾಗ–7

# ಹೊರ ರಾಜ್ಯ ಸುದ್ದಿಗಳು

## 1. ಹಿಮಾಚಲದಲ್ಲಿ ಸಿಎಂ, ಸಚಿವರು, ಶಾಸಕರ ವೇತನ 25% ಹೆಚ್ಚಳ

ದೀಪಾವಳಿ ಹೊತ್ತಿನಲ್ಲಿಯೇ ಹಿಮಾಚಲಪ್ರದೇಶದಲ್ಲಿ ಮುಖ್ಯಮಂತ್ರಿ, ಸಚಿವರು ಹಾಗೂ ಶಾಸಕರ ವೇತನ ಶೇ.25ರಷ್ಟು ಏರಿಕೆಯಾಗಿದೆ.

ಮುಖ್ಯಮಂತ್ರಿ, ಸಚಿವರು, ವಿಧಾನಸಭೆ ಸ್ಪೀಕರ್, ಡೆಪ್ಯೂಟಿ ಸ್ಪೀಕರ್, ಶಾಸಕರು ಹಾಗೂ ಮಾಜಿ ಶಾಸಕರ ವೇತನ, ಪಿಂಚಣಿ ಹೆಚ್ಚಳಗೊಂಡಿದೆ. ಒಂಬತ್ತು ವರ್ಷಗಳ ನಂತರ ವೇತನ ಪರಿಷ್ಕರಣೆಗೊಂಡಂತಾಗಿದೆ. ವೇತನ ಪರಿಷ್ಕರಣೆ ಸಂಬಂಧ ಮಾರ್ಚ್ 28ರಂದು ಅಂಗೀಕಾರವಾದ ಮೂರು ವಿಧೇಯಕಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಮುಖ್ಯಮಂತ್ರಿಗಳ ಮಾಸಿಕ ವೇತನವು 2.65 ಲಕ್ಷ ರೂ.ನಿಂದ 3.50 ಲಕ್ಷ ರೂ.ಗಳಿಗೆ ಏರಿಕೆಯಾಗಿದೆ. ಸಚಿವರ ಮಾಸಿಕ ಸಂಬಳವು 2.55 ಲಕ್ಷ ರೂ.ನಿಂದ 3.10 ಲಕ್ಷ ರೂ.ಗಳಿಗೆ ಹೆಚ್ಚಳವಾಗಿದೆ. ವಿಧಾನಸಭೆ ಸ್ಪೀಕರ್ ಮಾಸಿಕ ವೇತನವನ್ನು 2.55 ಲಕ್ಷ ರೂ.ಗಳಿಂದ 3.45 ಲಕ್ಷ ರೂ.ಗೆ, ಡೆಪ್ಯೂಟಿ ಸ್ಪೀಕರ್ ಸಂಬಳವನ್ನು 2.50 ಲಕ್ಷ ರೂ.ಗಳಿಂದ 3.40 ಲಕ್ಷ ರೂ.ಗಳಿಗೆ ಏರಿಕೆಯಾಗಿದೆ. ಇನ್ನು ಶಾಸಕರ ತಿಂಗಳ ಸಂಬಳವು 2.10 ಲಕ್ಷ ರೂ.ನಿಂದ 2.80 ಲಕ್ಷ ರೂ.ಗೆ ಏರಿಕೆಯಾಗಿದ್ದರೆ, ಶಾಸಕರ ಪಿಂಚಣಿಯು 92,240 ರೂ.ನಿಂದ 1,29,500 ರೂ.ಗೆ ಹೆಚ್ಚಳವಾಗಿದೆ.

ಕಾಂಗ್ರೆಸ್ ಆಡಳಿತವಿರುವ ಈ ರಾಜ್ಯದ ಹಣಕಾಸಿನ ಸ್ಥಿತಿಗತಿ ಬಗ್ಗೆ ಕಳವಳ ವ್ಯಕ್ತವಾಗಿದ್ದರೂ ವೇತನ ಹೆಚ್ಚಳಕ್ಕೆ ಕ್ರಮ ಕೈಗೊಂಡ ಸರ್ಕಾರದ ನಿರ್ಧಾರವು ಚರ್ಚೆಗೆ ನಾಂದಿ ಹಾಡಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:18.10.202

## 2. 4 MLAs summoned in Telangana defection case

The Legislature Secretariat of Telangana has summoned four more MLAs of the Bharat Rashtra Samiti(BRS) who are facing charges of defection to the ruling Congress.

A tribunal, headed by Speaker G. Prasad Kumar and constituted under the Tenth Schedule of the Constitution dealing with the Anti-Defection Law, will conduct hearings on the charges made by the BRS leadership Arekapudi Gandhi, Pocharam Srinivas Reddy, and M. Sanjay Kumar from 5th December 2025.

The hearings will be held over two days. The Speaker's office has also issued notice to the petitioners, BRS MLAS G. Jagdish Reddy, Kalvakuntla Sanjay, and K.P. Vivekananda, to appear for the hearings with their advocates. The Speaker will cross-examine the four MLAs again on November 12 and 13.

The process follows earlier hearings on petitions pertaining to BRS MLAS T. Prakash Goud, Kale Yadaiah, Gudem Mahipal Reddy, and Bandla Krishnamohan Reddy last month. The legislators were guided by legal experts in answering the queries posed by the tribunal.

**Courtesy:** The Hindu,Dated:06.11.2025

## 3. ಉ.ಪ್ರದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ 'ವಂದೇ ಮಾತರಂ' ಗಾಯನ ಕಡ್ಡಾಯ

ಉತ್ತರಪ್ರದೇಶದ ಎಲ್ಲ ಶಾಲೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ದೇಶಭಕ್ತಿ ಗೀತೆ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಲಾಗುವುದು. ಈ ಸಂಬಂಧ ಸದ್ಯದಲ್ಲೇ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ಗೋರಖ್‌ಪುರದಲ್ಲಿ 10ನೇ ನವಂಬರ್ 2025ರಂದು ನಡೆದ 'ಏಕತಾ ಯಾತ್ರೆ' ಉದ್ದೇಶಿಸಿ ಮಾತನಾಡಿದ ಅವರು, "ರಾಜ್ಯದ ಪ್ರತಿಯೊಂದು ಶಾಲೆ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ 'ವಂದೇ ಮಾತರಂ' ಗೀತೆ ಗಾಯನ ಕಡ್ಡಾಯಗೊಳಿಸುವ ಕ್ರಮವು ಭಾರತ ಮಾತೆ, ಮಾತೃಭೂಮಿ ಬಗ್ಗೆ ನಾಗರಿಕರಲ್ಲಿ ಗ್ಷರವ ಮತ್ತು ಹೆಮ್ಮೆ ಮೂಡಿಸುತ್ತದೆ," ಎಂದು ಹೇಳಿದರು.

**ಆಧಾರ:**ವಿಜಯ ಕನಾಟಕ, ದಿನಾಂಕ:11.11.2025

## 4. ಮುಕುಲ್ ರಾಯ್ ಶಾಸಕತ್ವ ರದ್ದು

ಪಶ್ಚಿಮ ಬಂಗಾಳ ಮುತ್ತುಮಂತ್ರಿ ಮಮತಾ ಬ್ಯಾನರ್ಜಿ ಅವರ ಆಪ್ತ ಸಹಾಯಕ ಮತ್ತು ತೃಣಮೂಲ ಕಾಂಗ್ರೆಸ್ ನಾಯಕ ಮುಕುಲ್ ರಾಯ್ ಅವರ ಶಾಸಕ ಸ್ಥಾನವನ್ನು ಕೋಲ್ಕತ್ತಾ ಹೈಕೋರ್ಟ್ ರದ್ದುಗೊಳಿಸಿದೆ.

ನ್ಯಾ.ದೇಬಾಂಗ್ಯು ಬಸಕ್ ನೇತೃತ್ವದ ವಿಭಾಗೀಯ ಪೀಠವು ಪ್ರತಿಪಕ್ಷ ನಾಯಕ ಸುವೇಂದು ಅಧಿಕಾರಿ ಮತ್ತು ಬಿಜೆಪಿ ಶಾಸಕಿ ಅಂಬಿಕಾ ರಾಯ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಮುಗಿಸಿ ತೀರ್ಪು ನೀಡಿದೆ. ಪಶ್ಚಿಮ ಬಂಗಾಳ ವಿಧಾನಸಭೆಯ ಹಿರಿಯ ಸದಸ್ಯ ಎನಿಸಿರುವ ರಾಯ್ ಅವರ ಶಾಸಕ ಸ್ಥಾನವನ್ನು ಪಕ್ಷಾಂತರ ನಿಷೇಧ ಕಾಯಿದೆ ಅಡಿಯಲ್ಲಿ ನ್ಯಾಯಾಲಯ ರದ್ದುಗೊಳಿಸಿದೆ.

ರಾಯ್ ಅವರು ಮೇ 2021ರ ಮೇ ತಿಂಗಳಿನಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ ಅದೇ ವರ್ಷದ ಆಗಸ್ಟ್‌ನಲ್ಲಿ ಟಿಎಂಸಿಗೆ ವಾಪಸಾಗಿದ್ದರು. ರಾಯ್ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದ್ದು, ಪಕ್ಷಾಂತರ ನಿಷೇಧ ಕಾಯ್ದೆ ಅಡಿಯಲ್ಲಿ ಹೈಕೋರ್ಟ್ ಶಾಸಕರೊಬ್ಬರನ್ನು ಅನರ್ಹಗೊಳಿಸಿದ್ದು ರಾಜ್ಯದಲ್ಲಿ ಇದೇ ಮೊದಲ ಬಾರಿಯಾಗಿದೆ. ಪಕ್ಷಾಂತರ ನಿಷೇಧ ಕಾನೂನಿನಡಿಯಲ್ಲಿ ಅನರ್ಹತೆ ಕೋರಿಕೆಯನ್ನು ವಜಾಗೊಳಿಸುವ ವಿಧಾನಸಭಾ ಅಧ್ಯಕ್ಷ ಬಿಮನ್ ಬ್ಯಾನರ್ಜಿ ಅವರ ನಿರ್ಧಾರವನ್ನು ಪ್ರಶ್ನಿಸಿ ಸುವೇಂದು ಅಧಿಕಾರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅಧ್ಯಕ್ಷರನ್ನಾಗಿ ರಾಯ್ ಅವರ ನೇಮಕವನ್ನು ಕೂಡ ದೋಷಪೂರಿತವೆಂದು ನ್ಯಾಯಾಲಯ ಘೋಷಿಸಿದೆ.

**ಆಧಾರ:**ವಿಜಯ ಕನಾಟಕ, ದಿನಾಂಕ:14.11.2025

## 5. ತೆಲಂಗಾಣ ಸ್ಪೀಕರ್‌ಗೆ 'ಸುಪ್ರೀಂ' ನ್ಯಾಯಾಂಗ ನಿಂದನೆ ನೋಟಿಸ್

ಆಡಳಿತಾರೂಢ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ ಬಿಆರ್‌ಎಸ್ ಪಕ್ಷದ 10 ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ನೀಡಿದ ನಿರ್ದೇಶನವನ್ನು ಪಾಲಿಸದಿದ್ದಕ್ಕಾಗಿ ತೆಲಂಗಾಣದ ಸ್ಪೀಕರ್ ಗದ್ದಂ ಪ್ರಸಾದ್ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ 17ನೇ ನವಂಬರ್ 2025ರಂದು ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠ ಜುಲೈ 31ರಂದು ಭಾರತ ರಾಷ್ಟ್ರ ಸಮಿತಿ(ಬಿಆರ್‌ಎಸ್) ಪಕ್ಷದ 10 ಶಾಸಕರ ಅನರ್ಹತೆಯ ವಿಷಯವನ್ನು ಮೂರು ತಿಂಗಳಲ್ಲಿ ನಿರ್ಧರಿಸುವಂತೆ ವಿಧಾನಸಭಾ ಸ್ಪೀಕರ್‌ಗೆ ನಿರ್ದೇಶನ ನೀಡಿತ್ತು.

ಸಿಜೆಐ ನೇತೃತ್ವದ ಪೀಠವು ನೀಡಿದ್ದ ನಿರ್ದೇಶನಗಳನ್ನು ಪಾಲಿಸದಿರುವುದು 'ಅತ್ಯಂತ ಗಂಭೀರ ರೀತಿಯ ನ್ಯಾಯಾಂಗ ನಿಂದನೆ' ಎಂದು ಹೇಳಿದ ನ್ಯಾಯಾಲಯ, ಬಿಆರ್‌ಎಸ್ ನಾಯಕರು ಸಲ್ಲಿಸಿದ

ಅರ್ಜಿಗಳ ಕುರಿತು ಸ್ಪೀಕರ್ ಮತ್ತು ಇತರರಿಗೆ ನೋಟಿಸ್ ನೀಡಿದೆ. ಆದರೆ, ಮುಂದಿನ ಆದೇಶದವರೆಗೆ ತೆಲಂಗಾಣದ ಸ್ಪೀಕರ್ ಮತ್ತು ಇತರರಿಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿದೆ.

ಅನರ್ಹತೆ ಅರ್ಜಿಗಳನ್ನು ನಿರ್ಧರಿಸಲು ಎಂಟು ವಾರಗಳ ಕಾಲಾವಕಾಶ ನೀಡಬೇಕು ಎಂದು ವಿಧಾನಸಭಾಧ್ಯಕ್ಷರ ಕಚೇರಿಯ ಪರವಾಗಿ ಸಲ್ಲಿಸಲಾದ ಪ್ರತ್ಯೇಕ ಅರ್ಜಿ ಬಗ್ಗೆಯೂ ನ್ಯಾಯಪೀಠ ನೋಟಿಸ್ ಜಾರಿ ಮಾಡಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:18.11.2025

## 6. Nitish starts 10th innings 24 on ‘double-engine’ wicket

As the swearing-in ceremony ended at Gandhi Maidan on 20th November, CM Nitish Kumar took PM Modi's hand and lifted it with his to greet a large cheering crowd, marking the new dynamic in their relationship since the JDU president rejoined NDA in January 2024.

The transformation could not have been starker compared to their headline-grab bing photo-op in 2009 at a NDA rally in Ludhiana, which brought out the JDU leader's unease with then Gujarat CM.

The sight at Gandhi Maidan was a metaphor of the ease in their ties, emphasised in the presence of Modi, Union ministers Amit Shah and Rajnath Singh besides the gamut of chief ministers from BJP and allies.

Nitish took oath along with 26 ministers, 14 from BJP, eight from JDU and four from three other allies as NDA looked to accommodate a diverse social coalition in an acknowledgement of its varied support base. They include three women and 10 first-timers, including seven from BJP, with the party rewarding its traditional voting bloc and new additions, while JDU has repeated its old hands, most of whom seen as long trusted aides of Nitish.

**Courtesy:**Times of India, Dated:21.11.2025

## 7. Assam Bill to ban polygamy cleared; CM promises to bring in UCC next

The Assam Assembly on 27th November 2025 passed the Assam Prohibition of Polygamy Bill, 2025, aimed at penalising those who enter into a second marriage without legally dissolving the first. The proposed legislation was tabled in the 126member House 25th Novermber 2025 on

"We will reserve the Bill for the assent of President Droupadi Murmu. I do not think the Bill will be denied approval, as the President is a woman," Chief Minister Himanta Biswa Sarma said, pointing out that the Bill intends to protect women and compensate victims of polygamy.

During the discussion, he said the widespread belief that Islam inherently promotes polygamy was factually incorrect. Citing religious accounts, he said that Prophet Muhammad regulated the practice of multiple marriages and

limited it to a man keeping four wives under strict conditions. "His line of thinking was not to promote polygamy but to curb excesses," he said.

"Minus the consent, a second marriage is not legally valid in Islam," he told the House.He added that the next step would be to introduce a Bill to implement the Uniform Civil Code in Assam."If you cannot stop me from becoming the Chief Minister again, I will bring in the Uniform Civil Code," he said.

The Bill prescribes punishment of up to 10 years and heavy fines for indivi duals who conceal a previous marriage before marrying for the second time. Repeat offenders will face double the punishment.

It proposes up to two years in jail and a fine of up to Rs.1 lakh for those who hide information about polygamous marriages from the police. Clerics or Qazis who solemnise such marriages may also face up to two years in prison and a fine of up to Rs.1.5 lakh.

**Courtesy:**The Hindu, Dated:28.11.2025

## 8. ಉತ್ತರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ

ಮಕ್ಕಳಲ್ಲಿ ಓದಿನ ಹವ್ಯಾಸ ಕ್ಷೀಣಿಸುತ್ತಿರುವುದಲ್ಲದೆ, ಮೊಬೈಲ್, ಟಿವಿ ಗೀಳು ಅತಿರೇಕಕ್ಕೆ ತಲುಪುತ್ತಿರುವ ದಿನಗಳಲ್ಲಿ, ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದಿನಪತ್ರಿಕೆಗಳ ಓದು ಕಡ್ಡಾಯಗೊಳಿಸಿ ಉತ್ತರ ಪ್ರದೇಶ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಡಿಸೆಂಬರ್.23ರ ಆದೇಶದನ್ವಯ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿ ಮುಂಜಾನೆ 10ನಿಮಿಷ ಪತ್ರಿಕೆ ಓದು ಕಡ್ಡಾಯ.

ಶಾಲಾ ಗ್ರಂಥಾಲಯದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಪತ್ರಿಕೆಗಳ ಲಭ್ಯತೆ ಕಡ್ಡಾಯ. ವಿದ್ಯಾರ್ಥಿಗಳು ಮುಂಜಾನೆ ಪ್ರಾರ್ಥನೆಗಾಗಿ ಒಟ್ಟುಗೂಡುವ ಸಮಯದಲ್ಲಿ ಕನಿಷ್ಠ 10 ನಿಮಿಷ ದಿನಪತ್ರಿಕೆಗಳನ್ನು ಓದಬೇಕು. ಪಾಳಿ ಪ್ರಕಾರ ದಿನಕ್ಕೊಬ್ಬ ವಿದ್ಯಾರ್ಥಿ ಅಂದಿನ ಮುಖ್ಯ ಸಮಾಚಾರ, ಲೇಖನಗಳನ್ನು ವಾಚಿಸಬೇಕು. 'ದಿನದ ಪದ' ಸಂಪಾದಕೀಯ ಎಂದು ಚಟುವಟಿಕೆ ಮೂಲಕ ಪ್ರತಿದಿನ ಪತ್ರಿಕೆಯಿಂದ 5 ಕ್ಲಿಷ್ಟಕರ ಪದಗಳನ್ನು ಆಯ್ದು, ಅವುಗಳ ಅರ್ಥ ವಿವರಿಸಿ, ನೋಟಿಸ್ ಫಲಕದಲ್ಲಿ ಬರೆಯಬೇಕು. ಇದರಿಂದ ಮಕ್ಕಳ ಶಬ್ದಕೋಶ ವೃದ್ಧಿಯಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

ಪತ್ರಿಕೆಗಳ ಓದಿನ ಜೊತೆಗೆ, 9ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಸ್ವತಃ ದಿನಪತ್ರಿಕೆ ಅಥವಾ ನಿಯತಕಾಲಿಕೆಗಳನ್ನು ಹೊರತರಲು ಶಾಲೆಗಳು ಪ್ರೋತ್ಸಾಹಿಸಬೇಕು. ಸುಡೋಕು ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಬೇಕು. ವಿದ್ಯಾರ್ಥಿಗಳು ಸುದ್ದಿಯ ತುಣುಕುಗಳನ್ನು ಸಂಗ್ರಹಿಸಿ, ಪುಸ್ತಕಗಳನ್ನು ಸಿದ್ಧಪಡಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಹಿಂದೆ ನವಂಬರ್ 2ರಂದು ಸರ್ಕಾರ ಆದೇಶ ಹೊರಡಿಸಿತ್ತು. ಅದರ ಪ್ರಕಾರ, ಸರ್ಕಾರಿ ಜಿಲ್ಲಾ ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಪ್ರತಿವಾರ ಕನಿಷ್ಠ ಒಂದು ಪಠ್ಯೇತರ ಪುಸ್ತಕವನ್ನು ಒದಗಿಸಬೇಕು. ಹೆಚ್ಚು ಓದುವ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರ ನೀಡಬೇಕು. ಶಾಲಾ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಟ್ರೋಫಿಗಳ ಬದಲು ಪುಸ್ತಕ ನೀಡಬೇಕು ಎಂದು ತಿಳಿಸಲಾಗಿತ್ತು.

**ಆಧಾರ:**ಕನ್ನಡ ಪ್ರಭ, ದಿನಾಂಕ:27.12.2025

# ಭಾಗ–8

# ಅಂತರರಾಷ್ಟ್ರೀಯ ಸುದ್ದಿಗಳು

## 1. ಶಕ್ತಿ ಯೋಜನೆಗೆ ವರ್ಲ್ಡ್ ರೆಕಾರ್ಡ್ ಕಿರೀಟ!

ಬೆಂಗಳೂರು ನಮ್ಮ ಸರ್ಕಾರ ಜಾರಿಗೆ ತಂದ ಗ್ಯಾರಂಟಿ ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್–ವರ್ಲ್ಡ್ ರೆಕಾರ್ಡ್ ಆಫ್ ಎಕ್ಸಲೆನ್ಸ್‌ಗೆ ಸೇರ್ಪಡೆಗೊಂಡು ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಸಮಸ್ತ ಕನ್ನಡಿಗರು ಹೆಮ್ಮೆದ್ದರಾಮಯ್ಯ ಹೇಳಿದ್ದಾರೆ.

ಹೆಚ್ಚು ಬಾರಿ ಮಹಿಳಾ ಪಯಾಣಿಕರು ವಿಶ್ವ ದಾಖಲೆ ಬರೆದಿದೆ ಎಂದು ಹೆಮ್ಮೆ ಪಟ್ಟುಕೊಂಡಿದ್ದಾರೆ. ನಾಡಿನ ಸ್ವಾಭಿಮಾನಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶದೊಂದಿಗೆ ತಂದ ಶಕ್ತಿ ತನ್ನ ಗುರಿಯನ್ನು ಯಶಸ್ವಿಯಾಗಿ ಈಡೇರಿಸುತ್ತಾ ಮುನ್ನಡೆಯುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಉದ್ಯೋಗದಲ್ಲಿ ಮಹತ್ವದ ಹೆಜ್ಜೆಯಲ್ಲಿ ನಮ್ಮೊಂದಿಗೆ ಜತೆಯಾಗಿರುವ ಎಲ್ಲ ಹೆಣ್ಣುಮಕ್ಕಳಿಗೆ ಶಕ್ತಿ ಯೋಜನೆಯ ಸಾಧನೆಯ ಶ್ರೇಯ ಸಲ್ಲುತ್ತದೆ ಎಂದಿರುವ ಅವರು ಸಾರಿಗೆ ಸಚಿವರಾದ  ವರ್ಗಕ್ಕೂ ಅಭಿನಂದನಾರ್ಹರು  ರಾಮಲಿಂಗಾರೆಡ್ಡಿಯವರು, ಶಕ್ತಿ ಶಕ್ತಿ ಯೋಜನೆಯನ್ನು ದೇಶದ ವಿವಿಧ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಿರುವುದು ಶಕ್ತಿ ಯೋಜನೆಯ ಯಶಸ್ಸನ್ನು ಬಿಂಬಿಸಿದೆ. ಇದರೊಂದಿಗೆ ಮತ್ತೊಂದು ವಿಶ್ವ ದಾಖಲೆಗೆ ಸೇರ್ಪಡೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದ್ದಾರೆ.

ಬಿಹಾರ ಚುನಾವಣೆ ಹಿನ್ನೆಲೆಯಲ್ಲಿ ಜಿಎಸ್‌ಟಿಯನ್ನು ಸರಳೀಕರಣಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರದಿಂದ ರಾಜ್ಯಕ್ಕೆ ವಾರ್ಷಿಕ ಅಂದಾಜು 15 ಸಾವಿರ ಕೋಟಿ ರೂ. ನಷ್ಟವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು. 2017ರಲ್ಲಿ ಕೇಂದ್ರ ಸರ್ಕಾರವೇ ಜಿಎಸ್ ಟಿಯನ್ನು ಜಾರಿಗೆ ತಂದು ಜಿಎಸ್‌ಟಿ ದರ ಜಿಎಸ್‌ಟಿ ದರವನ್ನು ತಾವೇ ಕಡಿಮೆ ಮಾಡಿ, ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಕೆಲಸದಲ್ಲಿ  17,000 ಆಗಿದೆ. ಅಗತ್ಯಬಿದ್ದರೆ ಕಳೆದ ಬಾರಿಯಂತೆ ಸ್ನಾಯಾಲಯದ ನೆರವು

ಕೇಂದ್ರದ ಕಡಿಮೆ ಅನುದಾನದ ನಡುವೆ ಗ್ಯಾರಂಟಿ ವೆಚ್ಚ ಭರಿಸುವುದು ಸರ್ಕಾರಕ್ಕೆ ಸವಾಲಾಗಿದ್ದರೂ, ದಿಟ್ಟತನದಿಂದ ಎದುರಿಸಲಾಗುವುದು ಕೇಂದ್ರ ಸರ್ಕಾರ ಎಸ್‌ಡಿಎ ರಾಜ್ಯಗಳ ಅನುಕೂಲಕ್ಕೆ ತಕ್ಕಂತೆ ಜಿಎಸ್‌ಟಿ ಪರಿಹಾರ ನೀಡುತ್ತಿದೆ. ಕರ್ನಾಟಕದ ಬಿಜೆಪಿ ಸಂಸದರಿಗೆ ಮೋದಿ ಅವರನ್ನು ಹೊಗಳುವುದೇ ಕೆಲಸವಾಗಿದ್ದು, ರಾಜ್ಯದ ಹಿತಚಿಂತನೆ ಮಾಡುತ್ತಿಲ್ಲ ಎಂದು ದೂರಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:04.10.2025

## 2. ಮಾರಿಯಾಗೆ ನೊಬೆಲ್ ಶಾಂತಿ ಪುರಸ್ಕಾರ

ವೆನೆಜುವೆಲಾದ ವಿರೋಧಪಕ್ಷದ ನಾಯಕಿ ಮತ್ತು ಪ್ರಜಾಪ್ರಭುತ್ವ ಪರ ಹೋರಾಟಗಾರ್ತಿ ಮಾರಿಯಾ ಕೊರಿನಾ ಮಚಾದೊ ಅವರಿಗೆ ಅವರಿಗೆ ಪ್ರಸಕ್ತ ಸಾಲಿನ ನೊಬೆಲ್ ಶಾಂತಿ ಪುರಸ್ಕಾರ ಒಲಿದಿದೆ.

'ವೆನೆಜುವೆಲಾದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪ್ರಚುರಪಡಿಸಲು ಮತ್ತು ಸರ್ವಾಧಿಕಾರದಿಂದ ಪ್ರಜಾಪ್ರಭುತ್ವದನೆಡೆಗೆ ಶಾಂತಿಯುತವಾಗಿ ದೇಶವನ್ನು ಕೊಂಡೊಯ್ಯಲು ನಡೆಸಿದ ಹೋರಾಟಗಳಿಗಾಗಿ ಮಾರಿಯಾ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲಾಗುತ್ತಿದೆ' ಎಂದು ನಾರ್ವೆಯ ನೊಬೆಲ್ ಸಮಿತಿಯ ಅಧ್ಯಕ್ಷ ಜಾರ್ಗೆನ್ ವಾಟ್ನೆ ಫ್ರಿಡ್‌ನೆಸ್ ಅವರು ಹೇಳಿದ್ದಾರೆ.

ನಿರಂಕುಶ ಆಡಳಿತದಿಂದಾಗಿ ಮಾನವೀಯತೆಯ ಅಧಃಪತನ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ವೆನೆಜುವೆಲಾದಲ್ಲಿ ಸಮರ್ಥ ವಿರೋಧ ಪಕ್ಷವಾಗಿ ಮಾರಿಯಾ ಕಾರ್ಯನಿರ್ವಹಿಸಿದ್ದಾರೆ. ಜೀವ ಬೆದರಿಕೆಗಳು ಇದ್ದರೂ ದೇಶಕ್ಕಾಗಿ ದೃಢವಾಗಿ ನಿಂತಿದ್ದಾರೆ. ದೌರ್ಜನ್ಯದ ವಿರುದ್ಧ ನಾಗರಿಕರು ತೋರುವ ಧೈರ್ಯಕ್ಕೆ ಅವರು ಅದ್ಭುತ ಉದಾಹರಣೆಯಾಗಿದ್ದಾರೆ' ಎಂದು ಫ್ರಿಡ್‌ನೆಸ್ ಹೇಳಿದ್ದಾರೆ.

ಪ್ರಶಸ್ತಿಯು ಚಿನ್ನದ ಪದಕ, ಪ್ರಶಸ್ತಿ ಹಾಗೂ 1.2 ಮಿಲಿಯನ್ ಡಾಲರ್ (ಅಂದಾಜು ರೂ.10 ಕೋಟಿ ಒಳಗೊಂಡಿದ್ದು, ಓಸ್ಲೋದಲ್ಲಿ ಡಿಸೆಂಬರ್ 10ರಂದು ಪ್ರದಾನ ಮಾಡಲಾಗುತ್ತದೆ. ತಮಗೆ

ನೊಬೆಲ್ ಪ್ರಶಸ್ತಿ ಲಭಿಸಿದ್ದಕ್ಕೆ ಪ್ರತಿಕ್ರಿಯಿಸಿರುವ ಅವರು, 'ನಾನು ಇದಕ್ಕೆ ಅರ್ಹಳಲ್ಲ. ನಮ್ಮ ದೇಶದ ಜನರಿಗೆ ಸಂದ ಗೌರವವಿದು'ಎಂದಿದ್ದಾರೆ.

**ಆಧಾರ:**ಪ್ರಜಾವಾಣಿ, ದಿನಾಂಕ:11.10.2025

## 3. ವೈಮಾನಿಕ ಶಕ್ತಿಯಲ್ಲಿ ಚೀನಾ ಹಿಂದಿಕ್ಕಿದ ಭಾರತಕ್ಕೆ 3ನೇ ಸ್ಥಾನ

ಜಾಗತಿಕ ಸೇನಾಪಡೆಗಳ ಸಾಮರ್ಥ್ಯ ವಿಚಾರದಲ್ಲಿ ಭಾರತ ಈಗ ಚೀನಾವನ್ನು ಹಿಂದಿಕ್ಕಿ ಜಗತ್ತಿನ 3ನೇ ಅತಿ ಬಲಿಷ್ಠ ಸೇನೆಯಾಗಿ ಹೊರಹೊಮ್ಮಿದೆ. ಇತ್ತೀಚೆಗಷ್ಟೇ ಪಾಕಿಸ್ತಾನವನ್ನು 'ಆಪರೇಷನ್ ಸಿಂಧೂರ'ದಲ್ಲಿ ಬಗ್ಗುಬಡಿದ ಭಾರತದ ಹೆಮ್ಮೆಯ ಕೀರಿಟಕ್ಕೆ ಈಗ ಮತ್ತೊಂದು ಗರಿ ಸೇರಿಕೊಂಡಿದೆ.

'ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್' ಇತ್ತೀಚೆಗೆ ಪ್ರಕಟಿಸಿದ ಶ್ರೇಯಾಂಕ ಪಟ್ಟಿಯಲ್ಲಿ ಭಾರತ 3ನೇ ಸ್ಥಾನಕ್ಕೇರಿದೆ. ಚೀನಾ ಸೇನಾಪಡೆ ಹಿಂದೆ ಉಳಿದ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಶ್ರೇಯಾಂಕ ಪಟ್ಟಿ ಪ್ರಕಾರ ಅಮೆರಿಕದ ವಾಯುಪಡೆ ಅಗ್ರಸ್ಥಾನದಲ್ಲಿದೆ. 2ನೇ ಸ್ಥಾನದಲ್ಲಿ ರಷ್ಯಾ, ಸೈನ್ಯವಿದೆ. ದೀರ್ಘಕಾಲದಿಂದ 3ನೇ ಪ್ರಮುಖ ವಾಯುಸೇನಾ ಶಕ್ತಿ ಎಂದು ಪರಿಗಣಿಸಲಾಗಿದ್ದ ಚೀನಾ ಈಗ 4ನೇ ಸ್ಥಾನಕ್ಕೆ ಕುಸಿದಿದೆ.

ಫ್ರಾನ್ಸ್‌ನ ಡಸ್ಸಾಲ್ಟ್ ಕಂಪನಿಯ 'ರಫೇಲ್' ಯುದ್ಧ ವಿಮಾನಗಳು, ದೇಶೀ ನಿರ್ಮಿತ ತೇಜಸ್ ಸಮರ ವಿಮಾನಗಳ ಸೇರ್ಪಡೆ ಬಳಿಕ ಭಾರತೀಯ ವಾಯುಪಡೆಯ ಸ್ವರೂಪವೇ ಬದಲಾಗಿದೆ. ಜತೆಗೆ ಇತ್ತೀಚೆಗಷ್ಟೇ ಪಾಕಿಸ್ತಾನವನ್ನು 'ಆಪರೇಷನ್ ಸಿಂಧೂರ'ದಲ್ಲಿ ಬಗ್ಗುಬಡಿದ ಬಳಿಕ ವಾಯುಪಡೆಯ ಸಾಮರ್ಥ್ಯವೂ ಜಗತ್ತಿನೆದುರು ಅನಾವರಣಗೊಂಡಿದೆ. ಭಾರತದ ಸಮರ ವಿಮಾನಗಳ ಕಾರ್ಯಾಚರಣೆಯ ಪರಿಣಾಮಕಾರಿ ದಾಳಿಯನ್ನು ಶತ್ರುಗಳೂ ಅರ್ಥ ಮಾಡಿ ಕೊಂಡಿದ್ದಾರೆ.

'ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್' ಶ್ರೇಯಾಂಕಗಳು 103 ದೇಶಗಳು ಮತ್ತು ಸೈನ್ಯ, ನೌಕಾಪಡೆ ಮತ್ತು ಸಮುದ್ರ ವಾಯುಯಾನ ಶಾಖೆಗಳು ಸೇರಿದಂತೆ 129 ವಾಯುಪಡೆ ವಿಭಾಗಗಳನ್ನು ಒಳಗೊಂಡಿದೆ. ಸಮೀಕ್ಷೆಯಲ್ಲಿ ವಿಶ್ವಾದ್ಯಂತದ ಒಟ್ಟು 48,082 ಸಮರ ವಿಮಾನಗಳ ಶಕ್ತಿ ಸಾಮರ್ಥ್ಯವನ್ನು ಕಂಡುಕೊಂಡೇ ಶ್ರೇಯಾಂಕವನ್ನು ನಿಗದಿಪಡಿಸಲಾಗಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:17.10.2025

## 4. ವಿದೇಶಿ ಸಂಸತ್ತಿನಲ್ಲಿ ಪ್ರಧಾನಿ ಮೋದಿ 18ನೇ ಭಾಷಣ!

'ಭಾರತ ಮತ್ತು ಇಥಿಯೋಪಿಯಾ ದೇಶಗಳು ಪ್ರಾದೇಶಿಕ ಶಾಂತಿ, ಭದ್ರತೆ, ಸಂಪರ್ಕದಲ್ಲಿ ಸ್ವಾಭಾವಿಕ ಪಾಲುದಾರರು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. 17ನೇ ಡಿಸೆಂಬರ್ 2025ರಂದು ಇಥಿಯೋಪಿಯಾ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಅವರು, ಉಭಯ ದೇಶಗಳ ಪ್ರಾಮುಖ್ಯತೆ ಒತ್ತಿ ಹೇಳಿದರು. ಮೋದಿ ಅವರು ವಿದೇಶಿ ಸಂಸತ್ತನ್ನು ಉದ್ದೇಶಿಸಿ ಮಾತನಾಡಿರುವುದು ಇದು 18ನೇ ಬಾರಿ.

'ಇಥಿಯೋಪಿಯಾ ದೇಶವು ಆಫ್ರಿಕಾದ ಮಹತ್ವದ ಸ್ಥಾನದಲ್ಲಿದ್ದರೆ, ಭಾರತವು ಹಿಂದೂ ಮಹಾಸಾಗರದ ಹೃದಯ ಭಾಗದಲ್ಲಿದೆ. ಹೀಗೆ, ತಮ್ಮ ತಮ್ಮ ಖಂಡಗಳಲ್ಲಿ ಆಯಕಟ್ಟಿನ ಸ್ಥಳಗಳಲ್ಲಿರುವ ಎರಡೂ ದೇಶಗಳು ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸಂಪರ್ಕದಲ್ಲಿ ನೈಸರ್ಗಿಕ ಪಾಲುದಾರರು' ಎಂದರು. ಈ ನಡುವೆ ಭೋಜನಕೂಟದ ವೇಳೆ ಭಾರತದ ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಹಾಡಲಾಯಿತು. ಆ ವೇಳೆ ಮೋದಿ, ತಮ್ಮೆರಡೂ ಕೈಗಳನ್ನು ಮೇಲೆತ್ತಿ ಸಂತಸದಿಂದ ಚಪ್ಪಾಳೆ ತಟ್ಟಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:18.12.2025

## 5. ಮೋದಿಗೆ 29ನೇ ಜಾಗತಿಕ ಗೌರವ

ಭಾರತ–ಒಮಾನ್ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ನೀಡಿದ ಕೊಡುಗೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಆರ್ಡರ್ ಆಫ್ ಒಮಾನ್' ಪ್ರಶಸ್ತಿ' ಪ್ರದಾನ ಮಾಡಲಾಗಿದೆ.

ಮಸ್ಕತ್ ಸುಲ್ತಾನ ಹೈಥಮ್ ಬಿನ್ ತಾರಿಕ್ ಅವರು 18ನೇ ಡಿಸೆಂಬರ್ 2025ರಂದು ಸಂಜೆ(ಭಾರತೀಯ ಕಾಲಮಾನ) ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುಲ್ತಾನರ ವಿಶಿಷ್ಟ ನಾಗರಿಕ ಗೌರವವಾದ ಆರ್ಡರ್ ಆಫ್ ಒಮಾನ್ ಪುರಸ್ಕಾರ ನೀಡಿದರು. ಎರಡೂ ದೇಶಗಳ ನಡುವಿನ ಸಂಬಂಧಗಳನ್ನು ಬಲಪಡಿಸುವಲ್ಲಿ ಮೋದಿ ಅವರ ಪಾತ್ರವನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದರು.

ಒಮಾನ್ ಶ್ರೇಷ್ಠೋತ್ತಮ ಪ್ರಶಸ್ತಿಯನ್ನು ಈ ಹಿಂದೆ ಬ್ರಿಟನ್ ರಾಣಿ ಎಲಿಜಬೆತ್–2, ನೆದರ್‌ಲೆಂಡ್ ರಾಣಿ ಮ್ಯಾಕ್ಸಿಮಾ, ಜಪಾನ್ ಚಕ್ರವರ್ತಿ ಅಕಿಹಿಟೊ, ದಕ್ಷಿಣ ಆಫ್ರಿಕಾದ ಜನಪ್ರಿಯ ನಾಯಕ ನೆಲ್ಸನ್ ಮಂಡೇಲಾ ಮತ್ತು ಜೋರ್ಡಾನ್ ರಾಜ ಅಬ್ದುಲ್ಲಾ ಮೊದಲಾದವರಿಗೆ ಪ್ರದಾನ ಮಾಡಲಾಗಿತ್ತು. ಈ ಗಣ್ಯರ ಸಾಲಿಗೆ ಈಗ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೂ ಸೇರಿದ್ದಾರೆ. ಪ್ರಧಾನಿ ಹುದ್ದೆಯಲ್ಲಿ ಮೋದಿ ಅವರಿಗೆ ಇದು 29ನೇ ಜಾಗತಿಕ ಮಟ್ಟದ ನಾಗರಿಕ ಪ್ರಶಸ್ತಿಯ ಗೌರವವಾಗಿದೆ.

ಪ್ರಧಾನಿ ಮೋದಿ 4 ದಿನಗಳ ಅವಧಿಯ 3 ದೇಶಗಳ ಪ್ರವಾಸದಲ್ಲಿ ಕಡೆಯ ಹೆಜ್ಜೆಯಲ್ಲಿದ್ದಾರೆ. ಇಥಿಯೋಪಿಯ ಪ್ರವಾಸದ ಬಳಿಕ ಪ್ರಧಾನಿ ಮೋದಿ 17ನೇ ಡಿಸೆಂಬರ್ 2025ರಂದು ಸಂಜೆ(ಭಾರತೀಯ ಕಾಲಮಾನ) ಒಮಾನ್ ರಾಜಧಾನಿ ಮಸ್ಕತ್‌ಗೆ ಬಂದಿಳಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಒಮಾನ್ ರಕ್ಷಣಾ ವ್ಯವಹಾರಗಳ ಸಚಿವರೂ ಆಗಿರುವ ಉಪ ಪ್ರಧಾನಿ ಸಯ್ಯದ್ ಶಿಹಾಬ್ ಬಿನ್ ತಾರಿಕ್ ಅಲ್ ಸೈದ್ ಆತ್ಮೀಯವಾಗಿ ಸ್ವಾಗತಿಸಿದರು.

ಎರಡೂ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳಿಗೆ 70 ವರ್ಷಗಳಾದ ಹಿನ್ನೆಲೆಯಲ್ಲಿ ಸುಲ್ತಾನ್ ಹೈತಮ್ ಬಿನ್ ತಾರಿಕ್ ಅವರ ಆಹ್ವಾನದ ಮೇರೆಗೆ ಮೋದಿ ಒಮಾನ್‌ಗೆ ಭೇಟಿ ನೀಡಿದ್ದಾರೆ ಎಂಬುದು ಉಲ್ಲೇಖಾರ್ಹ. ಕೊಲ್ಲಿ ರಾಷ್ಟ್ರಕ್ಕೆ ಮೋದಿ ಅವರ 2ನೇ ಭೇಟಿ ಇದಾಗಿದೆ. ಈ ಭೇಟಿಯ ಸಮಯದಲ್ಲಿ, ಮೋದಿ ಅವರು ಸುಲ್ತಾನ್ ತಾರಿಕ್ ಅವರೊಂದಿಗೆ – ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ಜೊತೆಗೆ ಬಲವಾದ ವಾಣಿಜ್ಯ ಮತ್ತು ಆರ್ಥಿಕ ಸಂಬಂಧದ ಬಗ್ಗೆಯೂ ಚರ್ಚೆ ನಡೆಸಲಿದ್ದಾರೆ. ನಂತರ ಮಸ್ಕತ್‌ನಲ್ಲಿ ಭಾರತ ಮೂಲದ ಜನರೊಂದಿಗಿನ ಸಭೆಯಲ್ಲಿ ಮಾತನಾಡಲಿದ್ದಾರೆ.

2024–25ರಲ್ಲಿ ಭಾರತ–ಒಮಾನ್ ದ್ವಿಪಕ್ಷೀಯ ವ್ಯಾಪಾರ 1050 ಕೋಟಿ ಡಾಲರ್ (₹ 400 ಕೋಟಿ ರಫ್ತು ಮತ್ತು ₹ 654 ಕೋಟಿ ಆಮದು) ವಹಿವಾಟಾಗಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:19.12.2025

## 6. ಜಪಾನ್ ಹಿಂದಿಕ್ಕಿದ ಭಾರತ

ಭಾರತದ ಅರ್ಥ ವ್ಯವಸ್ಥೆಯು ಜಪಾನ್ ದೇಶದ ವ್ಯವಸ್ಥೆಯ ಗಾತ್ರವನ್ನು ಹಿಂದಿಕ್ಕಿದ್ದು, 4.18 ಟ್ರಿಲಿಯನ್ ಡಾಲರ್ (ಸರಿಸುಮಾರು ರೂ.375 ಲಕ್ಷ ಕೋಟಿ) ಆಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಅರ್ಥ ಭಾರತದ ನಯ ವಿಶ್ವದ ನಾಲ್ಕನೆಯ ಅತಿ ದೊಡ್ಡ ಅರ್ಥವ್ಯವಸ್ಥೆ ಎಂದು ಅದು ಹೇಳಿದೆ. ಭಾರತದ ಅರ್ಥ ವ್ಯವಸ್ಥೆಯು ಜರ್ಮನಿಯ ಅರ್ಥ ವ್ಯವಸ್ಥೆಯನ್ನು ಕೂಡ 2030ರ ವೇಳೆಗೆ ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆ ಆಗಲಿದೆ ಎಂದು ತಿಳಿಸಿದೆ.

ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಚೆನ್ನಾಗಿದ್ದು, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಕೇಂದ್ರವು ತಿಳಿಸಿದೆ. 2025–26ನೇ ಸಾಲಿನ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 8.2ರಷ್ಟಾಗಿದೆ. ಇದು ಆರು ತ್ರೈಮಾಸಿಕಗಳಲ್ಲಿನ ಅತಿ ಹೆಚ್ಚಿ ಬೆಳವಣಿಗೆ.

'ಮುಂದಿನ ಎರಡೂವರೆಯಿಂದ ಮೂರು ವರ್ಷಗಳಲ್ಲಿ ಭಾರತದ ಜಿಡಿಪಿ ಗಾತ್ರವು 7.3 ಅಮೆರಿಕನ್ ಡಾಲರ್ (ಸರಿಸುಮಾರು ರೂ.655 ಲಕ್ಷ ಕೋಟಿ) ಆಗುವ ನಿರೀಕ್ಷೆ ಇದೆ' ಎಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಅಮೆರಿಕವು ವಿಶ್ವದ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿದೆ. ಚೀನಾ ಎರಡನೆಯ ಸ್ಥಾನದಲ್ಲಿದೆ.

ದೇಶದ ಮಾರುಕಟ್ಟೆಯಲ್ಲಿ ಜನಸಾಮಾನ್ಯರಿಂದ ಬೇಡಿಕೆಯು ಹೆಚ್ಚಾಗಿರುವುದು ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಮಹತ್ತದ ಪಾತ್ರ ವಹಿಸಿದೆ ಎಂದು ಕೇಂದ್ರವು ಪ್ರತಿಪಾದಿಸಿದೆ.

ಬೇರೆ ಬೇರೆ ಅಂತರರಾಷ್ಟ್ರೀಯ ಸಂಸ್ಥೆಗಳು ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಆಶಾವಾದವನ್ನು ವ್ಯಕ್ತಪಡಿಸಿವೆ ಎಂದು ಹೇಳಿರುವ ಕೇಂದ್ರವು, ಅವು ಜಿಡಿಪಿ ಬೆಳವಣಿಗೆಯ ಬಗ್ಗೆ ಸಿದ್ಧಪಡಿಸಿರುವ ಅಂದಾಜುಗಳನ್ನು ಕೂಡ ಉಲ್ಲೇಖಿಸಿದೆ.

'ದೇಶಕ್ಕೆ ಸ್ವಾತಂತ್ರ್ಯ ದೊರೆತು ನೂರು ವರ್ಷಗಳಾಗುವ 2047ರ ವೇಳೆಗೆ ದೇಶದ ಜನರು ಹೆಚ್ಚಿನ ಆದಾಯವನ್ನು ಪಡೆಯುವಂತೆ ಆಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಸಾಧಿಸಲು ದೇಶವು ಸುಧಾರಣೆಗಳನ್ನು, ಸಾಮಾಜಿಕ ಪ್ರಗತಿಯನ್ನು ನೆಚ್ಚಿಕೊಂಡಿದೆ' ಎಂದು ಪ್ರಕಟಣೆಯು ವಿವರಿಸಿದೆ.

ಹಣದುಬ್ಬರ ಪ್ರಮಾಣವು ನಿಗದಿತ ಮಟ್ಟಕ್ಕಿಂತ ಕಡಿಮೆ ಇದೆ. ನಿರುದ್ಯೋಗ ದರವು ಕಡಿಮೆ ಆಗುತ್ತಿದೆ, ರಫ್ತು ಪ್ರಮಾಣ ಸುಧಾರಿಸುತ್ತಿದೆ ಎಂದು ಅದರಲ್ಲಿ ಹೇಳಲಾಗಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:31.12.2025

# ಭಾಗ–9

# ಪ್ರಮುಖ ಲೇಖನಗಳು

## 1. ಏಕತೆಯ ಶಕ್ತಿ: ಜಯಪ್ರಕಾಶ್ ನಾರಾಯಣ್

1902ರ ಅಕ್ಟೋಬರ್ 11ರಂದು, ಬಿಹಾರದ ಧರ್ಮ, ಸಂಸ್ಕೃತಿ ಮತ್ತು ಜ್ಞಾನಭೂಮಿಯಲ್ಲಿ ಗಂಗಾ ಮತ್ತು ಘಾಘ್ರ ನದಿಗಳ ಸಂಗ್ರಮದಲ್ಲಿರುವ ಸಿತಾಬ್ಧಿಯಾದ ಎಂಬ ಗ್ರಾಮದಲ್ಲಿ ಪ್ರಜಾಪ್ರಭುತ್ವದ ಪ್ರತಿಪಾದಕರಾದ ಲೋಕನಾಯಕ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಜನಿಸಿದರು. ಈ ವರ್ಷ ಸಂಪೂರ್ಣ ಕ್ರಾಂತಿ'ಯ ಈ ಹರಿಕಾರರ 123ನೇ ಜಯಂತಿಯನ್ನು ನಾವು ಆಚರಿಸುತ್ತಿದ್ದೇವೆ. 'ಜೆಪಿ' ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಅವರು, ತಮ್ಮ ಬಗ್ಗೆ ಎಂದಿಗೂ ಯೋಚಿಸದೇ ದೇಶದ ಬಡವರನ್ನೇ ತಮ್ಮ ಮೊದಲ ಆದ್ಯತೆಯಾಗಿರಿಸಿಕೊಂಡಿದ್ದ ಒಟ್ಟು ಶ್ರೇಷ್ಠ ರಾಜನೀತಿಜ್ಞರಾಗಿದ್ದರು ಅವರಿಗೆ ಲೋಕನಾಯಕ ಎಂಬ ಬಿರುದನ್ನು ಯಾವುದೇ ಮಹಾನ್ ವ್ಯಕ್ತಿ ನೀಡಿಲ್ಲ. ಇದನ್ನು 1974ರ ಜೂನ್ 5ರಂದು ಪಟನಾದ ಗಾಂಧಿ ಮೈದಾನದಲ್ಲಿ ಒಟ್ಟುಗೂಡಿದ್ದ ಲಕ್ಷಾಂತರ ಭಾರತೀಯರು ಪ್ರೀತಿಯಿಂದ ನೀಡಿದರು. ಈ ದಿನದಂದು, ಅವರ ಜೀವನ ಮತ್ತು ತತ್ವಗಳನ್ನು ಬಿಂಬಿಸುವ ಈ ಲೇಖನದ ಮೂಲಕ ನಾನು ಮಹಾನ್ ನಾಯಕನಿಗೆ ನನ್ನ 'ನಮನ'ಗಳನ್ನು ಸಲ್ಲಿಸುತ್ತೇನೆ.

ಸೀತಾಬ್ಬಿಯಾರದಲ್ಲಿನ ಲೋಕನಾಯಕರ ಆರಂಭಿಕ ಸಾಧಾರಣ ಜೀವನವು, ಬಡವರ ದಿನನಿತ್ಯದ ಬವಣೆಗಳು ಮತ್ತು ಜೀವನಶೈಲಿಗೆ ಅವರು ಸದಾ ಬದ್ಧರಾಗಿರಲು ಸಹಾಯ ಮಾಡಿತು. ಅಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ನಂತರ, ಪಟನಾದಲ್ಲಿನ ವಿದ್ವತ್‌ಪೂರ್ಣ ಮತ್ತು ತೀವ್ರ ರಾಷ್ಟ್ರೀಯತೆಯ ವಾತಾವರಣವು ಅವರಲ್ಲಿ ದೇಶಪ್ರೇಮದ ಬೀಜಗಳನ್ನು ಬಿತ್ತಿತು. ಅವರು ಇಂಟರ್‌ಮೀಡಿಯೆಟ್ ಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ, ಬ್ರಿಟಿಷರ ವಿರುದ್ಧ ಭಾರತದಾದ್ಯಂತ ವ್ಯಾಪಿಸುತ್ತಿದ್ದ ಅಹಿಂಸಾತ್ಮಕ ಅಸಹಕಾರ ಚಳುವಳಿಯ ಘೋಷಣೆಗಳು ಅವರ ಮೇಲೆ ಅತಿದೊಡ್ಡ ಪ್ರಭಾವ ಬೀರಿದವು. ಪರಿಣಾಮವಾಗಿ ಅವರು ಎಲ್ಲಾ ಐಷಾರಾಮಗಳನ್ನೂ ತ್ಯಜಿಸಿ ಸಂಪೂರ್ಣ ಸ್ವದೇಶಿಯಾದರು.

ಅಮೆರಿಕದಲ್ಲಿ 7 ವರ್ಷ ವಿದ್ಯಾಭ್ಯಾಸ ಮಾಡುವಾಗ, ಅವರು ಮಾರ್ಕ್ಸ್‌ವಾದದತ್ತ ಆಕರ್ಷಿತರಾದರು. ಆ ಹೊತ್ತಿಗೆ, ಭಾರತದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಮಾರ್ಕ್ಸ್‌ವಾದಲ್ಲಿಯೇ ಇದೆ ಎಂದು ಅವರು ನಂಬಿದ್ದರು. ಆದರೆ, ಭಾರತಕ್ಕೆ ಮರಳಿ, ಮಾರ್ಕ್ಸ್‌ವಾದದ ಸಿದ್ಧಾಂತವನ್ನು ಭಾರತೀಯ ಸನ್ನಿವೇಶಕ್ಕೆ ಅಳವಡಿಸುವ ಕಾರ್ಯಸಾಧ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಮೇಲೆ, ಪ್ರಜಾಸತಾತ್ಮಕ ಸಮಾಜವಾದ ಮತ್ತು ಸರ್ವೋದಯವೇ ನಮ್ಮ ದೇಶದ ಸಮಸ್ಯೆಗಳಿಗೆ ನಿಜವಾದ ಔಷಧ ಎಂಬ ಅರಿವು ಅವರಿಗಾಯಿತು. ಜೆ.ಪಿ.ಯವರ ಈ ಪ್ರಾಯೋಗಿಕ ಮತ್ತು ದೂರದೃಷ್ಟಿಯ ಚಿಂತನೆ, ಅವರ ವಿವೇಕ ಮತ್ತು ರಾಜನೀತಿಜ್ಞತೆಗೆ ಸಾಕ್ಷಿಯಾಗಿದೆ. ಅವರ ಜೀವನದ ಈ ನಿರ್ಣಾಯಕ ಘಟ್ಟವು. ಅವರು ಕೇವಲ ಸಿದ್ಧಾಂತಗಳ ಬೆಂಬಲಿಗರಾಗಿರಲಿಲ್ಲ, ಬದಲಿಗೆ ಸಮಾಜದಲ್ಲಿ ಪರಿವರ್ತನೆ ಮತ್ತು ನೈಜ ಬದಲಾವಣೆಯನ್ನು ತರಲು ಬಯಸಿದ ನಿಜವಾದ ನಾಯಕರಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ಸಾರುತ್ತದೆ.

1952ರಲ್ಲಿ ವಿನೋಬಾ ಭಾವೆಯವರ ಭೂದಾನ ಚಳವಳಿಯನ್ನು ಸರ್ವೋದಯ ತತ್ವದೊಂದಿಗೆ ಸಂಯೋಜಿಸಿದರೆ, ಭಾರತದ ಜ್ವಲಂತ ಭೂಸಮಸ್ಯೆಗೆ ವಾಸ್ತವಿಕ ಪರಿಹಾರ ಸಿಗಲಿದೆ ಎಂಬುದನ್ನು ಅವರು ಮನಗಂಡರು. 1954–1973ರ ಅವಧಿಯಲ್ಲಿ ಅವರು ಕೈಗೊಂಡ ಚಂಬಲ್ ಕಣಿವೆಯ ದರೋಡೆಕೋರರ ಪುನರ್ವಸತಿ ಮತ್ತು ಅಹಿಂಸಾತ್ಮಕ ಸಂಪೂರ್ಣ ಕ್ರಾಂತಿಯಂಥ ಉಪಕ್ರಮಗಳನ್ನು ಜಾಗತಿಕವಾಗಿ ಗುರುತಿಸಿ ಗೌರವಿಸಲಾಗಿದೆ. ನಿರ್ದಿಷ್ಟವಾಗಿ ಭಾರತಕ್ಕೆ ಮತ್ತು ಸಾಮಾನ್ಯವಾಗಿ ಸಮಸ್ತ ಮಾನವಕುಲಕ್ಕೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಶಾಂತಿಯನ್ನು ತಂದುಕೊಡಬೇಕೆಂದು ಅವರು ನಿರಂತರವಾಗಿ ತುಡಿಯುತ್ತಿದ್ದರು.

ಅವರ 'ಶ್ರಮದ ಘನತೆ'ಯ ಪರಿಕಲ್ಪನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರಲಿಲ್ಲ, ಬದಲಾಗಿ ಅದು ಸ್ವಂತ ಅನುಭವದಿಂದ ಬಂದಿತ್ತು. ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅವರು 'ಕಲಿಯುತ್ತಲೇ ಗಳಿಸಬೇಕಾದ' ಅನಿವಾರ್ಯತೆಗೆ ಸಿಲುಕಿದ್ದರು ಮತ್ತು ತಮ್ಮ ವಿದ್ಯಾಭ್ಯಾಸದ ಖರ್ಚಿಗಾಗಿ

ಹಲವು ಬಗೆಯ ಸಣ್ಣಪಟ್ಟ ಕೆಲಸಗಳನ್ನು ಮಾಡಿದ್ದರು. ಈ ಅನುಭವಗಳು ಕಾರ್ಮಿಕ ವರ್ಗದ ಸಮಸ್ಯೆಗಳ ಕುರಿತು ಅವರಿಗೆ ಆಳವಾದ ಒಳನೋಟವನ್ನು ನೀಡಿದವು. ಪ್ರಾಮಾಣಿಕ ದುಡಿಮೆಗೆ ಗೌರವ, ನ್ಯಾಯಯುತ ವೇತನ ಮತ್ತು ಮಾನವೀಯ ಕೆಲಸದ ವಾತಾವರಣ ಸಿಗಲೇಬೇಕು ಎಂಬ ಅವರ ನಂಬಿಕೆಯನ್ನು ಇದು ಮತ್ತಷ್ಟು ದೃಢಗೊಳಿಸಿತು. ಕೈಗಾರಿಕಾ ಸಮಾಜಗಳು ಸಮೃದ್ಧಿಯಿಂದ ಮೆರೆಯುತ್ತಿದ್ದರೂ ದುಡಿಯುವ ವರ್ಗ ಮಾತ್ರ ಬಡತನದಲ್ಲಿಯೇ ಬದುಕು ಸವೆಸುತ್ತಿರುವುದನ್ನು ಅವರು ಕಂಡರು. ಭಾರತಕ್ಕೆ ಮರಳಿದಾಗ, 'ನ್ಯಾಯಪರ ಸಮಾಜದ ಅಡಿಪಾಯವು ದುಡಿಯುವ ವರ್ಗದ ಕಲ್ಯಾಣದ ಮೇಲೆಯೇ ನಿಂತಿರಬೇಕು' ಎಂಬ ದೃಢ ಸಂಕಲ್ಪವನ್ನು ತಮ್ಮೊಂದಿಗೆ ಹೊತ್ತು ತಂದರು. ಇದಕ್ಕೆ ಪೂರಕವಾಗಿ, 1947ರಲ್ಲಿ ಅವರು 3 ಪ್ರಮುಖ ಅಖಿಲ ಭಾರತ ಕಾರ್ಮಿಕ ಸಂಘಟನೆಗಳಾದ ಅಖಿಲ ಭಾರತ ರೈಲ್ವೇಮನ್ ಫೆಡರೇಷನ್, ಅಖಿಲ ಭಾರತ ಅಂಚೆ ಮತ್ತು ಟೆಲಿಗ್ರಾಫ್ ಕೆಳದರ್ಜೆ ನೌಕರರ ಸಂಘ ಹಾಗೂ ಅಖಿಲ ಭಾರತ ಆರ್ಡಿನೆನ್ಸ್ ಫ್ಯಾಕ್ಟರಿ ಕಾರ್ಮಿಕರ ಸಂಘಗಳ ಅಧ್ಯಕ್ಷರಾಗಿ ಆಯ್ಕೆಯಾದರು.

ಜಯಪ್ರಕಾಶರ ಕಾರ್ಯಯಾತ್ರೆ ಕೇವಲ ಸ್ವಾತಂತ್ರ್ಯ ಚಳವಳಿಗೆ ಸೀಮಿತವಾಗಿರಲಿಲ್ಲ. ಅಧಿಕಾರದ ಆಸೆ ಅವರನ್ನು ಎಂದಿಗೂ ಸೆಳೆಯಲಿಲ್ಲ, ಬದಲಾಗಿ ಜನಸೇವೆಯಲ್ಲಿಯೇ ತೊಡಗಿಸಿಕೊಳ್ಳಲು ಅವರು ಸದಾ ತುಡಿಯುತ್ತಿದ್ದರು. 1960ರ ದಶಕದಲ್ಲಿ, ಮುಂಗಾರು ಕೈಕೊಟ್ಟಿದ್ದರಿಂದ ಬಿಹಾರವು ಭೀಕರ ಬರಗಾಲದ ದವಡೆಗೆ ಸಿಲುಕಿತ್ತು. ಆಗ ಅವರು, ಭೂದಾನ ಚಳವಳಿಯ ತಮ್ಮ ಸಹವರ್ತಿಗಳು ಮತ್ತು ಅನುಯಾಯಿಕಳೊಂದಿಗೆ ಸೇರಿ, ಜನರ ಸಂಕಷ್ಟವನ್ನು ನೀಗಿಸಲು ಪರಿಹಾರ ಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. 'ಬಿಹಾರ ರಾಹತ್ ಸಮಿತಿಯ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾಗ, ಆರೆಸ್ಸೆಸ್ ಸ್ವಯಂಸೇವಕರ 'ರಾಷ್ಟ್ರಸೇವಾ ಮನೋಭಾವವನ್ನು ಹತ್ತಿರದಿಂದ ಕಂಡು, ಅವರ ಕಾರ್ಯತತ್ಪರತೆಯಿಂದ ಪ್ರಭಾವಿತರಾದರು.

ಬದುಕಿನ ಸರ್ವಕ್ಷೇತ್ರಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವುದನ್ನು ಕಂಡ ಲೋಕನಾಯಕರಿಗೆ ಭಾರತೀಯ ಸಮಾಜದ ಪುನರುಜ್ಜೀವನ ಪುನರ್‌ನಿರ್ಮಾಣಕ್ಕೆ ಮುನ್ನುಡಿ ಬರೆಯಲು ದೇಶದ ಯುವಜನೆಯನ್ನು ಪ್ರೇರೇಪಿಸಬೇಕಾದ ಅನಿವಾರ್ಯತೆ ಮನದಟ್ಟಾಯಿತು. ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆಯೇ ಜನರು ನಂಬಿಕೆ ಕಳೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಈ ಚಳವಳಿಯ ಮೂಲಕ ಅವರು ಪ್ರಜಾಪ್ರಭುತ್ವದ ಶಕ್ತಿಯಲ್ಲಿ ಜನರ ಭರವಸೆಯನ್ನು ಮರುಸ್ಥಾಪಿಸಿದರು. 1973ರಲ್ಲಿ ವಿನೋಬಾ ಭಾವೆಯವರ ಪವನಾರ್ ಆಶ್ರಮದಿಂದ ಅವರು 'ಸಂಪೂರ್ಣ ಕ್ರಾಂತಿ'ಯ ಕಹಳೆ ಮೊಳಗಿಸಿದರು. ಈ ಚಳವಳಿಯ ಅಂತಿಮ ಧ್ಯೇಯವು. ಮಾನವೀಯ ಮೌಲ್ಯಗಳನ್ನೊಳಗೊಂಡ ಆದರ್ಶ ಸಮಾಜವನ್ನು ನಿರ್ಮಿಸುವುದಾಗಿತ್ತು. ಅಂದಿನ ರಾಜಕೀಯದಲ್ಲಿ ಆಳವಾಗಿ ಬೇರೂರಿದ್ದ ಭ್ರಷ್ಟಾಚಾರದ ವಿರುದ್ಧದ ಅವರ ಅವಿರತ ಧ್ವನಿಯು, ಪ್ರಜಾಪ್ರಭುತ್ವದಲ್ಲಿ 'ಜನಶಕ್ತಿ'ಯನ್ನು ಮರುಸ್ಥಾಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು. ಜನರನ್ನು ಒಗ್ಗೂಡಿಸಿ, ಅವರ ಆಕ್ರೋಶಕ್ಕೆ ಒಂದು ದಿಕ್ಕು ತೋರಿ, 1977ರಲ್ಲಿ ಭಾರತದಲ್ಲಿ ಒಂದು ಹೊಸ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಿದ ಅವರ ಸಾಮರ್ಥ್ಯ ಅದ್ಭುತವಾದದ್ದು. ಪ್ರಜಾಪ್ರಭುತ್ವವೆಂದರೆ ಜನರ ಮೇಲೆ ಅಧಿಕಾರ ಚಲಾಯಿಸುವುದಲ್ಲ, ಅದು ಜನಸಾಮಾನ್ಯರ ಧ್ವನಿ ಯಾಗಬೇಕು ಎಂಬುದನ್ನು ಅವರು ಈ ಚಳವಳಿಯಲ್ಲಿ ಸಾರಿದರು.

ನಾನು 19 ವರ್ಷದ ಯುವಕನಾಗಿದ್ದಾಗ, ಕೊಯಮತ್ತೂರಿನ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ 'ಸಂಪೂರ್ಣ ಕ್ರಾಂತಿ' ಚಳವಳಿಯಲ್ಲಿ ಅಳಿಲುಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ, ಭಾರತದ ಇತಿಹಾಸದ ಆ ನಿರ್ಣಾಯಕ ಘಟ್ಟದಲ್ಲಿ, ಈ ಚಳವಳಿಯಲ್ಲಿದ್ದಾಗ ಕಲಿತ ಪಾಠಗಳು, ನನ್ನನ್ನು ಒಬ್ಬ ಸಾಮಾನ್ಯ ಯುವಕನಿಂದ ಆತ್ಮವಿಶ್ವಾಸವುಳ್ಳ, ಸಾಮಾಜಿಕ ಪ್ರಜ್ಞೆಯುಳ್ಳ ನಾಯಕನಾಗಿ ಪರಿವರ್ತಿಸಿದವು. ಈ ಚಳವಳಿಯು ನನ್ನಲ್ಲಿ ಪ್ರಬುದ್ಧತೆ, ನೈತಿಕ ವಿವೇಚನೆ ಮತ್ತು ನಾಗರಿಕ ಪ್ರಜ್ಞೆಯಂಥ ನಾಯಕತ್ವದ ಗುಣಗಳನ್ನು ಪೋಷಿಸಿತು.

ಜಯಪ್ರಕಾಶ್‌ರನ್ನು ಇಂದು ನಾವು ಸ್ಮರಿಸುತ್ತಿರುವಾಗ ಅವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರ ಅಚಲ ಬೆಂಬಲವನ್ನು ಮರೆಯುವಂತಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಮ್ಮನ್ನು

ಸಮರ್ಪಿಸಿಕೊಳ್ಳುವುದಕ್ಕಾಗಿ ಅವರು ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದ್ದರು ತಮ್ಮ ಸಂಪೂರ್ಣ ಶಕ್ತಿಯನ್ನು ಗಾಂಧಿಯವರ ಆದರ್ಶಗಳನ್ನು ಪಾಲಿಸುವುದಕ್ಕಾಗಿಯೇ ಮುಡಿಪಾಗಿಟ್ಟಿದ್ದರು.

1942ರ 'ಚಲೇಜಾವ್ ಚಳವಳಿ'ಯಿಂದ ಹಿಡಿದು 1970ರ ದಶಕದಲ್ಲಿ ಅವರು ಮುನ್ನಡುವ 'ಸಂಪೂರ್ಣ ಕ್ರಾಂತಿ'ಯವರೆಗೆ, ಅವರನ್ನು ಸದಾ ಮುನ್ನಡೆಸಿದ ವಿಕೈಕ ಬಾಲು 'ಶಕ್ತಿ ಎಂದರೆ ಆಚಲ ದೇಶಪ್ರೇಮ, ಸರಕಾರದಲ್ಲಿ ತಮಗೆ ಬೇಕಾದ ಯಾವುದೇ ಉನ್ನತ ಹುದ್ದೆಯನ್ನು ಅಲಂಕರಿಸುವ ಅವಕಾಶವಿದ್ದರೂ ಅವರು ಅಧಿಕಾರದ ಆಸೆಗೆ ಬಲಿಯಾಗದೆ, ರಾಷ್ಟ್ರಸೇವೆಗಾಗಿಯೇ ಸಮರ್ಪಿಸಿಕೊಂಡಿದ್ದರು. ಬಡವರು, ದೀನದಲಿತರ ಉನ್ನತಿಗಾಗಿ ಅವರಲ್ಲಿದ್ದ ತ್ಯಾಗ ಮನೋಭಾವ ಅನನ್ಯವಾದುದು.

ಸವಾಲುಗಳು ಎಷ್ಟೇ ದುಸ್ತರವಾಗಿದ್ದರೂ ಜನ ಶಕ್ತಿಯು ಎಂಥ ಬದಲಾವಣೆಯನ್ನು ಬೇಕಾದರೂ ತರಬಲ್ಲದು ಎಂಬುದಕ್ಕೆ ಜಯಪ್ರಕಾಶರ ಜೀವನ–ಬೋಧನೆಗಳೇ ಸಾಕ್ಷಿ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸುವುದಕ್ಕೆ, ಸಮಾನತೆ, ನ್ಯಾಯ ಹಾಗೂ 1 ಶಾಂತಿಯಿರುವ ಸಮಾಜದ ನಿರ್ಮಾಣಕ್ಕೆ ಶ್ರಮಿಸುವುದಕ್ಕೆ ಅವರ ಬೋಧನೆಗಳು ಒತ್ತು ನೀಡುತ್ತವೆ. 'ಸಾಮಾಜಿಕ ಮತ್ತು ಆರ್ಥಿಕ ನ್ಯಾಯದಿಂದ ರಾಜಕೀಯ ಸ್ವಾತಂತ್ರ್ಯವನ್ನು ಬೇರ್ಪಡಿಸಲಾಗದು ಎಂದು ಘೋಷಿಸಿದ ಅವರು ಒಬ್ಬ ದಾರ್ಶನಿಕ ನಾಯಕರಾಗಿದ್ದರು. ಅವರ ಬೋಧನೆಗಳು ರಾಜಕಾರಣೆಗಳಿಗಷ್ಟೇ ಅಲ್ಲ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಮತ್ತು ಸಮಾನತೆಯ ಆದರ್ಶಗಳಲ್ಲಿ ನಂಬಿಕೆಯಿಟ್ಟ ಪ್ರತಿಯೊಬ್ಬ ಭಾರತೀಯರಿಗೂ ಸ್ಫೂರ್ತಿಯ ಸೆಲೆಯಾಗಿವೆ.

'ಕ್ರಾಂತಿ'ಯನ್ನು ಸಾಮಾನ್ಯವಾಗಿ ಹಿಂಸೆಯ ಪ್ರತಿರೂಪ ಎಂದೇ ಭಾವಿಸಲಾಗುತ್ತದೆ. ಆದರೆ, ಜಯಪ್ರಕಾಶರು ಮುನ್ನಡೆಸಿದ 'ಸಂಪೂರ್ಣ ಕ್ರಾಂತಿ'ಯು ಅಹಿಂಸಾ ಮಾರ್ಗವನ್ನು ಆಧರಿಸಿತ್ತು. ಅಹಿಂಸಾತ್ಮಕ ಜನಾಂದೋಲನದ ಮೂಲಕವೇ, ವ್ಯವಸ್ಥೆ ಮತ್ತು ಸಮಾಜದೊಳಗೆ ಮಾನವೀಯತೆ ಹಾಗೂ ನೈತಿಕ ಮೌಲ್ಯಗಳ ಮೇಲೆ ಪ್ರಗತಿ ಹೊಂದುವಂಥ ಭಾರತದ ನಿರ್ಮಾಣಕ್ಕೆ ಅವರು ಅಡಿಪಾಯ ಹಾಕಿದರು. ಈ ಮಹಾನ್ ಚೇತನವನ್ನು ಪ್ರೀತಿಯಿಂದ ಸ್ಮರಿಸುತ್ತಾ, ಗೌರವ ನಮನಗಳನ್ನು ಸಲ್ಲಿಸುವ ಈ ಸಂದರ್ಭದಲ್ಲಿ, ಅವರು ರಕ್ಷಿಸಿದ ಪ್ರಜಾಪ್ರಭುತ್ವದ ಜಾಗೃತ ಕಾವಲುಗಾರರಾಗಿರಲು ಪ್ರತಿಜ್ಞೆ ಮಾಡೋಣ ನಮ್ಮ ಆತ್ಮಸಾಕ್ಷಿಯನ್ನು ಜಾಗೃತಗೊಳಿಸಿ, ನಿಸ್ವಾರ್ಥ ಸೇವೆ ಮತ್ತು ಸತ್ಯದ ಮಾರ್ಗದಲ್ಲಿ ಭಾರತದ ಉನ್ನತಿಗಾಗಿ ಶ್ರಮಿಸುವುದೇ ನಾವು ಈ ದಿನದಂದು ಅವರಿಗೆ ಸಲ್ಲಿಸಬಹುದಾದ. ನಿಜವಾದ ಶ್ರದ್ಧಾಂಜಲಿ, ರಾಷ್ಟ್ರ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆಗಳಿಗಾಗಿ, ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು, ಆದರೆ ಈ ಮಹಾನ್ ಚೇತನಕ್ಕೆ ಆ ಗೌರವವೂ ತೀರಾ ಕಡಿಮೆಯೆಂದೇ ನನ್ನ ಭಾವನೆ, ಏಕೆಂದರೆ, ಅವರು ನಿಜಕ್ಕೂ 'ಭಾರತ ರತ್ನ'ವಾಗಿದ್ದರು.

(**ಲೇಖಕರು:**ಸಿ.ಪಿ.ರಾಧಾಕೃಷ್ಣನ್, ಭಾರತದ ಉಪರಾಷ್ಟ್ರಪತಿಗಳು)

**ಆಧಾರ:ವಿಶ್ವವಾಣಿ,** ದಿನಾಂಕ:11.10.2025

## 2. A Wider SIR had momentum but it is still a test case

The special Intensive Revision(SIR) of electoral rolls has now rolled into another batch of States and Union Territories after creating a new electoral roll in Bihar, a State which is now in the midst of its elections. The Election Commission of India (ECI) ordered SIR in nine States and three Union Territories, as part of a staggered pan-India exercise, began on November 4, 2025. Being held in Tamil Nadu, West Bengal, Kerala, Uttar Pradesh, Madhya Pradesh, Rajasthan, Chhattisgarh, Goa, Gujarat and the Union Territories of the Andaman and Nicobar Islands, Lakshadweep and Puducherry, this phase includes some States which go to the polls next year, but

excludes Assam (also poll-going), where issues of citizenship are on a different legal track.

The post-enumeration draft roll will be released on December 9, while the final roll will be released on February 7, 2026. This is only the ninth SIR in India's 75year old electoral history and the first one after 21 years. In June 2025, the ECI had decided to commence intensive revision 'in the entire country', also confirming that the schedule for all States 'shall be issued separately' after dealing with the immediate demands of Bihar. The ECI has ordered the respective governments to provide the workforce for SIR operations and not shift any officials connected with SIR work.

Under this SIR, 51 crore electors will be brought under intensive review more than half the country's total electorate, spreading over 321 districts and 1,843 Assembly constituencies. It will involve 5.33 lakh polling stations and an equal number of Booth Level Officers (BLOs) and over 7.64 lakh booth level agents of political parties  a number which should see an upsurge as parties would be keen to safeguard their interests.

No two elections in India's long history of 18 national and over 400 Assembly elections were the same. This applies equally to the SIR in terms of upcoming challenges. The current ruling dispensations in Tamil Nadu and Kerala have taken a dim view of the SIR. The responses from West Bengal, with 7.7 crore electors, have been more combative; it is also a State with a large number of constituencies bordering Bangladesh, where the issues of infiltration and citizenship are in focus. Uttar Pradesh, with 15.44 crore electors, and social complexities will not be a cakewalk either. The burden of migrations that electoral roll managers faced in Bihar does not hold true in other States. The efficiency of past summary revisions could differ from State to State, determining the quantum of the task. A statutory process such as a SIR has a certain uncompromising standardisation, but procedures may still require local customisation.

Bihar was a tough assignment being the first SIR exercise after two decades, and which saw protests and doubts. The foundational lines have been drawn now. Article 326 of the Constitution that defines an elector is getting highlighted as an equal truth as Article 324 in running elections. A SIR is legitimate but genuine electors need to be facilitated using a time frame that is adequate.

Transparency levels should satisfy citizen and political party. The clear order from the ECI, that "No document is to be collected from electors during the Enumeration Phase", should be a respite for millions of ordinary voters who are apprehensive the moment the word 'document' is mentioned. The draft roll will include all those whose signed enumeration forms, further rationalised and partly prefilled, are received.

Only those electors whose names could not be matched/linked with previous SIR will be notified and heard before the registration official who decides on either inclusion or exclusion. Three visits to the house of each elector by the BLO is reassuring. The familiar Form 6 for new enrolment, Form 7 for deletion and Form 8

for correction will remain in place. Critics of the SIR have reasons to be satisfied with the modifications they could orchestrate; they should walk the next steps without grudge or imaginary fear.

Electoral roll management, largely a technical exercise, becomes cluttered when it becomes an echo chamber for issues such as infiltration or disenfranchisement that are hyped. The SIR is essentially a clean up exercise. The pan-India picture will hopefully not cause any shock this time. The bulk of exclusion will always come from death, absence, shifting or duplication. The SIR method is different but complementary to the ECI's innovative efforts in a mobilisation of voters for registration and turnout in recent years. Voter turnout in the first phase of the Bihar election has proved this. The Supreme Court of India and other stakeholders have been concerned that the right of any voter should not be denied while trimming the flab. Under the SIR, BLOs have been specially directed to have at least 30 blank forms to facilitate the enrolment of new voters.

The SIR is a fait accompli and is past debate. An electoral roll that has been intensely revised is now a reality right up to polling day and the polling compartment. Political parties have changed their tune. From the 'Stop SIR' call. political parties are moving to make the best out of the exercise, even if they maintain their ideological opposition to it and still explore legal remedies. If parties in Tamil Nadu, Kerala and West Bengal have genuine fears about the exclusion of eligible people even as they go ahead with poll preparation, they need to act. They need to participate in the implementation of the SIR and make use of the decentralised structure of checks and balances and grievance mitigation.

More than the Supreme Court's sanction of the legitimacy of the SIR process, it is the 'zero appeals;' in the Bihar process and field-level collaboration seen by party functionaries (notwithstanding political statements at the top) which will make election managers feel more confident in taking the SIR forward. When asked about possible resistance from States such as West Bengal, the Chief Election Commissioner, Gyanesh Kumar, pointed to the architecture of constitutional roles and duties and hoped for its seamless working.

While the fundamentals of the SIR have been validated, there will be hurdles in the execution in scale. It is here that the ECI will need to show skill and empathy. The ECT's legacy of competence demands that it should work continuously to uphold the trust of voters. It won. the trial in Bihar and the new pan-India SIR will be another test case.

**Author:Akshay Rout**

**Courtesy:**Hindu, Dated:08.11.2025

## 3. The lower judiciary-litigation

A Constitution Bench of the Supreme Court of India, headed by the Chief Justice of India, recently linked the sense of stagnation in the subordinate judicial

service to prolonged litigation and the huge pendency in India's courts. According to the National Judicial Data Grid, there are 4,60 crore cases pending in district courts. Another Bench of the Court has asked judges in Delhi to undergo training due to a lack of basic knowledge.

There are a few options to make changes in the administration of justice. The Code of Civil Procedure and the Civil Rules of Practice contemplate procedures to be followed by courts in entertaining proceedings, issuing summons to the defendants, and for the appearance of parties. Subordinate judges handle this. They are forced to call every suit for the appearance of parties or order the issue of fresh summons and receive vakalathnamas. This takes up much time in the morning, leaving judges with very little time for the disposal of cases on merits. In most subordinate courts, the calling of cases goes on from 10.30 a.m. till well past noon. Quality time is lost by attending to such clerical and ministerial work.

A judicial officer in the lowest rank in hierarchy can be appointed in every district court to call all the cases of that particular cadre of courts (senior civil judges or civil judges or district munsifs, as the case may be). This court can do ministerial work the whole day and can also be assigned with the power to record exparte evidence, issue of summons, receiving vakalath and written statements. At the end of the day, this court can list matters for trial and arguments the following day in each court. This list can be posted on the website in the evening.

The cases can be taken up, as in this list, from 10.30 a.m. every day by each court, and these courts can dispose of matters listed till evening. Even if some matters are adjourned, the orders can be still dictated, thus helping in judgements and case disposal.

The subordinate judiciary, its quality There was a time wilen lawyers who practised law under the tutelage of a reputed lawyer in any branch of law, with at least 10 years of experience in the bar, used to be appointed district munsif/magistrates. Lawyers with more experience may also qualify after appearing for examinations for direct recruitment as district judges.

But now, judges are appointed without any experience and find it difficult to cope with the workload. In many cases, there are a number of judges who do not even pass orders as they are not equipped. Therefore, every civil judge or senior civil judge who is appointed must undergo training with different High Court Benches for a few months and observe how a High Court functions, how High Court judges hear matters, interact with lawyers, go through the judgments cited and study how orders are passed. This work culture by observation is a step that will definitely improve the working of the subordinate judge Jadiciary

Whenever a statute is passed, new provisions are introfooed, purportedly for the quick disposal of cases. But, in many cases, resalta are not achieved for expedicions diepool. On the contrary, there is a negative impact.

A typical example is Section Dial of the Commercial Courts Act and its provisions making pre suit mediation marsdatory. The Supreme Court, while interpreting Section2ta), has hekl, in Patil Automatikis Rakheja Engineers CXX22 (7) MLJ 1391, that this provision is mandatory and that the plaint is liable to be rejected without pre sait mediation. In commercial cases, parties who are in business would have already exchanged notices. Only where eu hange of notices do not resalt in settlement, do they resort to a legal proceeding in court. Therefore, at the time of fling the suit, it would be known where the matter is headed. So, where is the need to make mediation mandatory and direct the plaintiff to exhaust the remedy of mediation before filing the daim?

Another example is the six month cooling-off period in marriage laws in filing for consent divorce. The parties concerned often want the disposal of the case within this period, Once a couple decides to separate on mutual terms, a pertinent issue is on whether they should be forced to wait for six months. Some courts do not allow this cooling off period to be dispensed with, leading to further proceedings and pendency. It is not known if it is wise to have a one-year separation in filing a mutual consent petition, while the same is not applicable in a contested petition. An untrue declaration is made by the parties-making it out as if they have been separated for more than one year to move a petition. Some of these provisions result in pendency and also the litigant facing frustration.

A third example is the new Rent Act. There is enough confusion already as to whether the absence of a written registered lease can vest the rent court with jurisdiction in conflicting judicial opinion. Armed with the same set of facts, one can approach a civil or a commercial court (in the case of commercial lease), but not a rent court. These anomalies could have been avoided had the legislation accepted oral lease as well as delivery of possession recognised by the Transfer of Property Act, as before. In the case of the lease of residential properties and small apartments, parties do not want to spend on stamp duty and registration fee for lease. The nebulous state of affairs created through statute is another reason for pendency in courts.

A number of provisions in the Code of Civil Procedure have also become a tool for some litigants to delay proceedings. These provisions are misused for which there are many examples. For instance, why should there be a preliminary decree and final decree in a partition action? Why cannot one decree be passed dividing the properties or order sale under the Partition Act soon after the posting of the decree?

Even if two decrees are contemplated, why should not the final decree proceeding be an automatic continuation of the preliminary decree, without a fresh application casing delay? Similarly, execution proceedings are not easily terminated because of many provisiones under Order XXI of the Code which can be used by the judgment debtors to delay the process of execution. For example, why should there be 106 rules under Order XXI, many of which are hyper technical?

Unless drastic steps are taken to modify the procedure and compel parties to provide ways and means to satisfy the decree if passed in due course leven at the stage of framing and the list of assets by disclosure are made), a citizen will be forced to visit courts for years to realise his decree. This will be his plight in respect of all money claims including arbitration awards passed in his favour. There is a need to simplify the process of the execution of decrees and awards, and it is here that fast track procedure is needed.

What is important is the quick termination of the proceeding and not merely the conduct of trial or further proceedings by way of appeal. The code might have served the purpose when it was passed in 1908, but it is unfortunate that even after amendments in 1976 and 2002, there is still no solution to have the proceedings concluded expeditiously.

An example is the Amendment to Order VIII Rule 1 CPC making it mandatory for a defendant to file a written statement within 90 days (the Plaintiff can gather details for years to file the suit). What happens if the written statement is filed within 90 days? The suit is still not disposed of immediately and the trial takes its own course, especially when the right to appeal is exercised by the aggrieved party. So, why have a time frame only for filing the written statement?

This provision has not helped the cause other than its resulting in slipshod pleadings. While the time frame is fine when it is about money claims, it does not work in title suits.

Pendency and the higher judiciary The issue of there being huge pendency needs to be addressed by the higher judiciary also. The termination of a judicial proceeding within a reasonable time not a hasty approach to a proceeding when it commences or is work in progress is the urgent need.

Solutions to reduce pendency ought to be considered. Unless we give up archaic laws and recruit competent lawyers as judges, we cannot expect the qualitative disposal of cases. Nor will pendency reduce.

The subordinate judiciary should be allowed to function as judges and not be a ministerial court officer ordering the issue of fresh summons, receiving vakalathnama and pleadings, and calling cases and writing notes on the docket for nearly two hours every day.

**Author:P.R.Ramakrishnan**

**Courtesy: T**he Hindu, Dated:18.11.2025

## 4. **CAVILLING OPPN PERILLING DEMOCRACY**

EMOCRACY does not collapse with a bang. It withers in silence when its challengers forget how to fight. The Bihar debacle has not merely cost the opposition a state; It has stripped Indian democracy of a viable opposition. The verdict has come

like a cold slap across the face of the INDIA bloc, not be cause it is unexpected, but because it is humiliating in its clarity. A vast political experiment that promised reinvention has stumbled again into its familiar abyss of disunity and personality battles.

The Bihar election was no routine loss. It exposed the hollowness of the opposition's promise and the absence of a voice that could ignite mass hope. This defeat is not just about one state. It is a signal flare illuminating a larger national tragedy: India currently has no viable opposition capable of countering the mighty BJP. This vacuum is dangerously deepening.

In Bihar, there was no single face, and no coherent message. The message of survival eclipsed the message of change. The BJP did not need to boast about its national strength. Prime Minister Narendra Modi's mesmerising messages and missionary commitment alone dominated the narrative as a mask of order and certainty. It is astonishing because Bihar is a land that once gave India the greatest political uprising against concentrated power during the Emergency. Today, that same land watches parties fight like feral siblings defending shrinking fiefdoms. Leaders who cannot unite their own cadres are dreaming of uniting the nation.

Sadly, the opposition hasn't learnt les sons from the past. There were times when opposition was not built through press conferences and social media outrage, but through blood, prison, sacrifice, and a cause larger than individual ambition. There was a time when Indira Gandhi appeared invincible. Yet opposition emerged not from one party, but from a movement.

Jayaprakash Narayan aged, frail, with no aspiration for office walked into history with nothing but moral courage. He united socialists, communists, conservatives, farmer unions, labour activists, students, and raucous regional chiefs into one stumighty wave that toppled a political empire. Those who joined him were not seeking portfolios. They were staking futures.

Contrast that with today's opposition leaders, many of whom behave more like shareholders of personal political enterprises than custodians of a public cause. Most negotiations in the INDIA bloc are about seats, not mission. The opposition is dividing states by territory, as if national politics is a map for private distribution. Even in defeat, the leaders remain guarded about their turf Parties fear losing relevance more than losing elections.

In the 1980s, when Rajiv Gandhi was swept into power on a wave of sympathy after the assassination of Indira Gandhi, it seemed that no force could challenge the young leader backed by a massive parliamentary majority. Yet V.P Singh rebeller and emerged, not through inheritance or entitlement, but through his stand against corruption. His revolt did not start in back room strategy sessions. He carried with him local titans like Devi Lal and Mulayar Singh Yadav, and farmers who could paralyse highways, and socialist organizer who could fill town squares overnight. Leaders like M Karunanidhi in Tamil Nadu or N'T Rama Rao in Andhra Pradesh, and

Jyoti Basu in West Bengal did not plead for national attention; they commanded it by virtue of popular followings and a pan India appeal. They defended their states fiercely, but were willing to align nationally when it resonated with public need.

Today, no such figures dominate the stage. India politics is plagued with a leadser ship famine. There is leadership, but no He gravity There are slogans, but no spark. The decline of the Left has left a void in ideological discourse. Even where popular parties remain strong, their leaders are insulated by ambition. Mamata Banerjee fights Delhi only when it threatens Kolkata. K Chandrasekhar Rao narrates Telangana pride but refuses to meld it into a broader national democratic project. Akhilesh Yadav guards Uttar Pradesh like an heirloom and avoids larger coalition leadership, The Aam Aadmi Party tries to monopolise its own brand rather than accept a common umbrella. Every leader seeks unity, but under their personal flag.

In this vacuum, the BJP enjoys a monopoly without effort. Its organisational machinery marches without fatigue. Its central face towers above regional leaders and its narrative is simple, consistent, and constantly broadcast: stability, nationalism, development, security. The opposition offers no countervision, only counter commentary

The implications of such dominance are serious. A democracy without a viable opposition risks losing its reflexes. When one party becomes the centre of gravity, institutions deform toward it. Bureaucracy bends. Investigation agencies chase selective targets. Media amplifies power in exchange for access. Economic oligarchies flourish under political monopolies. Social polarisation becomes a convenient instrument, not a last resort. When people no longer see alternatives, they stop demand-ing accountability Leaders begin to be lieve they embody the will of the nation.

India has seen such concentration before, and challenged it before. But challenges did not come from weak alliances stitched for electoral arithmetic. They arose from a moral summons that forced ordinary citizens into collective action. JP was not charismatic in the modern media sense; VP Singh was not a mass orator. What they possessed was legitimacy. They generated trust. Trust turned into momentum, which turned into regime change.

If the opposition today seeks resurrection, it cannot rely on dynastic claims, personality cults, defensive coalitions, grievance rhetoric, or parttime politicians. It must rediscover the spirit of political movement rather than political manage ment. It requires a leader or a collective of leaders whose legitimacy does not depend on position but on sacrifice. Someone who can speak for unemployed youth with authenticity, for marginal farmers with lived empathy, for women, workers, for constitutional institutions facing erosion, and minorities not as voters but as citizens deserving rights.

That leadership must emerge from below, not from drawing rooms or a dynasty. It must be willing to challenge state excess on the streets, not just inside

television studios. It must accept that opposition is not an election strategy; it is a constitutional responsibility. The future of India's opposition depends on whether it can abandon short-term territorial insecurity and cultivate a shared ideological horizon. If it fails, the democratic ecosystem will continue to erode, leaving the BJP and Modi unchallenged as default rulers of Indian destiny India's democracy cannot function on a single epic narrative forever. For the health of a viksit and surakshit Bharat, another narrative must appear: For now, that narrative has no author. Until someone rises with conviction greater than ambition, the story of opposition will remain a story of an avoidable and abominable defeat.

**Author: Prabhu chawla**

**Courtesy:** Indian Express, Dated:23.11.2025

## 5. ಸಂವಿಧಾನವೇ ಜೀವನ ವಿಧಾನ

ಮೈಸೂರಿನಲ್ಲಿ ನಡೆದ 2018–2019ರ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮಾತುಗಳ ಕೊನೆಗೆ, 'ಜೈಹಿಂದ್', 'ಜೈ ಕರ್ನಾಟಕ' ಎನ್ನುವ ಘೋಷಣೆಗಳನ್ನು ಉಚ್ಚರಿಸಿ, ಒಂದೆರಡು ಕ್ಷಣಗಳ ಮೌನದ ನಂತರ 'ಜೈ ಸಂವಿಧಾನ್' ಎನ್ನುವ ಘೋಷವಾಕ್ಯಕ್ಕೆ ವಿಶೇಷ ಒತ್ತು ನೀಡಿ ಉದ್ಗರಿಸಿದರು. ತಕ್ಷಣವೇ ಮುಂದಿನ ಸಾಲಿನಲ್ಲಿ ಕುಳಿತಿದ್ದ ಯುವನಟಿಯೊಬ್ಬರು ತಮ್ಮ ಪಕ್ಕದಲ್ಲಿದ್ದವರನ್ನು ಅಚ್ಚರಿಯಿಂದ ಕೇಳಿದರು; 'ಸಿಎಂ ಕೊನೆಯದಾಗಿ ಹೇಳಿದ್ದು ಏನು?'

"ಜೈ ಸಂವಿಧಾನ್' ಎನ್ನುವ ಘೋಷಣೆ ನಟಿಯೊಬ್ಬರನ್ನು ಗೊಂದಲಗೊಳಿಸಿದ್ದು ಎರಡು ಸಂಗತಿಗಳನ್ನು ಸೂಚಿಸುವಂತಿತ್ತು, ಒಂದು, ಸಂವಿಧಾನದ ಬಗ್ಗೆ ಯುವಜನರಿಗೆ ಇರಬಹುದಾದ ಅರಿವಿನ ಕೊರತೆ, ಎರಡನೆಯದು, ಆ ಅರಿವನ್ನು ಮೂಡಿಸಲೇಬೇಕಾದ ಸದ್ಯದ ಅನಿವಾರ್ಯತೆ.

ಭಾರತದ ಸಂವಿಧಾನ ಸಭೆಯು 1950ರ ನವೆಂಬರ್ 26ರಂದು ಭಾರತೀಯ ಸಂವಿಧಾನವನ್ನು ಅಂಗೀಕರಿಸಿದ ಚಾರಿತ್ರಿಕ ಘಟನೆಗೆ ಎಪ್ಪತ್ತೈದು ವರ್ಷಗಳು ತುಂಬಿದರೂ, ಸಂವಿಧಾನದ ಬಗ್ಗೆ ಸಾರ್ವಜನಿಕ ಪ್ರಜ್ಞೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎನ್ನುವುದು ನಿಜಕ್ಕೂ ಕಳವಳ ಹುಟ್ಟಿಸುವಂತಹದ್ದು. ಸಂವಿಧಾನ ದಿನದ ಆಸುಪಾಸಿನಲ್ಲಿ ನಾಡಿನಲ್ಲಿ ನಡೆದ ಕೆಲವು ಸಂಗತಿಗಳನ್ನು ಗಮನಿಸಿದರೆ, ನಮ್ಮ ಸಂವಿಧಾನಪ್ರಜ್ಞೆ ಅಳ್ಳಕವಾಗಿರವುದು ಅರಿವಿಗೆ ಬರುತ್ತದೆ.

'ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ ಎನ್ನುವ ವಿಚಾರಸಂಕಿರಣದ 'ಅತಿಥ್ಯವನ್ನು ಶಿವಮೊಗ್ಗದ ಕುವೆಂಪು ವಿ.ವಿ.ವಹಿಸಿಕೊಂಡಿದ್ದು ಚರ್ಚೆಗೆ ಕಾರಣವಾಯಿತು. ಈ ಕಾರ್ಯಕ್ರಮದ ನೆಪದಲ್ಲಿ ವಿಶ್ವವಿದ್ಯಾಲಯ ಮತೀಯವಾದಕ್ಕೆ ಇಂಬು ನೀಡುತ್ತಿದೆ ಎಂದು ಕೆಲವರು ಆತಂಕಪಟ್ಟರೆ, ಎಲ ವಿಚಾರಗಳ ಮುಕ್ತ ಚರ್ಚೆಗೆ ವಿಶ್ವವಿದ್ಯಾಲಯಗಳಯ ತೆರೆದುಕೊಳ್ಳಬೇಕು ಎನ್ನುವ ಅರ್ಥದಲ್ಲಿ ವಿ.ವಿ.ಕುಲಪತಿ ಶರತ್ ಅನಂತಮೂರ್ತಿ ಮಾತನಾಡಿದ್ದರು. ಈ ಪರ–ವಿರೋಧದ ವಾದಗಳನ್ನು ಹೊರತುಪಡಿಸಿ ಶೀರ್ಷಿಕೆಯನ್ನು ಗಮನಿಸಿದರೆ, ಅದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿ ಕಾಣಿಸುವಂತಿದೆ. ಭಗವದ್ಗೀತೆ ಅಥವಾ ಬೇರೊಂದು ಧರ್ಮಗ್ರಂಥದಿಂದ ಅಪರಾಧ ನಿಯಂತ್ರಣ ಆಗುತ್ತದೋ ಇಲ್ಲವೋ ಎನ್ನುವುದು ಸಾರ್ವಜನಿಕ ಚರ್ಚೆಯ ವಿಷಯವೇ ಆಗಬಾರದು. ಏಕೆಂದರೆ, ಅಪರಾಧಕ್ಕೆ ಕಡಿವಾಣ ಹಾಕುವುದು ಕಾನೂನಿನ ಕೆಲಸ. ಸಾಮಾಜಿಕ ಸ್ವಾಸ್ಥ್ಯ–ಸುರಕ್ಷತೆಗೆ ಸಂಬಂಧಿಸಿದಂತೆ ಸಾಂವಿಧಾನಿಕ ಕಾನೂನುಗಳಿಗೆ ಇರುವ ಸಾರ್ವತ್ರಿಕತೆ ಧರ್ಮಗ್ರಂಥಗಳಿಗೆ ಇಲ್ಲ. ಹಾಗಾಗಿ, ಭಗವದ್ಗೀತೆಯ ಮೂಲಕ ಅಪರಾಧ ನಿಯಂತ್ರಣದ ಸಾಧ್ಯತೆಗಳ ಕುರಿತು ಸಾರ್ವಜನಿಕ ಚರ್ಚೆ ನಡೆಸುವುದನ್ನು ಸಂವಿಧಾನವನ್ನು ಗೌಣಗೊಳಿಸುವ ಪ್ರಯತ್ನವೆಂದೇ ಭಾವಿಸಬೇಕಾಗುತ್ತದೆ.

ಸಮುದಾಯಗಳ ಚೌಕಟ್ಟಿನಿಂದ ಹೊರತಂದು ಸಾರ್ವತ್ರಿಕಗೊಳಿಸುವ ಪ್ರಯತ್ನ ಧರ್ಮಗ್ರಂಥಗಳಿಗೆ ಗೌರವ ತರುವಂತಹದ್ದಲ್ಲ: ಅದು ಸಾಂವಿಧಾನಿಕ ನಡೆಯೂ ಅಲ್ಲ. ಸಂವಿಧಾನದ ಆಶಯಗಳನ್ನು ಗೌಣಗೊಳಿಸುವ ಚಟುವಟಿಕೆಗಳಿಗೆ ವೇದಿಕೆ ಆಗುವುದನ್ನು ಅನುಮಾನದಿಂದ ನೋಡಬೇಕೇ ಹೊರತು, ಅಲ್ಲಿ ವೈಚಾರಿಕತೆಯ ಪ್ರಶ್ನೆ ಬರುವುದಿಲ್ಲ.

ಸಂವಿಧಾನಕ್ಕೆ ಪರ್ಯಾಯವಾಗಿ ಧಾರ್ಮಿಕ ಸಂಗತಿಗಳನ್ನು ಚಲಾವಣೆಗೆ ತರುವ ಪ್ರಯತ್ನ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎನ್ನುವುದಕ್ಕೆ ಇತ್ತೀಚಿನ ನಿದರ್ಶನಗಳು:ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನ ಹಾಗೂ ಮೋಹನ್ ಭಾಗವತ್‌ರ 'ಹಿಂದೂರಾಷ್ಟ್ರ'ದ ಪರಿಕಲ್ಪೆ, ಸಾಮಾಜಿಕ ಶಾಂತಿಪಾಲನೆಗೆಂದೇ ಪೊಲೀಸ್ ವ್ಯವಸ್ಥೆಯಲ್ಲಿರುವಾಗ, ಕಾನೂನುಬದ್ಧವಾಗಿ ನೊಂದಣಿಯೂ ಆಗದ ಸಂಸ್ಥೆಯೊಂದಕ್ಕೆ ಸೇರಿದರು ಎನ್ನಲಾದ ಕೆಲವರು ಸಾರ್ವಜನಿಕವಾಗಿ ದೊಣ್ಣೆಗಳನ್ನು ಠಳಾಯಿಸುತ್ತಾ ನಡೆಯುವುದು ಏನನ್ನು ಸೂಚಿಸುತ್ತದೆ? ಸುರಕ್ಷತೆಗೆ ಪರ್ಯಾಯ ಎನ್ನುವ ಚಿತ್ರಣ ನೀಡುವ, ಕಾನೂನುಬದ್ಧವಲ್ಲದ, ಯಾವುದೇ ವ್ಯವಸ್ಥೆ ಸಂವಿಧಾನಬಾಹಿರ. ಈ ಅರಿವು ಮುನ್ನೆಲೆಗೆ ಬಂದಾಗ, ಪಥಸಂಚಲನ ವಿವಾದವೋ ಪ್ರತಿಷ್ಠೆಯೋ ಹಟವೋ ಆಗುವುದಿಲ್ಲ. ಸಾರ್ವಜನಿಕ ಪ್ರದರ್ಶನವೊಂದು ಸಮೂಹದಲ್ಲಿ ಸಂಭ್ರಮ ಮೂಡಿಸಬೇಕಷ್ಟೆ. ಪಥಸಂಚಲನದ ವೈಖರಿ ಕೆಲವರಿಗೆ ಅಸುರಕ್ಷತೆಯ ಭಾವನೆ ಮೂಡಿಸುತ್ತದೆ ಎನ್ನುವುದಾದಲ್ಲಿ, ಆ ನಡವಳಿಕೆಯನ್ನು ಪರಿಶೀಲಿಸಿಕೊಳ್ಳುವ ವಿನಯ ಅಗತ್ಯ. ಯಾವ ಧರ್ಮವೇ ಆಗಿರಲಿ, ಭಕ್ತಿ ಅಥವಾ ಶಕ್ತಿ ಸಾರ್ವಜನಿಕ ಪ್ರದರ್ಶನದ ವಿಷಯವಾದಾಗ, ಸಮಸ್ಯೆಗಳು ಶುರುವಾಗುತ್ತವೆ. ಧಾರ್ಮಿಕ ವಿಚಾರಗಳನ್ನು ಬೀದಿಗೆ ತರುವುದರಿಂದ ಆಗುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಸಂವಿಧಾನದಲ್ಲಿ ನಂಬಿಕೆಯುಳ್ಳವರು ಮಾಡಬೇಕಾದ ಕೆಲಸ. ಇದರ ಬದಲಾಗಿ, ಧಾರ್ಮಿಕ ವಿಷಯಗಳನ್ನು ಜಿದ್ದಾಗಿ ಪರಿವರ್ತಿಸಲು ಪ್ರಯತ್ನಿಸುವುದು ಸಂವಿಧಾನವನ್ನು ಬಲಪಡಿಸುವ ನಡೆಯಲ್ಲ.

'ಭಾರತವು ಹಿಂದೂ ರಾಷ್ಟ್ರವಾಗಿದ್ದು, ಈ ರಾಷ್ಟ್ರದ ಹೊಣೆ ಹಿಂದೂಗಳ ಮೇಲಿದೆ' ಎನ್ನುವುದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ನೀಡಿದ ಉಪನ್ಯಾಸದಲ್ಲಿನ (ಸಂಘದ 100 ವರ್ಷದ ಪಯಣ: ನವ ಕ್ಷಿತಿಜ) ಬೀಜವಾಕ್ಯಗಳಲ್ಲೊಂದು. ಭಾಗವತ್‌ರ ಈ ಅಭಿಪ್ರಾಯ, ಅರ್‌ಎಸ್‌ಎಸ್ ಹಾಗೂ ಅದರ ಒಡಹುಟ್ಟುಗಳು ಮತ್ತೆ ಮತ್ತೆ ಚಲಾವಣೆಗೆ ತರುತ್ತಿರುವ 'ಭಾರತ ಹಿಂದೂರಾಷ್ಟ್ರ ಎನ್ನುವ ಪರಿಕಲ್ಪನೆಯೇ ಆಗಿದೆ ಹಾಗೂ ಅದು ಸಂವಿಧಾನದ ಅರಿವಿನ ಕೊರತೆಯಿಂದ ಅಥವಾ ಸಂವಿಧಾನದ ಕುರಿತ ಅವಜ್ಞೆಯಿಂದ ರೂಪುಗೊಂಡಿರುವಂತಹದ್ದಾಗಿದೆ. ಭಾರತವನ್ನು ಗುರ್ತಿಸಬೇಕಿರುವುದು ಸಂವಿಧಾನ ಗುರ್ತಿಸಿರುವ ಬಹುತ್ವದ ಚಹರೆಗಳ ಮೇಲೆಯೇ ಹೊರತು, ಧಾರ್ಮಿಕ ನೆಲೆಗಟ್ಟಿನಲ್ಲಲ್ಲ. 'ಹಿಂದೂರಾಷ್ಟ್ರ' ಎಂದು ಗುರ್ತಿಸುವುದು ಈ ದೇಶದ ಉಳಿದ ಧರ್ಮಗಳನ್ನು ನಿರ್ಲಕ್ಷ್ಯದಿಂದ ನೋಡುವ ಕ್ರಮವಷ್ಟೇ ಆಗಿರದೆ, ಸಂವಿಧಾನದ ಬಗೆಗಿನ ನಿರ್ಲಕ್ಷ್ಯವೂ ಆಗಿದೆ.

ನೂರು ವರ್ಷಗಳು ತುಂಬಿದ ಸಂಸ್ಥೆಯೇ ಈಗಲೂ ಸ್ವಾತಂತ್ರೋತ್ತರ ಮನಃಸ್ಥಿತಿಯಲ್ಲಿಯೇ ಉಳಿದಿರುವಾಗ, ಜನಸಾಮಾನ್ಯರಿಗೆ ಸಂವಿಧಾನ ಪ್ರಜ್ಞೆಯ ಕೊರತೆ ಇದ್ದರೆ ಅಚ್ಚರಿಯೇನಿಲ್ಲ. ಹಾಗೆ ನೋಡಿದರೆ, ದೇಶದ ಜನಸಾಮಾನ್ಯರು ಅಪ್ರಜ್ಞಾಪೂರ್ವಕವಾಗಿ ಸಂವಿಧಾನದ ಆಶಯಗಳನ್ನು ತಮ್ಮ ಬಾಳ್ವೆಯ ಬೆಳಕಾಗಿಸಿಕೊಂಡಿದ್ದಾರೆ. ಜನಪದರ ಬದುಕಿನಲ್ಲಿಯೇ ಸಂವಿಧಾನದ ಸಾಮರಸ್ಯದ ಬಿತ್ತಗಳಿವೆ. ಸಮಸ್ಯೆಯಿರುವುದು, ಕೆಲವರಿಗೆ ಕಲಿತಪಿತ್ತ ಗಂಟಲಿಗೂ ನೆತ್ತಿಗೂ ಏರಿರುವುದರಲ್ಲಿ.

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ಒಂದು ಗುಂಪು, ತಮ್ಮ ಪ್ರಯತ್ನಗಳಿಗೆ ಪೂರಕವಾಗಿ ಸಂವಿಧಾನ ಹಾಗೂ ಅದರ ಜೀವರೂಪವಾದ ಅಂಬೇಡ್ಕರ್ ಅವರನ್ನೇ ಬಳಸಿಕೊಳ್ಳುವ ನಿರ್ಲಜ್ಜಜಾಣತನ ಪ್ರದರ್ಶಿಸುತ್ತದೆ. ವಿಧಾನಸಭೆ ವಿಪಕ್ಷದ ನಾಯಕ ಆರ್. ಅಶೋಕ, 'ಸಂವಿಧಾನ ದಿನ'ದ ಸಂದರ್ಭದಲ್ಲಿ 'ಭೀಮನಡೆ' ಹೆಸರಿನ ಕಾರ್ಯಕ್ರಮ ಸಂಘಟಿಸಿ, ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿದ ದ್ರೋಹಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದಾಗಿ ಹೇಳಿದ್ದಾರೆ. ಅಂಬೇಡ್ಕರ್ ಅವರಿಗೆ

ಕಾಂಗ್ರೆಸ್ ಅನ್ಯಾಯ ಮಾಡಿತು ಎಂದು ಆರೋಪಿಸುವ ಅಶೋಕರಂಥವರು ಗಮನಿಸಬೇಕಾದ ಸೂಕ್ಷ್ಮವೊಂದಿದೆ. ಬಾಬಾಸಾಹೇಬರು ನೆಹರೂ ನೇತೃತ್ವದ ಸರ್ಕಾರದ ಭಾಗವಾಗಿದ್ದಾಗಲೂ, ಸರ್ಕಾರದ ವಿರೋಧಿಯಾಗಿದ್ದಾಗಲೂ, ಅವರೆಂದೂ ಕಾಂಗ್ರೆಸ್ಸಿಗರಾಗಿರಲಿಲ್ಲ. ಕಾಂಗ್ರೆಸ್, ನೆಹರೂ ಹಾಗೂ ಗಾಂಧೀಜಿ ಅವರನ್ನು ಅಂಬೇಡ್ಕರ್ ಅವರಂತೆ ವಿಮರ್ಶೆಯ ನಿಕಷಕ್ಕೆ ಒಳಪಡಿಸಿದವರು ಮತ್ತೊಬ್ಬರಿಲ್ಲ. ಈ ವಿರೋಧವನ್ನು ನೆನಪಿನಲ್ಲಿ ಇರಿಸಿಕೊಂಡರೆ, ಬಾಬಾಸಾಹೇಬರಿಗೆ ಕಾಂಗ್ರೆಸ್‌ನಿಂದ ನ್ಯಾಯ ದೊರಕಲಿಲ್ಲ ಎನ್ನುವ ರಾಜಕೀಯ ವಿದ್ಯಮಾನವನ್ನು ಅರ್ಥ ಮಾಡಿಕೊಳ್ಳುವ ದಾರಿ ಕಾಣಿಸುತ್ತದೆ. ರಾಜಕೀಯ ವಿರೋಧಿಯಾಗಿದ್ದಾಗಲೂ ಅಂಬೇಡ್ಕರ್ ಅವರ ವಿದ್ವತ್ತನ್ನು ಕಾಂಗ್ರೆಸ್ ಗೌರವದಿಂದಲೇ ಕಂಡಿತ್ತು ಎನ್ನುವುದಕ್ಕೆ ಅಂಬೇಡ್ಕರ್ ಅವರನ್ನು ಸಂವಿಧಾನದ ಶಿಲ್ಪಿಯ ರೂಪದಲ್ಲಿ ಇತಿಹಾಸ ಗುರ್ತಿಸುತ್ತಿರುವುದೇ ನಿದರ್ಶನವಾಗಿದೆ. ಚರಿತ್ರೆಯ ಈ ಸಹಜ ವಿರೋಧಾಭಾಸಗಳನ್ನು ಬಿಜೆಪಿ ತನ್ನ ರಾಜಕೀಯ ಲಾಭಗಳಿಗಾಗಿ ತಪ್ಪಾಗಿ ಚಿತ್ರಿಸುತ್ತಿದೆ. ಬಿಜೆಪಿಯ ರಾಜಕೀಯಶಕ್ತಿಯೇ ಆದ ಸಂಘ ಪರಿವಾರದ ಹಿಂದೂರಾಷ್ಟ್ರದ ಪರಿಕಲ್ಪನೆಯೇ ಅಂಬೇಡ್ಕರ್‌ಪ್ರಣೀತ ಭಾರತಕ್ಕೆ ವಿರುದ್ಧವಾದುದು. “ನನಗೆ ದೇಶವಿಲ್ಲ, ನನಗೆ ಮಾತೃಭೂಮಿಯಿಲ್ಲ’ ಎಂದು ಅಂಬೇಡ್ಕರ್ ನೋವಿನಿಂದ ಹೇಳಿರುವುದಿದೆ. ಆ ಮಾತನ್ನು ಈಗ ಬಿಜೆಪಿ ನಿಜಗೊಳಿಸುತ್ತಿದೆ. ಸಮಾಜದ ನೆಮ್ಮದಿಯ ಬದುಕಿಗೆ ಅತ್ಯವಶ್ಯವಾದ ನೀರಿನ ದೋಣಿಯ ರೂಪದಲ್ಲಿ ಬಳಸಿಕೊಳ್ಳುವ ಬದಲು,ಎದುರಾಳಿಗಳನ್ನು ಬಗ್ಗುಬಡಿಲು ಬೇಕಾ ದೊಣ್ಣೆಯಂತ ಅಂಬೇಡ್ಕರ್ ಅವರನ್ನು ಸಂಘ ಪರಿವಾರ ಬಳಸಿಕೊಳ್ಳುತ್ತಿದೆ. ಅಂಬೇಡ್ಕರರಿಗೆ ಕಾಂಗ್ರೆಸ್ ದ್ರೋಹ ಎಸಗಿತೆಂದು ಹೇಳುತ್ತಲೇ, ಸಂವಿಧಾನದ ಆಶಯಗಳನ್ನು ಮುಕ್ಕಾಗಿಸುತ್ತ ಬಾಬಾ ಸಾಹೇಬರನ್ನು ತಾತ್ವಿಕವಾಗಿ ಅಪ್ರಸ್ತುತವಾಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಹೆಸರಿನಲ್ಲಿ ಸಾಂವಿಧಾನಿಕ ವಿರೋಧಿ ಮನ:ಸ್ಥಿತಿಯನ್ನು ರೂಪಿಸುವ ಪ್ರಯತ್ನಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಎಳೆಯರು ಹಾಗೂ ಯುವಜನರನ್ನು ಕೇಂದ್ರವನ್ನಾಗಿಸಿಕೊಂಡು ಸಂವಿಧಾನಪ್ರಜ್ಞೆ ರೂಪಿಸುವ ಪ್ರಯತ್ನ ತೀವ್ರಗೊಳ್ಳಬೇಕಾಗಿದೆ. ವರ್ತಮಾನದ ಬಹುತೇಕ ಬಿಕ್ಕಟ್ಟುಗಳಿಗೆ ಸಂವಿಧಾನ ನಮ್ಮ ಜೀವನವಿಧಾನ ಪಠ್ಯ ಜೀವನಪಠ್ಯವೂ ಆಗುವುದು, ಧರ್ಮ ಮತ್ತು ವಿಚಾರದ ಹೆಸಿನಲ್ಲಿ ಅಸಹನೆಯಿಂದ ವರ್ತಿಸುವುದು ನಿಲ್ಲುವುದಕ್ಕೆ ಔಷಧಿಯಾಗಿದೆ.

ಮೊಬೈಲ್ ಫೋನ್ ಸಾಕ್ಷರತೆಯ ಸಂದರ್ಭದಲ್ಲಿ ಜನಸಾಮಾನ್ಯರ ರಾಜಕೀಯ ಪ್ರಜ್ಞೆ ಪ್ರಖರಗೊಂಡಂತೆ ಕಾಣಿಸುತ್ತದೆ. ಆದರೆ, ಸಂವಿಧಾನದ ವಿವೇಕ ಒಳಗೊಳ್ಳದ ರಾಜಕೀಯ ಪ್ರಜ್ಞೆ ಅಪಾಯಕರ, ರಾಜಕೀಯಪ್ರಜ್ಞೆ ರೂಪುಗೊಳ್ಳಬೇಕಾದುದು ವಾಟ್ಸ್‌ಆ್ಯಪ್ ಅಥವಾ ಬೇರಾವುದೋ ಸಾಮಾಜಿಕ ಜಾಲತಾಣದಲ್ಲಿ ಅಲ್ಲ; ಅದು ನಮ್ಮದಾಗಬೇಕಾದುದು ಸಂವಿಧಾನದೊಂದಿಗಿನ ಅನುಸಂಧಾನದ ಅನುದಿನದ ಅನುಭವಮಂಟಪದಲ್ಲಿ.

**ಲೇಖಕರು:** ರಘುನಾಥ ಚ.ಹ.

**ಆಧಾರ: ಪ್ರಜಾವಾಣಿ,** ದಿನಾಂಕ:22.11.2025

## 6. ಚುನಾವಣೆ: ಮತಗಟ್ಟೆ ವಶದಿಂದ ಎಸ್‌ಐಆರ್ ವರೆಗೆ!

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂದು ಹೆಮ್ಮೆಪಡುತ್ತದೆ. ನಿಜವಾದ ಪ್ರಜಾಪ್ರಜಾಪ್ರಭುತ್ವವು ರಾಜಕೀಯ ಪಕ್ಷಗಳು, ನಾಯಕರು ಅಥವಾ ಸರ್ಕಾರಗಳ ಬಲದಿಂದಲ್ಲ. ಬದಲಾಗಿ ಚುನಾವಣಾ ಪ್ರಕ್ರಿಯೆ ಸ್ವತಂತ್ರ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ನಡೆಯುವುದರಿಂದ ಮಾತ್ರ ಸಾಧ್ಯ. ಈ ಜವಬ್ದಾರಿಯನ್ನು ಶಿರಸ್ತೇ ಹಾಕಿಕೊಂಡಿರುವ ಸಂಸ್ಥೆಯೆಂದರೆ ಭಾರತೀಯ ಚುನಾವಣಾ ಆಯೋಗ, ಇದು ಯಾವುದೋ ಸರ್ಕಾರದ ಅಡಿಪಾಯದಲ್ಲಿರುವ ಅಂಗವಲ್ಲ; ಬದಲಾಗಿ ಸಂವಿಧಾನದಲ್ಲೇ ಸ್ಥಾಪಿಸಿದ ಸಂವಿಧಾನಿಕ ಪ್ರಾಧಿಕಾರ.

ಈ ತಾತ್ವಿಕ ಸ್ವಾಯತ್ತತೆಯನ್ನು ಅತ್ಯಂತ ಬಿಗಿಯಾಗಿ ಪಾಲಿಸಿದವರಲ್ಲಿ ಟಿ.ಎನ್.ಶೇಷನ್ ಪ್ರಮುಖರು. ಪ್ರಜಾಪ್ರಭುತ್ವದ ನೈತಿಕ ಮೌಲ್ಯಗಳನ್ನು ರಕ್ಷಿಸುವ ಹಾದಿಯಲ್ಲಿ I'm not part of a government system, "I am a part of the Indian Constitution" 2 ಘೋಷಿಸಿದ ಅವರ ನಿಲುವು, ಚುನಾವಣಾ ವ್ಯವಸ್ಥೆಗೆ ಹೊಸ ಶಕ್ತಿ ನೀಡಿತು. 1990ರಲ್ಲಿ 10ನೇ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಶೇಷನ್, ಭಾರತದ ಚುನಾವಣಾ ವ್ಯವಸ್ಥೆಯ ಇತಿಹಾಸವನ್ನು ಎರಡು ಯುಗಗಳಿಗೆ ವಿಭಜಿಸಿದಂತೆಯೇ ಸುಧಾರಣೆಗಳನ್ನು ಜಾರಿಗೊಳಿಸಿದರು. ನಕಲಿ ಮತದಾನ, ಹಣ–ಮದ್ಯದ ಪ್ರಭಾವ, ಜಾತಿ–ಮತ ಪ್ರಚೋದನೆ, ಆಶಿಸ್ತಿನ ರ್‍ಯಾಲಿಗಳು ಅನಿಯಂತ್ರಿತ ಖರ್ಚುಗಳನ್ನು ಶೇಷನ್ ಅವರು ಪ್ರಶ್ನಿಸದೇ ಬಿಡುತ್ತಿರಲಿಲ್ಲ. ಲೆಕ್ಕ ಕೇಳಲಾಗುತ್ತಿತ್ತು, ಕಠಿಣಕ್ರಮಕ್ಕೆ ಶಿಫಾರಸ್ಸು ಮಾಡಲಾಗುತ್ತಿತ್ತು.

ಮಾದರಿ ನೀತಿ ಸಂಹಿತೆಯ ಕಟ್ಟುನಿಟ್ಟಿನ ಜಾರಿ, ಮತದಾರರ EPIC ಗುರುತಿನ ಚೀಟಿ, ಬೂತ್‌ಗಳ ಪುನರ್ ನಿರ್ದಿಷ್ಟೀಕರಣ, ಪ್ರಚಾರ ಖರ್ಚಿನ ಮೇಲಿನ ಕಟ್ಟುನಿಟ್ಟಿನ ನಿಗಾವಹಿಕೆ ಇತ್ಯಾದಿ ಕ್ರಮಗಳಿಂದ ಅವರು ರಾಷ್ಟ್ರದಲ್ಲೆಡೆ ಜನಪ್ರಿಯರಾದರು. ರಾಜಕಾರಣಿಗಳು ಅವರನ್ನು ಆಲ್–ಶೇಷನ್ ಎಂದು ಟೀಕಿಸಿದರೆ, ನಾಗರಿಕ ಸಮಾಜ ಮತ್ತು ಮಧ್ಯಮ ವರ್ಗ ಅವರನ್ನು ಸೇನ್–ಶೇಷನ್ ಎಂದು ಕೊಂಡಾಡಿತು.

ಸಂವಿಧಾನದ Article 324ರ ಅಡಿಯಲ್ಲಿ ಸ್ಥಾಪಿತವಾದ ಭಾರತೀಯ ಚುನಾವಣಾ ಆಯೋಗವು ಲೋಕಸಭೆ, ರಾಜ್ಯ ವಿಧಾನಸಭೆಗಳು, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಗಳ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ. ಪಕ್ಷಗಳ ನೋಂದಣಿ. ಚುನಾವಣಾ ಚಿಹ್ನೆ ವಿತರಣೆ, ಮತದಾರರ ಪಟ್ಟಿಗಳ ಸಿದ್ಧತೆ, ಮತಗಟ್ಟೆಗಳ ವ್ಯವಸ್ಥೆ, ಮತದಾರರ ಫೋಟೋ ಗುರುತಿನ ಚೀಟಿ ಸೇರಿದಂತೆ ಇವೆಲ್ಲವನ್ನೂ ಸ್ವತಂತ್ರವಾಗಿ ನಿರ್ವಹಿಸುವ ಶಕ್ತಿಯನ್ನು ಒಂದು ಸಂವಿಧಾನದತ್ತ ಸ್ವತಂತ್ರ ಸಂಸ್ಥೆಯಾಗಿ ಚುನಾವಣಾ ಆಯೋಗವು ಹೊಂದಿದೆ.

1971ರಲ್ಲಿ ಮೊದಲ ಬಾರಿಗೆ ರೂಪುಗೊಂಡ ಮಾದರಿ ನೀತಿ ಸಂಹಿತೆ ಇಂದು ಭಾರತೀಯ ರಾಜಕೀಯದ ಮೂಲಸ್ತಂಭವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿನ ನೀತಿ–ನೈತಿಕತೆ ಕಾಪಾಡುವಲ್ಲಿ ಇದರ ಪಾತ್ರ ಆಗಾಧ. ರಾಜ್ಯ ಚುನಾವಣಾ ಆಯೋಗಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಿರ್ವಹಿಸುವಂತೆಯೇ, ಕೇಂದ್ರ ಚುನಾವಣಾ ಆಯೋಗವು ರಾಷ್ಟ್ರವ್ಯಾಪಿ ಚುನಾವಣೆಗಳ ಮೇಲೆ ಅಧಿಕಾರ ಹೊಂದಿದೆ.

Electoral Cleaning ಅಂದರೆ ಮತದಾನ ವ್ಯವಸ್ಥೆಯನ್ನು ಹಂತ–ಹಂತವಾಗಿ ಶುದ್ದೀಕರಿಸುವ ಪ್ರಯತ್ನವು ಸಂಸ್ಥೆಯ ಆರಂಭದಿಂದಲೇ ಹೊಂದಿದ್ದು. 1950–51ರಲ್ಲಿ Representation of the People Act ಮತದಾರರ ಪಟ್ಟಿ ತಯಾರಿಕೆಗೆ ಕಾನೂನು ಆಧಾರ. ಅರ್ಹತೆ, ಆಕ್ಷೇಪಣೆ, ತಿದ್ದುಪಡಿ ಪ್ರಕ್ರಿಯೆ ಆರಂಭ[1], Electoral cleaning ಮೂಲ ಅಡಿಪಾಯ ಹಾಕಲಾಯಿತು.

1960–70ರ ದಶಕದಲ್ಲಿ Booth-level Verification ಆರಂಭವಾಗಿ, ಸ್ಥಳೀಯ ಮಟ್ಟದ ಪರಿಶೀಲನೆ ಮತ್ತು ನೇರವಾಗಿ ಮತದಾರರನ್ನು ಗುರುತಿಸುವ ಪ್ರಯತ್ನದ ಮೂಲಕ ಮೊದಲ Ground-level checking ಆರಂಭಿಸಲಾಯಿತು. 1971ರಲ್ಲಿ Model Code of Conduct (MCC), 1989ರಲ್ಲಿ ರಾಜಕೀಯ ಪಕ್ಷಗಳ ನೋಂದಣಿ ಕಡ್ಡಾಯ ಮತ್ತು ಚಿಹ್ನೆ ನಿಯಂತ್ರಣ ನಿಯಮ ತರಲಾಯಿತು. 1993ರಲ್ಲಿ (EPIC-Photo Voter ID) ಪ್ರತಿಯೊಬ್ಬ ಮತದಾರನಿಗೆ ಫೋಟೋ ಗುರುತಿನ ಚೀಟಿ ಕಡ್ಡಾಯಗೊಳಿಸುವ ಮೂಲಕ ಬೋಗಸ್ ಮತದಾನಕ್ಕೆ ಕಡಿವಾಣ ಹಾಕಲಾಯಿತು. 2003ರಲ್ಲಿ Continuous Updating of Electoral Rolls ಅಂದರೆ, ವರ್ಷಕ್ಕೆ ಒಮ್ಮೆ ಮಾತ್ರ ಅಲ್ಲ, ನಿರಂತರ ತಿದ್ದುಪಡಿ ವ್ಯವಸ್ಥೆ ಜಾರಿಗೆ ತರಲಾಯಿತು. 2010–2014ರಲ್ಲಿ (Digital Electoral Rolls) ಆನ್‌ಲೈನ್ ಮತದಾರರ ಪಟ್ಟಿ

ರೂಪಿಸಿದ್ದಲ್ಲದೇ ಸಾರ್ವಜನಿಕ ಪರಿಶೀಲನೆಗೆ ಅವಕಾಶ ನೀಡಲಾಯಿತು 2015ರಲ್ಲಿ National Electoral Roll Purification (NERPAP) ಪ್ರಯತ್ನವಾಗಿ Aadhaar-Vote ID linkage ಪ್ರಯತ್ನ ಮತ್ತು Duplicate name ತೆಗೆದುಹಾಕುವ ಗುರಿ ಹೊಂದಲಾಯಿತು. 2018ರಲ್ಲಿ E-EPIC-Online Corrections ಮೂಲಕ, ಡಿಜಿಟಲ್ ಮತದಾರರ ಚೀಟಿ ಹಾಗೂ ಸ್ವಯಂ ತಿದ್ದುಪಡಿ ವ್ಯವಸ್ಥೆ ಹೊಂದಲಾಯಿತು. 2019–20220 BLO Strengthening Training ಅಂದರೆ, Booth Level Officers ತರಬೇತಿ ಹಾಗೂ Field verification ಗಟ್ಟಿಗೊಳಿಸಲಾಯಿತು. 2023–24ರಲ್ಲಿ Cross-Data--base Verification, ಮೂಲಕ Death registry, Migration data Utility databases ಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಸದ್ಯಕ್ಕೆ ಸುದ್ದಿಯಲ್ಲಿರುವ 2025ರಲ್ಲಿ SIR-Special Intensive Revision ಅಂದರೆ Electoral Cleaning Program ಮೂಲಕ ಒಂದು ಪ್ರಮುಖ ಘಟ್ಟಕ್ಕೆ ನಮ್ಮ ಚುನಾವಣಾ ಆಯೋಗ ಬಂದು ನಿಂತಿದೆ. ಹಾಗಾಗಿಯೇ, ಇಂದಿನ ಆಯೋಗದ ಮುಖ್ಯಸ್ಥರು ಹಲವು ಆರೋಪ ಅಪಾದನೆಗಳಿಗೆ ಈಡಾಗುತ್ತಿದ್ದಾರೆ.

ಭಾರತೀಯ ಚುನಾವಣಾ ಆಯೋಗದ 26ನೇ ಮುಖ್ಯ ಆಯುಕ್ತರಾಗಿ 2025ರಲ್ಲಿ ಅಧಿಕಾರ ವಹಿಸಿಕೊಂಡ ಜ್ಞಾನೇಶ್‌ಕುಮಾರ್, ಈಗಷ್ಟೇ ಮುಗಿದ ಬಿಹಾರ ವಿಧಾನಸಭಾ ಚುನಾವಣೆಗೂ ಪೂರ್ವದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮಕ್ಕೆ ಇವರು ಪ್ರಾಮುಖ್ಯತೆ ಕೊಟ್ಟರು. ಜ್ಞಾನೇಶ್ ಕುಮಾರ್ ದೇಶಾದ್ಯಂತ ಅಕ್ರಮ ನುಸುಳುವಿಕೆ, ನಕಲಿ ಮತದಾರರು ಹಾಗೂ ಮತದಾರರ ಪಟ್ಟಿಗಳಲ್ಲಿರುವ ಗೊಂದಲಗಳ ವಿರುದ್ಧ ತೆರೆದ ಹೋರಾಟ ಘೋಷಿಸಿದ್ದಾರೆ. ಅವರ ನೋಟದಲ್ಲಿ ಪಾರದರ್ಶಕ ಚುನಾವಣೆ ಕೇವಲ ಗುರಿಯಲ್ಲ; ಅದು ಪ್ರಜಾಪ್ರಭುತ್ವದ ಅಸ್ತಿತ್ವದ ಅಡಿಯಾಳು.

ಜ್ಞಾನೇಶ್ ಕುಮಾರ್ ಅತ್ಯಂತ ಚರ್ಚಿತ ಕ್ರಮವಾಗಿರುವ SIR (Special Intensive Revision) ಯೋಜನೆಯು ಕೇವಲ ಸಾಮಾನ್ಯ ನವೀಕರಣವಲ್ಲ, ಬದಲಾಗಿ ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯನ್ನು ಸಂಪೂರ್ಣ ಮರು ಪರಿಶೀಲಿಸುವ ವಿಶೇಷ ಅಭಿಯಾನವಾಗಿದೆ. ಇದನ್ನು ಚುನಾವಣಾ ಆಯೋಗದ SIR ಕ್ರಮವು ಪ್ರಜಾಸತ್ತತ್ತೆಯ ಶುದ್ಧೀಕರಣದ ನವ ಅಧ್ಯಾಯವೆಂದೇ ನಾವು ಪರಿಗಣಿಸಬಹುದು.

SIR ಕ್ರಮದ ಮುಖ್ಯ ಉದ್ದೇಶಗಳೆಂದರೆ, ಮತದಾರರ ಪಟ್ಟಿಯ ಶುದ್ಧೀಕರಣ ಡೂಪ್ಲಿಕೇಟ್ ಎಂಟ್ರಿಗಳ ನಿವಾರಣೆ, ಆಕ್ರಮವಾಗಿ ಸೇರಿಸಲಾದ ಹೆಸರಿನ ಪತ್ತೆ. ಬೋಗಸ್ ಮತದಾರರ ದಾಖಲಾತಿ ತಡೆಯುವುದು, ಜನಸಂಖ್ಯಾ ಚಲನೆಯ ಆಧಾರದ ಮೇಲೆ ಪಟ್ಟಿನ ನವೀಕರಣ ಸೇರಿದಂತೆ ವಿವಿಧ ಕ್ರಮಗಳು ಚುನಾವಣಾ ಸುಸ್ಥಿರತೆ ಅತ್ಯಂತ ಮೂಲಭೂತವಾಗಿದೆ. SIR ಕ್ರಮ ಜಾರಿಗೆ ತರಲು, ಚುನಾವಣಾ ಆಯೋಗವು ವಿವರವಾದ ಮಾರ್ಗಸೂಚಿ ನೀಡುತ್ತದೆ. ಅದರ ಮುಖ್ಯ ಹಂತಗಳು ಹೀಗಿದ್ದು,

ಬೂತ್ ಲೆವೆಲ್ ಅಧಿಕಾರಿಗಳು (BLO) ಪ್ರತೀ ಮನೆಗೂ ತೆರಳಿ ವಾಸ್ತವಿಕವಾಗಿ ನಿವಾಸಿಗಳು ಇದ್ದಾರೆಯೇ? ಹೊಸದಾಗಿ ಬಂದಿರುವವರೇ? ಯಾರಾದರೂ ಹೊರಗುಳಿದವರೇ? ಮೃತಪಟ್ಟವರ ಮಾಹಿತಿ ಏನು? ಎಂಬುದನ್ನು ದಾಖಲಿಸುತ್ತಾರೆ. Aadhaar, ration card, property records, death registry, electricity bill ಡೇಟಾಬೆಸ್‌ಗಳೊಂದಿಗೆ ಹೋಲಿಕೆ ನಡೆಸಲಾಗುತ್ತದೆ.

ಒಬ್ಬರ ಹೆಸರು ಒಂದೇ ಕ್ಷೇತ್ರದಲ್ಲಿ ಆಥವಾ ಬೇರೆ ಜಿಲ್ಲೆಯಲ್ಲಿ ಹಲವು ಭಾರಿ ಬಂದಿದೆ ಎಂದರೆ ಸ್ವಯಂ–ಪರಿಶೀಲನಾ ವ್ಯವಸ್ಥೆಯಲ್ಲೇ ಅದು ಫ್ಲಾಗ್ ಆಗುತ್ತದೆ. ಯಾವುದೇ ಅನುಮಾನಾಸ್ಪದ ಹೆಸರು ಕಂಡರೆ ಮತದಾರರಿಗೆ ನೋಟಿಸ್ ಚೀಟಿ ನೀಡಿ. ಇದರಂತೆ ನಿಮ್ಮ ವಿಳಾಸ ದೃಢಪಡಿಸಿ, ಬೇಕಾದ ದಾಖಲೆಗಳನ್ನು ನೀಡಿ, BLO ಕಚೇರಿಗೆ ಭೇಟಿ ನೀಡಿ ಎಂದು ತಿಳಿಸಲಾಗುತ್ತದೆ. ಪುನಃ ಪರಿಶೀಲಿಸಿದ

ಮತದಾರರ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆ. 12–15 ದಿನಗಳೊಳಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಪರಿಶೀಲನೆ. ತನಿಖೆ ಮತ್ತು ಸಾರ್ವಜನಿಕ ಪರಿಗಣನೆ ನಂತರ ಅಂತಿಮಪಟ್ಟಿ ಪ್ರಕಟವಾಗುತ್ತದೆ.

ಈ ಒಂದು ಕ್ರಮದಿಂದಾಗಿ, ಚುನಾವಣೆಗಳ ನೈತಿಕತೆಯನ್ನು ಹೆಚ್ಚಿಸಿ. ಬೋಗಸ್ ಮತದಾರಿಕೆ ಕಡಿಮೆಯಾಗುವ ಮೂಲಕ ನಿಜವಾದ ಮತದಾರರ ಮತವೇ ಮಹತ್ವ ಹೊಂದುತ್ತದೆ. ಕೆಲವು ರಾಜಕೀಯ ಪಕ್ಷಗಳು ಸ್ಥಳೀಯವಾಗಿ ಹೊರಗಿನ ಜನರನ್ನು ತಾತ್ಕಾಲಿಕವಾಗಿ ತರಿಸಿ ಮತದಾನ ಮಾಡಿಸಿದ ಪ್ರಕರಣಗಳು ಹಿಂದೊಮ್ಮೆ ಕಂಡುಬಂದಿದ್ದು ಈ ಕ್ರಮದಿಂದ ಆ ದುರ್ಬಳಕೆಗಳು ತಡೆಗಟ್ಟಲ್ಪಡುವ ಸಾಧ್ಯತೆ ಹೆಚ್ಚುತ್ತದೆ. ಆಧಾರ್–ಲಿಂಕ್ ಸೌಲಭ್ಯ, e-EPIC, ಆನ್ಲೈನ್ ತಿದ್ದುಪಡಿಗಳೆಲ್ಲವೂ ಶುದ್ಧಾತಿಶುದ್ಧ ಮತದಾರರ ಅಧಿಕೃತ ಡಾಟಾಗಳ ಮೇಲೇಯೇ ನಡೆಯುತ್ತದೆ.

ವರ್ಷದೊಳಗೆ ಸ್ಥಳಾಂತರ ಹೆಚ್ಚಿಸಿರುವ ನಗರ ಪ್ರವಾಹ ಪ್ರದೇಶಗಳಲ್ಲಿ ನಿಖರ ಪಟ್ಟಿಯ ಸಮಾಜಬದ್ಧ ನಿರ್ಧಾರಗಳಿಗೆ ಸಹ ಸಹಾಯಕವಾಗಬಲ್ಲದು. ಇಷ್ಟೆಲ್ಲಾ ಉಪಯೋಗಗಳಿದ್ದೂ SIR ಕ್ರಮಕ್ಕೆ ಹಲವಾರು ರಾಜಕೀಯ ನಾಯಕರು ವಿರೋಧ ವ್ಯಕ್ತಪಡಿಸಿದ್ದು, ಅವುಗಳಲ್ಲಿ ಮತದಾರರ ಹೆಸರು ಇದ್ದಕ್ಕಿಂತೆ ಅಳಿಸುತ್ತಿದ್ದಾರೆಂಬ ಆರೋಪವು ಕೇಳಿಬಂತು. ಕೆಲವು ಪ್ರದೇಶಗಳಲ್ಲಿ ಸಮೂಹವಾಗಿ 500–2000 ಹೆಸರುಗಳು ಆಳಿಸಲ್ಪಟ್ಟಿದ್ದರಿಂದ ರಾಜಕೀಯ ಚರ್ಚೆಗೆ ಕಾರಣವಾಯಿತು. ಆದರೆ ಆಯೋಗದ ಪ್ರಕಾರ, ಇದು ತಾತ್ಕಾಲಿಕವಾಗಿ ವಿವರ ಪರಿಶೀಲನೆಗಾಗಿ ಫ್ಲಾಗ್ ಮಾಡಲ್ಪಟ್ಟ ಪಟ್ಟಿಯೇ ಹೊರತು ಅಂತಿಮ ಅಳಿಕೆ ಅಲ್ಲ.

ನಗರದ ಬಡ ಪ್ರದೇಶಗಳು ಅಸಂಘಟಿತ ಕಾರ್ಮಿಕ ವರ್ಗ, ಬಾಡಿಗೆ ಮನೆಗಳಲ್ಲಿ ವಾಸಿಸುವವರು ಇವರಲ್ಲಿ ವಿಳಾಸದ ಬದಲಾವಣೆ ಸಾಮಾನ್ಯ ಇವರ ಹೆಸರುಗಳು ಸಂದೇಹಕ್ಕೆ ಒಳಪಡುವ ಸಾಧ್ಯತೆ ಅಧಿಕ. ಚುನಾವಣೆ ಮೊದಲು ದೊಡ್ಡ ಮಟ್ಟದಲ್ಲಿ ಪರಿಶೀಲನೆ ನಡೆಸುವುದರಿಂದ ರಾಜಕೀಯ ಪಕ್ಷಗಳು ಜನಪ್ರಭಾವ ಕಡಿಮೆ ಮಾಡುವ ಉದ್ದೇಶ ಎಂದು ಆರೋಪಿಸುತ್ತದೆ. ಕಾರ್ಯಕರ್ತರಿಂದ ಒದಗಿಸುವ ಸಂಖ್ಯೆ–ದತ್ತಾಂಶಕ್ಕಿಂತ ಆಯೋಗದ ಡಿಜಿಟಲ್ ದತ್ತಾಂಶ ಬಲವಾಗಿರುವುದರಿಂದ ರಾಜಕೀಯ ಪಕ್ಷಗಳಿಗೆ ಪಕ್ಷಗಳ ಬೂತ್(Ground) ನೆಟ್‌ವರ್ಕ್ ದುರ್ಬಲವಾಗುವ ಸಾಧ್ಯತೆ.

ಇವೆಲ್ಲದರ ಜೊತೆಗೆ, ಬಹಳಷ್ಟು ಸವಾಲುಗಳು SIR ಕ್ರಮದ ಸಂದರ್ಭದಲ್ಲಿ ಒದಗಿಬರುತ್ತಿವೆ. ಅವುಗಳಲ್ಲಿ ಬೃಹತ್ ನಗರಗಳಲ್ಲಿ ವಿಳಾಸ ನಿಜತೆ ಪರಿಶೀಲನೆ, ಅತ್ಯಂತ ಕಷ್ಟ ಕಡಿಮೆ ಸಿಬ್ಬಂದಿ ಮತ್ತು ಃಐಔಗಳ ಮೇಲಿನ ಒತ್ತಡ, ಆಧಾರ್–ಗೌಪ್ಯತಾ ಚರ್ಚೆಗಳು, ತಪ್ಪಾದ ನೋಟಿಸ್‌ಗಳಿಂದ ನಿರ್ದೋಷಿ ಮತದಾರರಿಗೆ ತೊಂದರೆ, ಡಿಜಿಟಲ್ ಗ್ಯಾಪ್ ತಿದ್ದುಪಡಿ ಕ್ರಮಗಳನ್ನು ಅನೇಕರು ತಿಳಿಯದಿರುವುದು ಸೇರಿದಂತೆ ಏನೇ ಅಡೆತಡೆಗಳುಂಟಾದರೂ ಈ ಕ್ರಮವು ಅತ್ಯಗತ್ಯವಾಗಿದ್ದು, ಭಾರತದ ಪ್ರಜಾಪ್ರಭುತ್ವದ ಮೂಲಾಧಾರವಾದ ಚುನಾವಣೆಯನ್ನು ಶುದ್ಧ, ಪಾರದರ್ಶಕ ಮತ್ತು ನೈತಿಕವಾಗಿಡಲು ಇದು ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಚುನಾವಣಾ ಆಯೋಗವು ಸದಾ ಚಲನೆಯಲ್ಲಿರುವ ನವೀನತೆಗಳನ್ನು ಅಳವಡಿಸಿಕೊಂಡು ಮುನ್ನಡೆಯುವ ಸಂವಿಧಾನದ ಬಲವಾದ ಶಕ್ತಿಕೇಂದ್ರವಾಗಿ ಮುನ್ನಡೆಯುತ್ತಲೇ ಇದೆ.

SIR ಮಾದರಿಯ ಕ್ರಮಗಳು ಚುನಾವಣಾ ವ್ಯವಸ್ಥೆಯನ್ನು ವಂಚನೆಮುಕ್ತ ಮತ್ತು ನಂಬಿಕೆ ಮೂಡುವಂತಾಗಿಸುತ್ತಿದೆ. ಪ್ರಜಾಪ್ರಭುತ್ವದ ನೈಜಬಲ, ಮತದಾರರಲ್ಲಿದೆ. ಮತದಾರರ ಪಟ್ಟಿಗಳು ನಿಖರವಾಗಿದ್ದಷ್ಟೂ, ಚುನಾವಣೆಯ ಶುದ್ಧತೆ ಗಟ್ಟಿಯಾಗುತ್ತದೆ. ಇಂದು ಭಾರತವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲು ರಾಜಕೀಯ ಧ್ರುವೀಕರಣವಲ್ಲ; ಬದಲಾಗಿ ವಿಶ್ವಾಸಾರ್ಹ ಮತದಾರರ ಪಟ್ಟಿಯನ್ನು ನಿರ್ಮಿಸುವುದು.

SIR ಅಭಿಯಾನ, ಕಟ್ಟುನಿಟ್ಟಿನ ನೀತಿಸಂಹಿತೆ, ನಿಷ್ಪಕ್ಷಪಾತ ಆಡಳಿತಾತ್ಮಕ ಕ್ರಮಗಳು ಸರಿಯಾದ ಸಂವಿಧಾನಾತ್ಮಕ ದಿಸೆಯಲ್ಲಿಯೇ ಸಾಗುತ್ತಿರುವುದು ಜನಸಾಮಾನ್ಯರಲ್ಲಿ ನೆಮ್ಮದಿ, ಖುಷಿ ತರುವ

ವಿಚಾರವೆಂದೇ ಹೇಳಬಹುದು. ಭಾರತೀಯ ಚುನಾವಣಾ ಆಯೋಗವು ಶೇಷನ್‌ರ ಕಾಲದಲ್ಲಿ ಹೊಸ ಮುಖ ಪಡೆದಂತೆ. ಇಂದು ಜ್ಞಾನೇಶ್ ಕುಮಾರ್ ನೇತೃತ್ವದಲ್ಲಿ ಪಾರದರ್ಶಕತೆ–ಮಾಹಿತಿ ತಂತ್ರಜ್ಞಾನ–ನೈತಿಕತೆ ಎಂಬ ನಾಲ್ಕು ಆಧಾರಸ್ತಂಭಗಳ ಮೇಲೆ ಮತ್ತೊಮ್ಮೆ ಮರುನಿರ್ಮಾಣಗೊಳ್ಳುತ್ತಿದೆ. ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಕೇವಲ ಸಂವಿಧಾನದ ಆದೇಶವಲ್ಲ; ಅದು ಜನರ ಆಸೆಯೂ ಹೌದು. SIR ಮಾದರಿಯ ಧೈರ್ಯಶಾಲಿ ಕ್ರಮಗಳು ಈ ದಿಶೆಯಲ್ಲಿ ಭಾರತಕ್ಕೆ ಅಗತ್ಯವಾದ ಮಾರ್ಗಸೂಚಿಯಾಗಿದೆ.


**ಲೇಖಕರು:** ಗುರುರಾಜ್ ಗಂಟೆಹೊಳೆ

**ಆಧಾರ:** ವಿಶ್ವವಾಣಿ, ದಿನಾಂಕ:18.12.2025

# ಭಾಗ–10

# ಶ್ರದ್ಧಾಂಜಲಿ

## 1. ಕೆ. ನರಹರಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು



ಹಿರಿಯ ಸರಳ ಸಜ್ಜನ ರಾಜಕಾರಣಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಕೆ.ನರಹರಿ ಅವರು ದಿನಾಂಕ:08.10.2025ರಂದು ನಿಧನ ಹೊಂದಿರುತ್ತಾರೆ.

1932ರ ಮೇ 25ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ ಮತ್ತು ಬಿ.ಇ. ಪದವೀಧರರಾಗಿದ್ದು, ವೃತ್ತಿಯಲ್ಲಿ ಸಹಾಯಕ ಪ್ರಾಧ್ಯಪಕರಾಗಿದ್ದರು. ಶ್ರೀಯುತರು ಸುಮಾರು 24 ವರ್ಷಗಳ ಕಾಲ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾಗಿ, ಮತ್ತು ಸ್ಟುಡೆಂಟ್ಸ್ ವೆಲ್‌ಫೇರ್ ಆಫೀಸರ್ ಆಗಿ, ಹಾಸ್ಟೆಲ್ ಸಮಿತಿಯ ಸದಸ್ಯರಾಗಿ ಅನೇಕ ವರ್ಷಗಳ ಕಾಲ ಕಾಲೇಜಿನ ಉದ್ಯೋಗಿಗಳ ಕಲ್ಯಾಣ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 1984, 1990 ಮತ್ತು 1996ರಲ್ಲಿ ಸತತವಾಗಿ ಮೂರು ಬಾರಿ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಶಾಸಕರಾಗಿ ಸೇವೆ ಸಲ್ಲಿಸಿರುತ್ತಾರೆ. ತಮ್ಮ ವಾಸದ ಮನೆಯನ್ನು ಶಿಕ್ಷಣ ಸಂಸ್ಥೆಗೆ ಉಚಿತವಾಗಿ ನೀಡಿರುವುದು ಶ್ರೀಯುತರ ಶ್ರೇಷ್ಠ ದಾನಗುಣಕ್ಕೆ ಸಾಕ್ಷಿಯಾಗಿರುತ್ತದೆ.

ಶ್ರೀಯುತರು ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮುಖ್ಯಸ್ಥರಾಗಿ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ, ಭಾರತೀಯ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಅಸೋಸಿಯೇಷನ್ ಸಂಘಟನಾ ಕಾರ್ಯದರ್ಶಿಯಾಗಿ ವಿವಿಧ ಜವಾಬ್ದಾರಿಯನ್ನು ವಹಿಸಿದ್ದರು. ಶ್ರೀಯುತರು ಶಿಕ್ಷಣ ಕ್ಷೇತ್ರವಲ್ಲದೆ ಸಾಂಸ್ಕೃತಿಕ, ಸಮಾಜ ಸೇವೆ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಹೆಚ್ಚಿನ ಜ್ಞಾನ ಹೊಂದಿ ಬಹುಮುಖ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದರು.

## 2. ಶ್ರೀ ಹುಲ್ಲಪ್ಪ ಯಮನಪ್ಪ ಮೇಟಿ, ವಿಧಾನ ಸಭೆಯ ಮಾಜಿ ಸದಸ್ಯರು



ಹಿರಿಯ ರಾಜಕೀಯ ಧುರೀಣ ಶ್ರೀ ಹುಲ್ಲಪ್ಪ ಯಮನಪ್ಪ ಮೇಟಿ ಅವರು ದಿನಾಂಕ:04.11.2025 ರಂದು ನಿಧನ ಹೊಂದಿರುತ್ತಾರೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹುಲ್ಲಪ್ಪ ಯಮನಪ್ಪ ಮೇಟಿ ಅವರು ಬಾಗಲಕೋಟೆ ಜಿಲ್ಲೆಯ ತಿಮ್ಮಾಪುರ ಗ್ರಾಮದಲ್ಲಿ ದಿನಾಂಕ:09.10.1946ರಂದು ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಬಿಲ್‌ಕೆರೂರು ಮಂಡಲ ಪಂಚಾಯಿತಿ ಅಧ್ಯಕ್ಷರಾಗುವ ಮೂಲಕ ರಾಜಕೀಯ ಪ್ರವೇಶಿಸಿದ್ದರು. ಬಾಗಲಕೋಟೆ ತಾಲ್ಲೂಕು ಕೃಷಿ ಹುಟ್ಟುವಳಿ ಮಾರಾಟ ಸಮಿತಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಮತ್ತು ಎಂ.ಎಸ್.ಐ.ಎಲ್.ನ ಅಧ್ಯಕ್ಷರಾಗಿ ಡಿ.ಸಿ.ಸಿ ಬ್ಯಾಂಕ್ ಹಾಗೂ ಎ.ಪಿ.ಎಂ.ಸಿ.ಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1989ರಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 9ನೇ ವಿಧಾನಸಭೆಗೆ ಚುನಾಯಿತರಾಗಿದ್ದು ನಂತರ 10, 12ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರ್ ಆಯ್ಕೆಯಾಗಿದ್ದರು. 14ನೇ ವಿಧಾನಸಭೆಗೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 16ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರ್ ಆಯ್ಕೆಗೊಂಡಿದ್ದರು. ಅರಣ್ಯ ಸಚಿವರಾಗಿ ಹಾಗೂ ಅಬಕಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1996ರಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

## 3. ಶ್ರೀ ಶಿವಶರಣಪ್ಪಗೌಡ ಪಾಟೀಲ್, ವಿಧಾನ ಸಭೆಯ ಮಾಜಿ ಸದಸ್ಯರು



ರೈತರ ಸಮಸ್ಯೆಗಳ ಧ್ವನಿಯಾಗಿದ್ದ ಶ್ರೀ ಶಿವಶರಣಪ್ಪಗೌಡ ಪಾಟೀಲ್ ಅವರು ದಿನಾಂಕ:26.11.2025ರಂದು ನಿಧನ ಹೊಂದಿರುತ್ತಾರೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಿವಶರಣಪ್ಪಗೌಡ ಪಾಟೀಲ್ ಅವರು ಕೊಪ್ಪಳ ಜಿಲ್ಲೆಯ ಯಲಬುರ್ಗಾದ ಹುಣಸಿಹಾಳ್ ಗ್ರಾಮದಲ್ಲಿ ದಿನಾಂಕ:16.08.1948ರಂದು ಜನಿಸಿದ್ದರು. ಎಂ.ಎ ಸ್ನಾತಕೋತ್ತರ ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ವಿವಿಧ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಅವರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ, ತುಂಗಭದ್ರಾ ಅಣೆಕಟ್ಟು ಮಂಡಳಿ ಹಾಗೂ ಹಟ್ಟಿ ಚಿನ್ನದ ಗಣಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. 1999ರಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಿಂದ 11ನೇ ವಿಧಾನಸಭೆಗೆ ಚುನಾಯಿತರಾಗಿದ್ದರು.

## 4. ಆರ್.ವಿ. ಶ್ರೀ ದೇವರಾಜ್, ವಿಧಾನ ಸಭೆಯ ಮಾಜಿ ಸದಸ್ಯರು



ಹಿರಿಯ ರಾಜಕಾರಣಿ ಶ್ರೀ ಆರ್.ವಿ. ದೇವರಾಜ್‌ರವರು ದಿನಾಂಕ:01.12.2025ರಂದು ನಿಧನ ಹೊಂದಿರುತ್ತಾರೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್.ವಿ. ದೇವರಾಜ್ ಅವರು ದಿನಾಂಕ:03.12.1957ರಂದು ಬೆಂಗಳೂರಿನಲ್ಲಿ ಜನಿಸಿದ್ದರು. ಬಿ.ಎ ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. ಉತ್ತಮ ಸಂಘಟಕರಾಗಿದ್ದ ಅವರು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ 1989ರಲ್ಲಿ ಮೊದಲ ಬಾರಿಗೆ 9ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀಯುತರು ಅದೇ ಕ್ಷೇತ್ರದಿಂದ 11ನೇ ವಿಧಾನಸಭೆಗೆ ಪುನರ್ ಆಯ್ಕೆಯಾಗಿದ್ದರು. ನಂತರ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಿಂದ 14ನೇ ವಿಧಾನಸಭೆಗೆ ಆಯ್ಕೆಗೊಂಡಿದ್ದ ಅವರು 2004ರಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿಯೂ ಆಯ್ಕೆಯಾಗಿದ್ದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

## 5. ಶಾಮನೂರು ಶಿವಶಂಕರಪ್ಪ, ವಿಧಾನ ಸಭೆಯ ಮಾಜಿ ಸದಸ್ಯರು



ಹಿರಿಯ ರಾಜಕಾರಣಿ, ರಾಜಕೀಯ ಮುತ್ಸದ್ಧಿ, ದಾವಣಗೆರೆಯ ಜನಮುಖಿ, ಸಮಾಜಮುಖಿಯಾಗಿದ್ದ ಶ್ರೀ ಶಾಮನೂರು ಶಿವಶಂಕರಪ್ಪ ಅವರು ದಿನಾಂಕ:14.12.2025ರಂದು ನಿಧನ ಹೊಂದಿರುತ್ತಾರೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಶಾಮನೂರು ಶಿವಶಂಕರಪ್ಪ ಅವರು ದಿನಾಂಕ:16.06.1931ರಂದು ದಾವಣಗೆರೆಯಲ್ಲಿ ಜನಿಸಿದ್ದರು. ಮೂಲತ: ಉದ್ಯಮಿಯಾಗಿದ್ದ ಶ್ರೀಯುತರು 1969ರಲ್ಲಿ ದಾವಣಗೆರೆ ನಗರಸಭೆ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದ್ದರು. ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಯುತರು ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದು, ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ ಬಾಪೂಜಿ ವಿದ್ಯಾ ಸಂಸ್ಥೆಗಳು, ದಾವಣಗೆರೆಯ ಅಂಗವಿಕಲರ ಆಶಾ ಕಿರಣ ಟ್ರಸ್ಟ್, ಕ್ರಿಕೆಟ್ ಕ್ಲಬ್, ಸ್ಪೋರ್ಟ್ಸ್ ಕ್ಲಬ್ ಹಾಗೂ ಇನ್ನಿತರೆ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುವ ಮೂಲಕ ಸಮಾಜದ ಎಲ್ಲಾ ರಂಗಗಳಲ್ಲಿಯೂ ತಮ್ಮದೇ ಆದ ಛಾಪನ್ನು ಮೂಡಿಸಿದ್ದ ಶ್ರೀಯುತರು ಅಪರಿಮಿತ ಜೀವನೋತ್ಸಾಹ, ತಾವು ನಂಬಿದ ಜನರ ಬಗ್ಗೆ ಅಪಾರ ಕಾಳಜಿ ಮತ್ತು ಪ್ರೀತಿಯನ್ನು ಹೊಂದಿದ್ದರು.

ಲೋಕಾನುಭವಿ ಶ್ರೀ ಶಾಮನೂರು ಶಿವಶಂಕರಪ್ಪನವರು ಒಬ್ಬ ವ್ಯಕ್ತಿಯಾಗಿರದೆ ರಾಜಕಾರಣ, ಶಿಕ್ಷಣ, ಸಾಹಿತ್ಯ, ಆರೋಗ್ಯ, ಅಭಿವೃದ್ಧಿ, ಶಕ್ತಿ, ದಾನ-ಧರ್ಮ, ಅಭಿವೃದ್ಧಿ ಸೇರಿದಂತೆ ಎಲ್ಲಾ ಅಪೂರ್ವ ಗುಣಗಳ ಸಂಗಮವಾಗಿದ್ದರು. ದಾವಣಗೆರೆಯಲ್ಲಿ ಜವಳಿ ಗಿರಣಿಗಳ ಅವನತಿ ಉಂಟಾದಾಗ ಆ ಊರಿಗೆ ಒಂದು ಬ್ರಾಂಡ್ ಇಮೇಜ್ ತಂದುಕೊಡುವುದರಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅಪಾರ ದೈವ

ಭಕ್ತರಾಗಿದ್ದ ಶ್ರೀಯುತರು ನಾಡಿನ ಬಹುತೇಕ ದೇವಸ್ಥಾನಗಳ, ಗೋಪುರಗಳ ರಥಗಳ ನಿರ್ಮಾಣಕ್ಕೆ ಕೊಡುಗೆ ನೀಡಿದ್ದರು. ಯಾರೊಂದಿಗೂ ವೈರತ್ವ ಸಾಧಿಸದೆ ಎಲ್ಲರೊಂದಿಗೆ ಸ್ನೇಹದಿಂದ ಇರುತ್ತಿದ್ದ ಅವರು ಅಜಾತಶತ್ರು ಎನಿಸಿದ್ದರು. ಜಗತ್ತಿನಾದ್ಯಾಂತ ಕೊರೋನಾ ಸೋಂಕು ವ್ಯಾಪಕವಾಗಿ ಆವರಿಸಿದ್ದಾಗ ಜಿಲ್ಲೆಯ ಬಡಜನರಿಗೆ ಉಚಿತವಾಗಿ ಕೊರೋನಾ ಲಸಿಕೆ, ಆಹಾರ, ಔಷಧಿ ಹಂಚುವ ಮೂಲಕ ಸಾಮಾಜಿಕ ಕಳಕಳಿ ತೋರಿಸಿದ್ದರು.

1994ರಲ್ಲಿ ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಮೊದಲ ಬಾರಿಗೆ ಹತ್ತನೇ ವಿಧಾನಸಭೆ ಪ್ರವೇಶಿಸಿದ್ದ ಶ್ರೀಯುತರು 12ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರ್ ಆಯ್ಕೆಗೊಂಡಿದ್ದರು. ನಂತರ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ 13, 14, 15, 16ನೇ ವಿಧಾನಸಭೆಗೆ ಸತತವಾಗಿ ಆಯ್ಕೆಗೊಂಡಿದ್ದರು. 2013–16ರ ಅವಧಿಯಲ್ಲಿ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1998ರಲ್ಲಿ 12ನೇ ಲೋಕಸಭೆಯ ಸದಸ್ಯರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದ ಶ್ರೀಯುತರು ವಿದ್ಯಾಶ್ರೀ ಮತ್ತು ನಿತ್ಯ ಸೇವಾ ಯಜ್ಞಧಾರಿ, ಭಾರತ್ ಗೌರವ, ಶಿರೋಮಣಿ ವಿಕಾಸ್, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

************